ಗೌರಿ ಲಂಕೇಶ್

ಮೇ 14, 2008 ರೂ. 12/-

1 ನೇ
ಹಂತ
ಸಮೀಕ್ಷೆ

ಕಾಂಗ್ರೆಸ್ ಮುಂದೆ ದಳ, ಬಿಜೆಪಿ ಹಿಂದೆ

ರಂದ್ಲಾಜೆಗೆ
ಾದಿದೆ ದುರ್ಗತಿ

ೋಮಣ್ಣನಿಗೆ
ಜಿವಾಕ್

ೇಔಟ್ ನೋ ಡೌಟ್


ುಲಹಂಕದಲ್ಲಿ
ುಂಗಾರು ಮಳೆ

ಸಾದ್ ರೆಡ್ಡಿಯ
ಲತ್ತಿಗೆ ತಕ್ಕ ಶಾಸ್ತಿ?


ಟ್ಟಾ ಹೆಬ್ಬಾಳಕ್ಕೆ ಚಟ್ಟ!

ನಿವಾರ್ಯವಾದ
ೃಷ್ಣ ಭೈರೇಗೌಡ

ರಾಜ್ಯ ಗಡಿ ಬದಲಿಸಿದ ರೆಡ್ಡಿ!









ಉ.ಕ: ಬೆವರುತ್ತಿರುವ ಬಿಜೆಪಿ

ಜೆಪಿಗೆ 450 ಕೋಟಿ ಹಣದ ಹೊಳೆ!



ಚುನಾವಣಾ ಪ್ರಣಾಳಿಕೆಗಳು

ಎಲ್ಲಾ ಬುರುಡೆ ಇಲ್ಲಿ ಎಲ್ಲಾ ಬುರುಡೆ!

ಚಾರ್ವಾಕ

ಶಿವಸುಂದರ್

ಮೊದಲ ಹಂತದ ಚುನಾವಣೆಗೆ ಇನ್ನೇನು ಹತ್ತು ದಿನಗಳಿವೆ ಎನ್ನುವಾಗ ಪಕ್ಷಗಳೆಲ್ಲಾ ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಒಂದೊಂದಾಗಿ ಬಿಡುಗಡೆ ಮಾಡುತ್ತಿವೆ. ಜೆಡಿಎಸ್ ಅಂತೂ ಇನ್ನೂ ಅದರ ಗೋಜಿಗೆ ಹೋದಂತೆ ಕಾಣುವುದಿಲ್ಲ. ಬಿಜೆಪಿ ಪಕ್ಷ ಮೊದಲಿಗೆ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಅನಂತರ ಬಿಎಸ್ಪಿ ಎಸ್‌ಪಿ ಹಾಗೂ ಇತ್ತೀಚೆಗೆ ಕಾಂಗ್ರೆಸ್ ತನ್ನಯ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಆದರೆ ಈ ಎಲ್ಲಾ ಪ್ರಣಾಳಿಕೆಗಳನ್ನು ಹೋಲಿಸಿ ನೋಡಿದಲ್ಲಿ ಒಂದು ಮತ್ತೊಂದರ ಅಪ್ಪಟ ನಕಲಂತೆ ಕಾಣುವುದು ಮಾತ್ರವಲ್ಲದೆ ಪ್ರತಿಯೊಂದು ಪಕ್ಷಗಳು ಯಾವುದೇ ಎಗ್ಗು ಸಿಗ್ಗು ಇಲ್ಲದೆ ರೈಲು ಬಿಟ್ಟಿವೆ. ಹಾಗೆ ನೋಡಿದರೆ ಪಕ್ಷಗಳ ಪ್ರಣಾಳಿಕೆಯನ್ನು ನೋಡಿಕೊಂಡು ಓಟು ಕೊಡುವಷ್ಟು ನಮ್ಮ ಪ್ರಜಾಪ್ರಭುತ್ವ ಪ್ರಬುದ್ಧವಾಗಿಲ್ಲ. ಆದರೂ ಪಕ್ಷಗಳ ಪ್ರಣಾಳಿಕೆಗಳು ಕನಿಷ್ಠ ಪ್ರಾಮಾಣಿಕತೆಯನ್ನಾದರೂ ತೋರಿಸಬೇಕು ಎನ್ನುವ ಬದ್ಧತೆಯನ್ನೂ ಪಕ್ಷಗಳು ಇಟ್ಟುಕೊಂಡಿಲ್ಲವೆಂಬುದನ್ನಷ್ಟೇ ಈ ಪ್ರಣಾಳಿಕೆಗಳು ಸಾಬೀತು ಮಾಡುತ್ತಿವೆ.

ತಮ್ಮ ಪ್ರಣಾಳಿಕೆಗಳಲ್ಲಿ ಈ ಪಕ್ಷಗಳು ನೀಡಿರುವ ಭರವಸೆಗಳನ್ನು ಈಡೇರಿಸುತ್ತವೆಯೇ ಎಂಬ ಪ್ರಶ್ನೆಗೆ ಹೋಗುವ ಮೊದಲು ಈ ಪ್ರಣಾಳಿಕೆಗಳ ಹಿಂದೆ ಜನರ ಬಗ್ಗೆ ಪಕ್ಷಗಳಿಗಿರುವ ಧೋರಣೆ ಏನೆಂಬುದನ್ನು ನೋಡೋಣ. ಪ್ರಜೆಗಳೆ ಪ್ರಭುಗಳಾಗಿರಬೇಕಾದ ಪ್ರಜಾಸತ್ತೆಯಲ್ಲಿ ಈ ಎಲ್ಲಾ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಜನರೆಲ್ಲಾ ಭಿಕ್ಷುಕರೆಂಬ ಧೋರಣೆ ಪ್ರದರ್ಶಿಸಿವೆ. ಜನರು ತಮ್ಮ ಅಧಿಕಾರವನ್ನು ಚಲಾಯಿಸುವಂತೆ ಹೇಗೆ ಅವರನ್ನು ಸಬಲಗೊಳಿಸಬೇಕು ಎಂಬ ಬಗ್ಗೆ ಯಾವುದೇ ಪ್ರಣಾಳಿಕೆಯಲ್ಲೂ ಕಾರ್ಯಕ್ರಮವಿಲ್ಲ, ಬದಲಿಗೆ ಪ್ರತಿಯೊಂದು ಪಕ್ಷವೂ ಪೈಪೋಟಿಯಲ್ಲಿ ಉಚಿತವಾಗಿ ವಿದ್ಯುತ್, ಅಗ್ಗದ ಅಕ್ಕಿ, ಕಲರ್ ಟಿವಿ, ಶಾಲೆಗೆ ಬಂದರೆ ಕಾಸು..ಹೀಗೆ ಒಂದಕ್ಕಿಂತ ಒಂದು ಹೆಚ್ಚಿನ ಆಮಿಷಗಳನ್ನು ಒಡ್ಡಿ ಮತದಾರನ ಘನತೆಗೆ ಅಪಮಾನ ಮಾಡುತ್ತಿವೆ.

ಆಮಿಷಗಳನ್ನು ಒಡ್ಡುವ ರಾಜಕೀಯ ನೀತಿ ಮತದಾರನ ಬಗ್ಗೆ ಮಾತ್ರವಲ್ಲ ಪ್ರಜಾಪ್ರಭುತ್ವದ ಬಗ್ಗೆಯೇ ಈ ಪಕ್ಷಗಳಿಗೆ ಇರುವ ಧೋರಣೆಯನ್ನು ಸ್ಪಷ್ಟಪಡಿಸುತ್ತವೆ. ತಮ್ಮ ಕಾರ್ಯಕ್ರಮಗಳನ್ನು ಮತ್ತು ನೀತಿಗಳನ್ನು ಜನರ ಮುಂದಿಟ್ಟು ಮನವರಿಕೆ ಮಾಡಿಸಿ ಅವರ ಪ್ರಜ್ಞಾಪೂರ್ವಕ ಆಯ್ಕೆಯಾಗುವ ಪ್ರಕ್ರಿಯೆಯೇ ಈ ದೇಶದ ಅರವತ್ತು ವರ್ಷಗಳ ರಾಜಕಾರಣದಲ್ಲಿ ನಡೆದಿಲ್ಲ. ರಾಜಕೀಯ ಪಕ್ಷಗಳು ಆಮಿಷಗಳನ್ನು ಒಡ್ಡಿ ಮತವನ್ನು ಪಡೆಯುವ ಅಧಿಕಾರವೂ ಎಷ್ಟು ಭ್ರಷ್ಟವಾಗಿರುತ್ತದೆ ಎಂಬುದನ್ನು ನೋಡುತ್ತಲೇ ಇದ್ದೇವೆ. ಚುನಾವಣೆಯೆಂಬ ಪ್ರಜಾತಂತ್ರದ ಮೂಲ ಸಾಧನವೇ ಭ್ರಷ್ಟವಾಗಿರುವಾಗ ಈ ದೇಶದ ಪ್ರಜಾಸತ್ತೆ ಇನ್ನೆಷ್ಟು ಗಟ್ಟಿಯಾಗಿರುತ್ತದೆ?

ಸರಿ, ಆಮಿಷಗಳನ್ನು ಒಡ್ಡಿ ಇಡೀ ವ್ಯವಸ್ಥೆಯನ್ನೇ ಭ್ರಷ್ಟಗೊಳಿಸುವ ನೀತಿಯನ್ನು ಪಕ್ಕಕ್ಕಿಟ್ಟು ಅದರಲ್ಲಾದರೂ ಈ ಪಕ್ಷಗಳಿಗೆ ಪ್ರಾಮಾಣಿಕತೆ ಇದೆಯೇ ಎಂಬುದನ್ನು ನೋಡೋಣ. ಈ ಎಲ್ಲಾ ಪಕ್ಷಗಳು ಪ್ರಮುಖವಾಗಿ ನೀಡಿರುವ ಹಲವು ಭರವಸೆಗಳಲ್ಲಿ ಒಂದನ್ನು ಸ್ಯಾಂಪಲ್ಲಿಗೆ ಪರಿಶೀಲಿಸೋಣ.

ಪಡಿತರ ವ್ಯವಸ್ಥೆಯ ಬಗ್ಗೆ ಮತ್ತು ಅಗ್ಗದ ದರದಲ್ಲಿ ಅಕ್ಕಿ ನೀಡುವ ಬಗ್ಗೆ ಎಲ್ಲಾ ಪಕ್ಷಗಳು ಪೈಪೋಟಿಯಲ್ಲಿ ಭರವಸೆ ನೀಡಿವೆ. ಪ್ರತಿಯೊಂದು ಪಕ್ಷವೂ ಮತ್ತೊಂದು ಪಕ್ಷಕ್ಕಿಂತ ಕಡಿಮೆ ದರದಲ್ಲಿ ಅಕ್ಕಿ ಪೂರೈಸುವುದಾಗಿ ಭರವಸೆ ನೀಡಿದೆ. ಇದು ಸಾಧ್ಯವೇ? ಅಧಿಕಾರಕ್ಕೆ ಬಂದ ನಂತರ ಯಾವ ಪಕ್ಷವೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ, ಆದ್ದರಿಂದ ಇವೆಲ್ಲಾ ಪುಕ್ಕಟೆ ಭರವಸೆಗಳು ಎಂಬುದು ಜನರು ತಮ್ಮ ಅನುಭವದಿಂದ ಕಂಡುಕೊಂಡಿರುವ ಸತ್ಯ. ಆದರೆ ಪ್ರಶ್ನೆ ಅಷ್ಟು ಮಾತ್ರವಲ್ಲ, ತಾವು ಕೊಡಬೇಕೆಂದರೂ ಕೊಡಲು ಆಗದಂತ ನೀತಿಗಳನ್ನು ಇದೇ ಪಕ್ಷಗಳೇ ಜಾರಿಗೆ ತಂದಿವೆ. ಈಗ ಅದನ್ನು ಮರೆಮಾಚಿ ಸಾಧ್ಯವಾಗದ ಭರವಸೆಗಳನ್ನು ನೀಡುತ್ತಿವೆ.

ಎರಡು ರೂಪಾಯಿ ಕೆಜಿ ಅಕ್ಕಿಯ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಈಗ ಚಲಾವಣೆಯಲ್ಲಿರುವ 60 ಲಕ್ಷ ಪಡಿತರ ಕಾರ್ಡುಗಳಿಗೆ ತಿಂಗಳಿಗೆ 25 ಕೆಜಿ ಅಕ್ಕಿಯನ್ನು ಎರಡು ರೂಪಾಯಿ ದರದಲ್ಲಿ ನೀಡಲು ರಾಜ್ಯ ಸರ್ಕಾರಕ್ಕೆ ವರ್ಷಕ್ಕೆ ಏನಿಲ್ಲವೆಂದರೂ ಅಧಿಕವಾಗಿ 1,000 ಕೋಟಿಗಳಷ್ಟು ವೆಚ್ಚವಾಗುತ್ತದೆ. ಈಗ ಕೇಂದ್ರ ಸರ್ಕಾರವು ಪಡಿತರದ ಬಾಬತ್ತಿಗೆ ಇಡೀ ದೇಶಕ್ಕೆ ಅನ್ವಯವಾಗುವಂತೆ ವರ್ಷಕ್ಕೆ 36 ಸಾವಿರ ಕೋಟಿ ಸಬ್ಸಿಡಿ ನೀಡುತ್ತದೆ. ಅದು ಹಸಿರು ಕಾರ್ಡುಗಳಿಗೆ ಮಾತ್ರ. 60 ಲಕ್ಷ ಕಾರ್ಡುಗಳಿಗೆ ಅಲ್ಲ. ಅದರಂತೆ ಒಂದು ಕೆಜಿ ಬಡವರ ಅಕ್ಕಿಗೆ ಬೀಳುವ ವೆಚ್ಚ 15 ರೂಪಾಯಿ. ಆದರೆ ಅದರಲ್ಲಿ ಐದು ರೂಪಾಯಿಯನ್ನು ಕೇಂದ್ರ ಸರ್ಕಾರವೆ ಭರಿಸುತ್ತದೆ. ಹೀಗಾಗಿ ರಾಜ್ಯ ಸರ್ಕಾರಗಳು ಕೆಜಿಗೆ ಹತ್ತು ರೂ.ದರದಲ್ಲಿ ಕೇಂದ್ರದಿಂದ ಕೊಂಡುಕೊಳ್ಳುತ್ತವೆ. ಅದನ್ನು ರಾಜ್ಯಕ್ಕೆ ಸಾಗಾಟ ಮಾಡುವ ವೆಚ್ಚ ಗೋಡೌನ್ ವೆಚ್ಚ ಪಡಿತರ ಕೇಂದ್ರಗಳಿಗೆ ವಿತರಣೆ ಮಾಡುವ ವೆಚ್ಚ ಎಲ್ಲಾ ಸೇರಿ ಪ್ರತಿ ಕೆಜಿ ಅಕ್ಕಿಗೆ 11 ರೂ. ಆಗುತ್ತದೆ. ಆ ಅಕ್ಕಿಯನ್ನು ಈಗ ಕೊಡುತ್ತಿರುವಂತೆ ಕೊಡಲು ರಾಜ್ಯ ಸರ್ಕಾರವು ಈವರೆಗೆ ವಾರ್ಷಿಕ 300 ಕೋಟಿ ರೂ.ಗಳಷ್ಟು ಸಬ್ಸಿಡಿ ಕೊಡುತ್ತಿತ್ತು, ಇದು ಹಳೆಯ ಕಥೆ.

ಈಗ ವಾಸ್ತವವೇನೆಂದರೆ 1999 ರಲ್ಲಿ ಕರ್ನಾಟಕ ಸರ್ಕಾರ ವಿಶ್ವಬ್ಯಾಂಕಿನಿಂದ ಶರತ್ತಿನ ಸಾಲ ಪಡೆದ ಮೇಲೆ ಹಾಗೂ ಅದರ ಶರತ್ತಿನ ಅನುಸಾರ 2002ರ ಫೆಬ್ರವರಿಯಲ್ಲಿ **Karnataka Fiscal Responsibility Act-FRA** (ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯಿದೆ) ಯನ್ನು ಶಾಸನ ಸಭೆಯಲ್ಲಿ ಅನುಮೋದಿಸಿದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಅದು ಇದಕ್ಕೆ ಒಳಪಟ್ಟೆ ತನ್ನ ತೆರಿಗೆ ನೀತಿ, ಸಂಪನ್ಮೂಲ ಸಂಗ್ರಹಣೆ ಮತ್ತು ವೆಚ್ಚಗಳನ್ನು ರೂಪಿಸಿಕೊಳ್ಳಬೇಕು.

FRA ಎಂಬುದು ತಾನು ಸಾಲ ಕೊಡುವ ರಾಷ್ಟ್ರಗಳ ಆರ್ಥಿಕತೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲು ವಿಶ್ವದೆಲ್ಲೆಡೆ ವಿಶ್ವಬ್ಯಾಂಕ್ ಅನುಸರಿಸುತ್ತಿರುವ ಒಂದು ನವ ವಸಾಹತುಶಾಹಿ ತಂತ್ರ. ಇದಕ್ಕೆ ಮಣಿದೇ ಭಾರತ ಸರ್ಕಾರ ಸಹ 2002ರ ಫೆಬ್ರವರಿಯಲ್ಲಿ **FRBM (Fiscal Responsibility and Budget Management) Act-2002** ಅನ್ನು ಸಂಸತ್ತಿನಲ್ಲಿ ಪಾಸು ಮಾಡಿದೆ. ಅದನ್ನು ಅನುಸರಿಸಿಯೇ ಕರ್ನಾಟಕದ ಅಂದಿನ ಕೃಷ್ಣ ಸರ್ಕಾರ ತಾನು ಮಾದರಿ ರಾಜ್ಯ ಎಂದೆನಿಸಿಕೊಳ್ಳಲು ಅದೇ ರೀತಿಯ **FRA-Act -2002** ಅನ್ನು ಕರ್ನಾಟಕ ಶಾಸನಸಭೆಯಲ್ಲಿ ಪಾಸು ಮಾಡಿತು. ಈಗ ಕಡಿಮೆ ದರದಲ್ಲಿ ಅಕ್ಕಿ ಕೊಡುತ್ತೇವೆ ಎಂದು ಪುಕ್ಕಟೆ ಭರವಸೆ ನೀಡುತ್ತಿರುವ ಕಾಂಗ್ರೆಸ್, ಜನತಾದಳ, ಬಿಜೆಪಿ ಆದಿಯಾಗಿ ಎಲ್ಲಾ ಪಕ್ಷಗಳು ಪಕ್ಷಭೇದ ಮರೆತು ಈ ಶಾಸನಕ್ಕೆ ಓಟು ಹಾಕಿದ್ದವು.

ಈ ಕಾಯಿದೆ ಏನು ಹೇಳುತ್ತದೆ? ಈ ಕಾಯಿದೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ವಿತ್ತೀಯ ಕೊರತೆ ಹಾಗೂ ರೆವೆನ್ಯೂ ಕೊರತೆಯನ್ನು ಕಡಿಮೆ ಮಾಡಿಕೊಳ್ಳಲು ಈ ಕೆಳಕಂಡ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಲೇಬೇಕಿದೆ:

1. ತೆರಿಗೆ ವ್ಯಾಪ್ತಿಯಲ್ಲಿ ಮತ್ತು ಸಂಗ್ರಹಣದಲ್ಲಿ ಹೆಚ್ಚಳ.
2. ತೆರಿಗೆ ಪ್ರಮಾಣ ಹೆಚ್ಚಳ.
3. ತೆರಿಗೆಯೇತರ (ಬಳಕೆದಾರರ ಶುಲ್ಕ, ದರ ಇತ್ಯಾದಿ) ಆದಾಯದ ಹೆಚ್ಚಳ.
4. ಸರ್ಕಾರಿ ಉದ್ಯಮಗಳಿಗೆ ಬಜೆಟ್ ಬೆಂಬಲದ ಕಡಿತ ಮತ್ತು ವಿ.ಆರ್.ಎಸ್, ಖಾಸಗೀಕರಣ ಮತ್ತು ಮುಚ್ಚುವಿಕೆಗೆ ಉತ್ತೇಜನ
5. ವಿದ್ಯುತ್ತಿಗೆ ಕೊಡುತ್ತಿರುವ ಸಬ್ಸಿಡಿ ಹಿಂತೆಗೆತ ಮತ್ತು ವಿದ್ಯುತ್ ದರವನ್ನು ಉತ್ಪಾದನಾ ವೆಚ್ಚದೊಂದಿಗೆ ಸರಿದೂಗಿಸುವುದು.
6. ಉನ್ನತ ಶಿಕ್ಷಣಕ್ಕೆ, ಸರ್ಕಾರಿ ಆಸ್ಪತ್ರೆಗಳಿಗೆ, ನೀರು ಸರಬರಾಜಿಗೆ, ಇತರೆ ಮೂಲಭೂತ ಸೌಲಭ್ಯಗಳಿಗೆ ಕೊಡುತ್ತಿರುವ ಸಬ್ಸಿಡಿಗಳನ್ನು ಹಂತಹಂತವಾಗಿ ಹಿಂತೆಗೆದುಕೊಳ್ಳುವುದು ಮತ್ತು ಅನುದಾನ ಪಡೆಯುತ್ತಿರುವ ಶಿಕ್ಷಣಸಂಸ್ಥೆಗಳ ಅನುದಾನವನ್ನು ಹಿಂತೆಗೆದುಕೊಳ್ಳುವುದು.
7. ಪಡಿತರಕ್ಕೆ ಕೊಡುತ್ತಿರುವ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳುವುದು.
8. ಸರ್ಕಾರಿ ನೌಕರರಿಗೆ ವಿ.ಆರ್.ಎಸ್ ಸ್ಥಗಿತ, ಇತ್ಯಾದಿಗಳು.


ಈ ನೀತಿಯಿಂದಾಗಿಯೇ ಕೇಂದ್ರ ಸರ್ಕಾರ ಪಡಿತರಕ್ಕೆ ನೀಡುತ್ತಿದ್ದ ಸಬ್ಸಿಡಿಯಲ್ಲಿ ಶೇ.20 ರಷ್ಟು ಕಡಿಮೆ ಮಾಡಲಾಗಿದೆ. ಕರ್ನಾಟಕ ಸರ್ಕಾರವೂ ಸಹ ಅದೇ ರೀತಿ ಬಜೆಟ್ಟಿನಲ್ಲಿ ಈ ಬಾಬತ್ತಿಗೆ ತೆಗೆದಿಡುತ್ತಿದ್ದ ಹಣವನ್ನು ಕಡಿಮೆ ಮಾಡಿದೆ. ಆದ್ದರಿಂದಲೇ ಬಡವರ ಸಂಖ್ಯೆಯನ್ನು ಕೃತಕವಾಗಿ ಕಡಿಮೆಮಾಡಲಾಗುತ್ತಿದೆಯಲ್ಲದೆ, ಅವರಿಗೆ ನೀಡುತ್ತಿದ್ದ ಪಡಿತರ ಪ್ರಮಾಣವನ್ನು ನಿಜವಾಗಿಯೂ ಕಡಿಮೆ ಮಾಡುತ್ತಾ ಬರಲಾಗುತ್ತಿದೆ.

ಪಡಿತರ ಬಾಬತ್ತಿಗೆ ರಾಜ್ಯ ಸರ್ಕಾರ ಕೇವಲ 300 ಕೋಟಿ ಖರ್ಚು ಮಾಡಬೇಕಿದ್ದಾಗಲೇ ಈ ಪರಿಸ್ಥಿತಿ ಇರುವಾಗ ಒಂದು ಕೆಜಿ ಅಕ್ಕಿಯನ್ನು ಕೇವಲ ಎರಡು ರೂಪಾಯಿಗೆ ಕೊಡಬೇಕೆಂದರೆ ಒಂದು ಕೆಜಿಗೆ ರಾಜ್ಯ ಸರ್ಕಾರವೇ 10 ರಿಂದ 12 ರೂಪಾಯಿ ಸಬ್ಸಿಡಿ ನೀಡಬೇಕು. 60 ಲಕ್ಷ ಕಾರ್ಡುಗಳಿಗಾದರೆ ಈ ಬಾಬತ್ತಿನಲ್ಲಿ ಈಗ ವೆಚ್ಚ ಮಾಡುತ್ತಿರುವ ಹತ್ತು ಪಟ್ಟು -ಅಂದರೆ 3000 ಕೋಟಿ ರೂ. - ಹೆಚ್ಚು ಹಣವನ್ನು ಎತ್ತಿಡಬೇಕು.

ಆದರೆ ಮೇಲೆ ಹೇಳಿದ ಒಪ್ಪಂದವು ಸ್ಪಷ್ಟಪಡಿಸುವಂತೆ ಸರ್ಕಾರಿ ವೆಚ್ಚವನ್ನು - ಅದರಲ್ಲೂ ಪಡಿತರಕ್ಕೆ ಕೊಡುತ್ತಿರುವ ಸಬ್ಸಿಡಿಯನ್ನು - ಸರ್ಕಾರ ಹಿಂತೆಗೆದುಕೊಳ್ಳಬೇಕು. ಹಾಗಿದ್ದ ಮೇಲೆ ಈ ಪಕ್ಷಗಳು ಎರಡು ರೂಪಾಯಿಗೆ ಕೆಜಿ ಅಕ್ಕಿಯನ್ನು ಹೇಗೆ ಕೊಡಲು ಸಾಧ್ಯ? ಅದಕ್ಕೆ ಬೇಕಿರುವ ಸಂಪನ್ಮೂಲವನ್ನು ಎಲ್ಲಿಂದ ತರುತ್ತಾರೆ? ಇಂತಹ ಪ್ರಶ್ನೆಗಳ ಬಗ್ಗೆಯಾಗಲೀ, ಈ ಒಪ್ಪಂದದಿಂದ ಹೊರಬರುವ ಮಾತಾಗಲೀ ಯಾವ ಚುನಾವಣಾ ಪಕ್ಷಗಳ ಪ್ರಣಾಳಿಕೆಯಲ್ಲೂ ಇಲ್ಲ.

ಹಾಗಿದ್ದ ಮೇಲೆ ಎರಡು ರೂಪಾಯಿಗೆ ಕೆಜಿ ಅಕ್ಕಿಯೆಂಬ ಸಾಧ್ಯವಾಗದ ಭರವಸೆಗಳನ್ನು ಕೊಡುವ ಮೂಲಕ ಈ ಪಕ್ಷಗಳು ಜನರಿಗೆ ಬಹಿರಂಗವಾಗಿ ವಂಚನೆ ಮಾಡುತ್ತಿಲ್ಲವೇ? ಆದ್ದರಿಂದಲೇ ಈ ಬಾರಿ ಅಭ್ಯರ್ಥಿಗಳು ಮತ ಯಾಚಿಸುತ್ತಾ ಜನತೆಯ ಮನೆ ಬಾಗಿಲಿಗೆ ಬಂದಾಗ ಅವರ ಇಂತಹ ಟೊಳ್ಳು ಆಶ್ವಾಸನೆಗಳನ್ನು ನಂಬದೇ ಅವರ ಕೊರಳಪಟ್ಟಿ ಹಿಡಿದು ರಾಜ್ಯ ಸರಕಾರವು ವಿಶ್ವಬ್ಯಾಂಕ್ ಶರತ್ತಿನಿಂದ ಹೊರಬರುವಂತೆ ಮಾಡಬೇಕೆಂದು ಆಗ್ರಹಿಸಬೇಕು! ■

No Comments



"ರಾಜ್ಯದಲ್ಲಿ ನಡೆದಿರುವ ಗಣಿ ಹಗರಣವನ್ನು ಸಿಬಿಐಗೆ ಒಪ್ಪಿಸಿದರೆ ಮಾತ್ರ ಎಲ್ಲರ ನಿಜವಾದ ಬಣ್ಣ ಬಯಲಿಗೆ ಬೀಳುತ್ತದೆ."


-ಜಾಲಪ್ಪ

"ಧೈರ್ಯ ಇದ್ದರೆ ಕಾಂಗ್ರೆಸ್ಸಿನವರು ಖರ್ಗೆಯವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ."

-ಸಿಂಧ್ಯಾ

"ಹೊಸ ರೀತಿಯ ಬೆಳವಣಿಗೆಗೆ ಚರ್ಚೆ ಮತ್ತು ಸಂವಾದ ಪೂರಕ. ಆದರೆ ಅದರ ಬಗ್ಗೆ ನಿರಾಸಕ್ತಿ ಹೊಂದಿರುವವರು ವಾದ-ವಿವಾದಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾರೆ."

-ಎಚ್.ಎಸ್.ವೆಂಕಟೇಶಮೂರ್ತಿ



"ಶಿಕಾರಿಪುರದಲ್ಲಿ ಬಂಗಾರಪ್ಪನವರ ಸ್ಪರ್ಧೆಯಿಂದ ಅತ್ಯಂತ ಖುಷಿಯಾಗಿರುವವರು ಬಿಜೆಪಿಯ ಅನಂತಕುಮಾರ್. ಅವರು ಈಗ ಹ್ಯಾಪಿಯೆಸ್ಟ್ ಮ್ಯಾನ್."

-ಜನಾರ್ದನ ಪೂಜಾರಿ

"ಅಭ್ಯರ್ಥಿಗಳು ಕಳೆದ ಚುನಾವಣೆಯಲ್ಲಿ ಬಹಿರಂಗ ಪಡಿಸಿದ ಆಸ್ತಿಗೂ ಈಗ ನೀಡಿರುವ ಆಸ್ತಿ ವಿವರಕ್ಕೂ ತಾಳೆ ಹಾಕಿ ನೋಡಿದರೆ ಅವರ ಅಕ್ರಮ ಗಳಿಕೆ ಬಯಲಿಗೆ ಬರುತ್ತದೆ."

-ಸಂತೋಷ್ ಹೆಗಡೆ

"ದ್ರೌಪದಿಯ ಕಣ್ಣೀರು ಕೌರವರ ನಾಶಕ್ಕೆ ಕಾರಣವಾಯಿತು. ಶಕುಂತಲಾ ಶೆಟ್ಟಿಯ ಕಣ್ಣೀರು ಬಿಜೆಪಿ ನಾಶಕ್ಕೆ ಕಾರಣವಾಗುತ್ತದೆ."

-ಬೈಂದೂರು ಪ್ರಚಾರ ಸಭೆಯಲ್ಲಿ ಕೇಳಿಬಂದ ಮಾತು.

ನಂಬಿದ್ರೆನಂಬಿ ಬಿಟ್ರೆಬಿಡಿ

"ಅಧಿಕಾರಕ್ಕೆ ಬಂದ ನೂರು ದಿನಗಳಲ್ಲಿ ಎಲ್ಲರಿಗೂ ಬಿಪಿಎಲ್ ಕಾರ್ಡ್."
"ಕೃಷಿ ಪಂಪ್‌ಸೆಟ್‌ಗಳಿಗೆ ಹತ್ತು ಹೆಚ್‌ಪಿವರೆಗೆ ಉಚಿತ ವಿದ್ಯುತ್."
"ಎರಡು ರೂಪಾಯಿಗೆ ಕೆಜಿ ಅಕ್ಕಿ, ಶೇ.3ರ ಬಡ್ಡಿ ದರದಲ್ಲಿ ಸಾಲ."

-ಕಾಂಗ್ರೆಸ್ ಪ್ರಣಾಳಿಕೆ

"ಮೂರು ರುಪಾಯಿಗೆ ಕೆಜಿ ಅಕ್ಕಿ, ಉಚಿತ ವಿದ್ಯುತ್."
"ವರ್ಷಕ್ಕೆ ಆರವತ್ತು ಸಾವಿರ ವರಮಾನ ಇರುವವರನ್ನು ಬಡವರೆಂದೇ ಪರಿಗಣಿಸಿ ಪಡಿತರ."
"ಶೇ.3ರ ಬಡ್ಡಿ ದರದಲ್ಲಿ ರೈತರಿಗೆ ಸಾಲ."
"ಪ್ರತಿ ಹಳ್ಳಿಯಲ್ಲಿ ಸೈಬರ್ ಕಫೆ."

-ಬಿಜೆಪಿ ಪ್ರಣಾಳಿಕೆ

"ಶಾಲೆಗೆ ಹಾಜರಾಗುವ ಪ್ರತಿ ಹೆಣ್ಣು ಮಗುವಿಗೆ ದಿನಕ್ಕೆ ಹತ್ತು ರೂಪಾಯಿ."
"ಅಧಿಕಾರಕ್ಕೆ ಬಂದ ಕೂಡಲೇ ಎಲ್ಲಾ ಪಡಿತರ ಸಂಬಂಧಿ ಸಮಸ್ಯೆಗಳ ಪರಿಹಾರ."

-ಬಿಎಸ್‌ಪಿ ಪ್ರಣಾಳಿಕೆ

"ಎರಡು ರೂಪಾಯಿ ಕೆಜಿ ಅಕ್ಕಿ, ಉಚಿತ ವಿದ್ಯುತ್."
"ಕಲರ್ ಟಿವಿ..ಇತ್ಯಾದಿ."

-ಎಸ್.ಪಿ.ಪ್ರಣಾಳಿಕೆ

"ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದ ಸಾಲಮನ್ನಾ."
"ಉಚಿತ ವಿದ್ಯುತ್, ಅಗ್ಗದ ದರದಲ್ಲಿ ಅಕ್ಕಿ."

-ಜೆಡಿಎಸ್ ಭರವಸೆ

ಹೋದ ಬಾರಿಯೂ ಹೀಗೆ ಊಹಿಸಿದ್ದೀರಲ್ಲವೇ?

"ರಾಜ್ಯದಲ್ಲಿ ನಮಗೆ 114 ಸ್ಥಾನಗಳು ಬರಲಿವೆ ಎಂದು ನಾವು ಮೊದಲೇ ಊಹಿಸಿದ್ದೆವು."

-ಎಸ್.ಎಂ.ಕೃಷ್ಣ ಸಿಎನ್‌ಎನ್-ಐಬಿಎನ್ ಸಮೀಕ್ಷೆಯ ಕುರಿತು

ಒಂದು ಮುನಿಸಿನ ಬೆಲೆ!

"ತಮ್ಮ ಮೊಮ್ಮಗನಿಗೆ ಕಾಂಗ್ರೆಸ್ ಟಿಕೆಟ್ ಸಿಗದಿದ್ದಕ್ಕೆ ಮುನಿಸಿಕೊಂಡಿದ್ದ ಷರೀಫ್ ಅವರು ಸೌದಿ ರಾಯಭಾರಿಯಾಗಲು ಖುಷಿಯಿಂದ ಒಪ್ಪಿದ್ದಾರೆ."

-ಪತ್ರಿಕಾ ವರದಿ

ಇದ್ಯಾವ ಮತದಾರರ ಸನ್ನದು ಸ್ವಾಮಿ?

"ವಿಧಾನಸಭಾ ಕಲಾಪಗಳಿಗೆ ಅಡ್ಡಿಯುಂಟು ಮಾಡುವ ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಧರಣಿಗಳಲ್ಲಿ ಅಭ್ಯರ್ಥಿಗಳು ಭಾಗವಹಿಸಬಾರದು."

-ಕೆಲವು ಎನ್‌ಜಿಓಗಳು ಘೋಷಿಸಿರುವ ಮತದಾರರ ಸನ್ನದು

ಕೈ ಕೊಡುವುದನ್ನು ಬಿಡದೆ ಕೈ ಮುಗಿದರೇನು ಫಲ?

"ತಾವು ಯಾರಿಗೂ ಹೆದರುವುದಿಲ್ಲ ಎಂದು ಭಾವಿಸಿದ ರೆಡ್ಡಿಗಳಿಗೆ ಬಡವರಿಗೆ ಕೈ ಮುಗಿಯುವುದನ್ನು ಕಲಿಸಿದ್ದೇನೆ."

-ಅನಿಲ್ ಲಾಡ್

ರಾಮನ ವಿಗ್ರಹವನ್ನು ಕದ್ದವರ ಹೇಳಿಕೆಗೆ ಬೆಲೆ ಇದೆಯೇ?

"ಶ್ರೀ ರಾಮನ ಅಸ್ತಿತ್ವವನ್ನೇ ನಿರಾಕರಿಸಿ ಸುಪ್ರೀಂ ಕೋರ್ಟಿಗೆ ಪ್ರಮಾಣ ಪತ್ರ ಸಲ್ಲಿಸಿದ ಕಾಂಗ್ರೆಸ್ ಪಕ್ಷದ ಮೊಯಿಲಿ ನೀಡಿದ ಹೇಳಿಕೆಗೆ ಬೆಲೆಯಿಲ್ಲ"

-ಅನಂತ್‌ಕುಮಾರ್

ಮೀಸೆ ಮಣ್ಣಾದರೂ ಮೀಸೆ ತಿರುವವರು!

"ಕಳೆದ ಬಾರಿ ಚುನಾವಣೆ ಘೋಷಣೆಯಾದಾಗ ಜನ ಬರಗಾಲದಿಂದ ತತ್ತರಿಸಿದ್ದರು. ಒಂದು ವೇಳೆ ಚುನಾವಣೆ 6 ತಿಂಗಳು ಮುಂದೆ ಹೋಗಿದ್ದರೆ ನಾನೇ ಮುಖ್ಯಮಂತ್ರಿ ಕುರ್ಚಿಯಲ್ಲಿರುತ್ತಿದ್ದೆ."



-ಎಸ್.ಎಂ. ಕೃಷ್ಣ

ನೀತಿ ಸಂಹಿತೆಗೂ ವಾಕ್ ಸ್ವಾತಂತ್ರ್ಯಕ್ಕೂ ಏನು ಸಂಬಂಧ?




ಕಂಡಹಾಗೆ

■ ಗೌರಿ ಲಂಕೇಶ್

ಸುಷ್ಮಾ ಸ್ವರಾಜ್ ರೂಪದರ್ಶಿಯಾಗಿರುವ ಬಿಜೆಪಿಯ ...ಪಿ ಜಾಹೀರಾತೊಂದರಲ್ಲಿ ಕೇಂದ್ರ ಸರ್ಕಾರ ಮತ್ತು ...ಂಗ್ರೆಸ್ ಪಕ್ಷವನ್ನು ಟೀಕಿಸಿದ್ದ ಭಾಗಗಳ ಮೇಲೆ ಚುನಾವಣಾ ...ಯೋಗ ಕತ್ತರಿ ಪ್ರಯೋಗಿಸಿದ್ದರ ಬಗ್ಗೆ ಬಿಜೆಪಿಗಳು ಬೊಬ್ಬೆ ...ೊಡೆಯುತ್ತಿವೆ. ಇಂತಹ ಕ್ರಮ ಅಭಿವ್ಯಕ್ತಿ ಸ್ವಾತಂತ್ರ್ಯದ ...ಲ್ಲಂಘನೆಯೆಂದೂ, ಪ್ರಜಾತಂತ್ರ ನಿಯಮಕ್ಕೆ ...ಾರಿರವೆಂದೂ, ಚುನಾವಣಾ ಪ್ರಕ್ರಿಯೆಯಲ್ಲಿ ಮೂಲಭೂತ ...ಕ್ಕಿನ ನಿರಾಕರಣೆಯೆಂದೂ ವಾದಿಸುತ್ತಿದ್ದಾರೆ.

ಬಿಜೆಪಿಗಳ ಬಗ್ಗೆ ನನಗೆ ಸಾವಿರಾರು ಆಕ್ಷೇಪಣೆಗಳಿದ್ದರೂ ... ಒಂದು ಅಂಶದಲ್ಲಿ ಅವರೊಂದಿಗೆ ನನ್ನ ಸಹಮತವನ್ನು ...ಕ್ತಪಡಿಸಲು ಇಚ್ಛಿಸುತ್ತೇನೆ. ಇದು ನಮ್ಮ ಓದುಗರಲ್ಲೂ ...ತಃ ಬಿಜೆಪಿ ಪಕ್ಷದವರಲ್ಲೂ ಅಚ್ಚರಿ ಮೂಡಿಸುತ್ತದೆ ...ಂಬುದನ್ನು ಬಲ್ಲೆ. ಆದರೆ ಅದಕ್ಕೆ ಕಾರಣವನ್ನು ನೀಡುತ್ತೇನೆ. ...ಜೆಪಿಗಳಿಗೆ ನಿಜವಾಗಲೂ ...ಭಿವ್ಯಕ್ತಿ ಸ್ವಾತಂತ್ರ್ಯ ...ಜಾತಂತ್ರ ಮತ್ತು ...ೂಲಭೂತ ಹಕ್ಕುಗಳ ...ಗ್ಗೆ ನಂಬಿಕೆ ಇದ್ದರೆ, ನಾನು ...ೇಗೆ ಇಲ್ಲಿ ಅವರೊಂದಿಗೆ ...ಹಮತವನ್ನು ...ಕ್ತಪಡಿಸುತ್ತಿದ್ದೇನೋ ...ಾಗೆಯೇ ಅವರೂ ಕೂಡ ...ಮ್ಮ ಪ್ರಜಾಪ್ರಭುತ್ವಕ್ಕಾಗಿ ...ನರ ಒಕ್ಕೂಟ ...ದುರಿಸುತ್ತಿರುವ ಅಂತಹದ್ದೇ ...ಮಸ್ಯೆಯೊಂದಿಗೆ ತಮ್ಮ ...ನಿಗೂಡಿಸಬೇಕೆಂದು ...ಪೇಕ್ಷಿಸುತ್ತೇನೆ.

ಈಗ ಬಿಜೆಪಿಗಳೊಂದಿಗೆ ...ಥಮ ಬಾರಿಗೆ ...ಹಮತವನ್ನು ...ಕ್ತಪಡಿಸಿರುವುದಕ್ಕೆ ...ರಣವನ್ನು ನೀಡುತ್ತೇನೆ.



ಈಗಾಗಲೇ ನಿಮ್ಮೆಲ್ಲರಿಗೆ ಗೊತ್ತಿರುವಂತೆ ಜನದ್ರೋಹಿ ...ಾದ, ಕೋಮುವಾದಿಯಾದ, ಈ ರಾಜ್ಯದ ನಾಶಕ್ಕೆ ...ರಣವಾಗಲಿರುವ ಬಿಜೆಪಿಯನ್ನು ವಿರೋಧಿಸಲೆಂದೇ ... ನಾಡಿನ ಜಾತ್ಯತೀತ ಬರಹಗಾರರು, ರೈತ ಚಳವಳಿ, ...ಲಿತ ಚಳವಳಿಗಳು ಮತ್ತು ಇತರೆ ನೂರಾರು ಜನ ...ತ್ತು ಸಂಘಟನೆಗಳು ಜೊತೆಗೂಡಿ ಪ್ರಜಾಪ್ರಭುತ್ವಕ್ಕಾಗಿ ...ನರ ಒಕ್ಕೂಟವನ್ನು ರಚಿಸಿಕೊಂಡಿದ್ದೇವೆ.

ಈ ಒಕ್ಕೂಟವು ಜನಪರವಾದ ಜನರ ಪ್ರಣಾಳಿಕೆ ...ನ್ನು ಮತ್ತು ಬಿಜೆಪಿ ವಿರುದ್ಧದ ಕಾರ್ಯಚಟುವಟಿಕೆಗಳನ್ನು ...ಮ್ಮಿಕೊಂಡಿತ್ತು. ಬೀದಿ ನಾಟಕಗಳು, ಚರ್ಚಾ ಸಭೆಗಳು, ...ಹೀರಾತುಗಳು, ವಾಲ್ ರೈಟಿಂಗ್‌ಗಳು, ಕರಪತ್ರಗಳು ...ತ್ತು ಪೋಸ್ಟರ್‌ಗಳೂ ಆ ಕಾರ್ಯಾಚರಣೆಯ ...ಾಗಗಳಾಗಿದ್ದವು. ಇವೆಲ್ಲವುಗಳಿಗೆ ಚಾಲನೆ ನೀಡಲೆಂದು ...ಪ್ರಿಲ್ 19ರಂದು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ...ನರ ಪ್ರಣಾಳಿಕೆಯನ್ನು ಬಿಡುಗಡೆ ಮಾಡುವುದೆಂದು ...ರ್ಧರಿಸಲಾಗಿತ್ತು. ಆ ಬಿಡುಗಡೆ ಕಾರ್ಯಕ್ರಮದ ...ೋಸ್ಟರ್‌ಗಳಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸಿ ...ನತೆಯ ಪ್ರಣಾಳಿಕೆಯನ್ನು ಬೆಂಬಲಿಸಿ ಎಂಬ ಒಕ್ಕೂಟದ ಧ್ಯೇಯೋದ್ದೇಶದ ಸಾಲು ದೊಡ್ಡ ಅಕ್ಷರದಲ್ಲಿತ್ತು. ಪೋಸ್ಟರ್‌ಗಳನ್ನು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಒಕ್ಕೂಟದ ಸದಸ್ಯರು ಅಂಟಿಸಲು ಹೊರಟಾಗ ಸಮಸ್ಯೆ ಎದುರಾಯಿತು. ಪೋಸ್ಟರ್‌ಗಳನ್ನು ಅಂಟಿಸುತ್ತಿದ್ದ ಯುವಕರನ್ನು ಬಂಧಿಸಿದ ಪೊಲೀಸರು "ಇವುಗಳನ್ನು ಅಂಟಿಸಲು ಹಿರಿಯ ಅಧಿಕಾರಿಗಳಿಂದ ಅನುಮತಿ ಪಡೆಯಿರಿ"ಅಂದರು.

ಅದರಂತೆ ಒಕ್ಕೂಟವು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿಯಾಗಿ ಅನುಮತಿಯನ್ನು ಕೋರಿತು. ಆದರೆ ಅವರೆಲ್ಲಾ "ನಿಮ್ಮದು ರಾಜಕೀಯ ಪಕ್ಷ ಅಲ್ಲವಾದ್ದರಿಂದ ಇದನ್ನು ಹೇಗೆ ಬಗೆಹರಿಸುವುದೆಂದು ನಮಗೆ ಗೊತ್ತಿಲ್ಲ. ನೀವು ಚುನಾವಣಾ ಆಯೋಗವನ್ನೇ ಅನುಮತಿಗಾಗಿ ಸಂಪರ್ಕಿಸಿ"ಎಂದರು.

ಅವರ ಸಲಹೆಯಂತೆ ಒಕ್ಕೂಟದ ಪ್ರತಿನಿಧಿಗಳು ಬೆಂಗಳೂರಿನಲ್ಲಿನ ಚುನಾವಣಾ ಆಯೋಗದ ರಾಜ್ಯ ಮುಖ್ಯಸ್ಥ ವಿದ್ಯಾಶಂಕರ್ ಅವರನ್ನು ಭೇಟಿಯಾದರು. ಮೊದಮೊದಲು ಅವರೂ ಕೂಡ ಹಲವಾರು ಅಭ್ಯಂತರಗಳನ್ನು ವ್ಯಕ್ತಪಡಿಸಿದರೂ ನಮ್ಮ ಒಕ್ಕೂಟವೂ ರಾಜಕೀಯ ಪಕ್ಷವಾಗಿಲ್ಲವಾದ್ದರಿಂದ ನಾವು ಚುನಾವಣಾ ಆಯೋಗದ ನೀತಿ ಸಂಹಿತೆಗೆ ಒಳಪಡುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. "ಹಾಗಾದರೆ, ಹಾಗಂತ ಲಿಖಿತ ರೂಪದಲ್ಲಿ ನಮಗೆ ಪತ್ರ ಕೊಡಿ. ನಾವು ನಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಬೇಕಿದೆ" ಎಂದು ಒಕ್ಕೂಟದ ಪ್ರತಿನಿಧಿಗಳು ಕೇಳಿದಾಗ ವಿದ್ಯಾ ಶಂಕರ್‌ರವರು ಹಿಂದೇಟು ಹಾಕಿದರು. "ಹಾಗಂತ ಪತ್ರ ಕೊಡುವ ಅಧಿಕಾರ ನನಗಿಲ್ಲ. ನಾನು ರಾಜಕೀಯ ಪಕ್ಷಗಳಿಗೆ ಮಾತ್ರ ನೀತಿ ಸಂಹಿತೆಯನ್ನು ಕಡ್ಡಾಯಗೊಳಿಸಲು ಸಾಧ್ಯ. ನನ್ನ ಅಧಿಕಾರ ರಾಜಕೀಯೇತರ ಸಂಘಟನೆಗಳಿಗೆ ಅನ್ವಯಿಸುವುದಿಲ್ಲ"ಎಂದರು.

ಅತ್ತ ಪೊಲೀಸರಿಂದ ಕಿರುಕುಳ, ಇತ್ತ ಚುನಾವಣಾ ಆಯೋಗದಿಂದ ನಿರುತ್ತರ. ನಾವೇನು ಮಾಡಬೇಕು?

ಕೊನೆಗೆ ಈ ಸಮಸ್ಯೆ ಕೇಂದ್ರ ಚುನಾವಣಾ ಆಯೋಗದ ಮೆಟ್ಟಿಲನ್ನೂ ಏರಿತು. ತನಗೆ ಗೊತ್ತಿರುವ ಪ್ರಕಾರ ತಮ್ಮ ಸಂಘಟನೆ ಯಾವ ರಾಜಕೀಯ ಪಕ್ಷಕ್ಕೂ ಸೇರಿಲ್ಲವೆಂದೂ, ಈ ಸಂಘಟನೆಗೆ ರಾಜಕೀಯ ಆಕಾಂಕ್ಷೆಗಳೂ ಇಲ್ಲವೆಂದೂ ಬೆಂಗಳೂರಿನ ಅಧಿಕಾರಿಗಳು ದೆಹಲಿಯ ಅಧಿಕಾರಿಗಳಿಗೆ ತಿಳಿಸಿದರಲ್ಲದೆ, ಚುನಾವಣಾ ನೀತಿ ಸಂಹಿತೆ ಒಕ್ಕೂಟದಂತಹ ಸಂಘಟನೆಗಳಿಗೆ ಅನ್ವಯಿಸುವುದಿಲ್ಲವೆಂದೂ ಸ್ಪಷ್ಟಪಡಿಸಿದರು.

ಇದೆಲ್ಲಾ ನಡೆದು ಸುಮಾರು ಹದಿನೈದು ದಿನಗಳೇ ಕಳೆದಿವೆ. ಆದರೆ ಇದರ ಬಗ್ಗೆ ಕೇಂದ್ರ ಚುನಾವಣಾ ಆಯೋಗವು ಚರ್ಚೆ ನಡೆಸಲಿದೆಯೆಂದೂ ತನ್ನ ನಿರ್ಧಾರವನ್ನು ಕೂಡಲೇ ತಿಳಿಸುತ್ತದೆ ಎಂದೂ ಸಾಮಾನ್ಯವಾಗಿ ಎಲ್ಲಾ ಪ್ರಶ್ನೆಗಳಿಗೆ ಆಯೋಗವು 24 ಗಂಟೆಗಳಲ್ಲಿ ಉತ್ತರಿಸುತ್ತದೆ ಎಂದೂ, ನಮಗೆ ಇವತ್ತಿನವರೆಗೂ ಹೇಳುತ್ತಾ ಬರಲಾಗಿದೆಯೇ ಹೊರತು ಉತ್ತರ ಮಾತ್ರ ಇವತ್ತಿನವರೆಗೂ ಲಭ್ಯವಾಗಿಲ್ಲ. ಒಕ್ಕೂಟದ ಪ್ರತಿನಿಧಿಗಳು ಪ್ರತಿನಿತ್ಯ ವಿದ್ಯಾಶಂಕರ್‌ರವರನ್ನು ಭೇಟಿಯಾಗುತ್ತಿದ್ದು ಪ್ರತಿದಿನ ತನ್ನ ಕೈ ಚೆಲ್ಲುತ್ತಿರುವ ವಿದ್ಯಾಶಂಕರ್‌ರಿಂದ ಸಿಗುತ್ತಿರುವ ಸಮಜಾಯಿಷಿ "ಈ ವಿಷಯ ಕೇಂದ್ರ ಚುನಾವಣಾ ಆಯೋಗದ ಮುಂದಿರುವುದರಿಂದ ನಾವೇನೂ ಮಾಡಲು ಸಾಧ್ಯವಿಲ್ಲ. ದಿನಕ್ಕೆ ಎರಡು ಬಾರಿ ಅವರಿಗೆ ನಾನು ಫೋನಾಯಿಸುತ್ತಿದ್ದರೂ ಅವರಿಂದ ಉತ್ತರ ಬಂದಿಲ್ಲ."

ಈ ಎಲ್ಲ ಅಡಚಣೆಗಳ ನಡುವೆಯೂ ಒಕ್ಕೂಟವು ತನ್ನ ಜನರ ಪ್ರಣಾಳಿಕೆಯನ್ನು ನಿಗದಿತ ದಿನದಂದು ಬಿಡುಗಡೆಗೊಳಿಸಿತು. ಆದರೆ ಆನಂತರದ ಕರಪತ್ರ, ವಾಲ್‌ಪೋಸ್ಟರ್, ವಾಲ್ ರೈಟಿಂಗ್‌ನಂತಹ ಬಹುಜನರಿಗೆ ಸುಲಭವಾಗಿ ತಲುಪುವ ಕಾರ್ಯಕ್ರಮಗಳನ್ನು ಕಾರ್ಯಾಚರಣೆಗೆ ತರಲಾಗಿಲ್ಲ.

ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗಗಳ ಮುಂದೆ ನಾವು ಮಂಡಿಸಿರುವ ವಾದದ ತಿರುಳು ಇಷ್ಟೇ: ರಾಜಕೀಯ ಪಕ್ಷಗಳು ಅಧಿಕಾರದ ಲಾಲಸೆಗಾಗಿ ಆರೋಪ ಮತ್ತು ಪ್ರತ್ಯಾರೋಪಗಳಲ್ಲಿ ತೊಡಗಿರಬಹುದು. ಆದರೆ ಅಧಿಕಾರದ ಆಕಾಂಕ್ಷೆಯನ್ನು ಹೊಂದಿರದ ಒಕ್ಕೂಟ ರಾಜ್ಯದ ಒಳಿತಿಗಾಗಿ ಕಾರ್ಯಾಚರಣೆ ಮಾಡಲಿಚ್ಛಿಸಿದೆ ಮತ್ತು ಒಕ್ಕೂಟದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೀಗೆ ತಡೆಹಿಡಿಯುವುದು ಜನಸಾಮಾನ್ಯರ ಮೂಲಭೂತ ಹಕ್ಕುಗಳನ್ನು ದಮನ ಮಾಡುವುದಕ್ಕೆ ಸಮ.

ಹಣಬಲದಿಂದ ಮತಗಳನ್ನು ಖರೀದಿಸುವುದನ್ನು ತಡೆಯಲೆಂದೇ ಬಂದಿರುವ ಚುನಾವಣಾ ನೀತಿ ಸಂಹಿತೆ ಸ್ವಾಗತಾರ್ಹವೇ. ಆದರೆ ಜನರ ಮೂಲಭೂತ ಹಕ್ಕಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ.

ಬಿಜೆಪಿಗೆ ಕಾಂಗ್ರೆಸ್ ಪಕ್ಷವನ್ನು ಖಂಡಿಸುವ, ತರಾಟೆಗೆ ತೆಗೆದುಕೊಳ್ಳುವ ಸ್ವಾತಂತ್ರ್ಯ ಇರಲೇಬೇಕು. ಅದು ಪ್ರಜಾಪ್ರಭುತ್ವದ ಅಂಗ. ಹಾಗೆಯೇ ಬಿಜೆಪಿಯನ್ನು ಖಂಡಿಸುವ, ತರಾಟೆಗೆ ತೆಗೆದುಕೊಳ್ಳುವ ಹಕ್ಕು ಇತರೆ ರಾಜಕೀಯ ಪಕ್ಷಗಳಿಗೆ ಸಿಗುವಂತೆ ರಾಜಕೀಯೇತರ ಒಕ್ಕೂಟದಂತಹ ಸಂಘಟನೆಗಳಿಗೂ ಇರಬೇಕು. ಯಾಕೆಂದರೆ ನಿಜವಾದ ಪ್ರಜಾಪ್ರಭುತ್ವದಲ್ಲಿ ನಮ್ಮ ವೈರಿ ಹೇಳುವ ಮಾತುಗಳೊಂದಿಗೆ, ಆತನ ನಿಲುವುಗಳೊಂದಿಗೆ ನಮ್ಮ ಭಿನ್ನಾಭಿಪ್ರಾಯ ಏನೇ ಇದ್ದರೂ, ಅದನ್ನು ಹೇಳುವ ಹಕ್ಕು ನಮ್ಮ ವೈರಿಗೆ ಇದ್ದಾಗಲೇ ನಮಗೂ ಇರುತ್ತದೆ. ಅಷ್ಟೇ ಅಲ್ಲ, ಅಂತಹ ಅಭಿವ್ಯಕ್ತಿ ಸ್ವಾತಂತ್ರ್ಯ ಇದ್ದಾಗಲೇ ಜನರಲ್ಲಿ ಅರಿವು ಮೂಡಿ, ಬಲಿಷ್ಠವಾದ ಪ್ರಜಾತಂತ್ರ ವ್ಯವಸ್ಥೆ ಸ್ಥಾಪನೆಯಾಗಲು ಸಾಧ್ಯ.

ಕಾಂಗ್ರೆಸ್ ಪಕ್ಷವನ್ನಾಗಲಿ, ಎಡಪಂಥೀಯ ಪಕ್ಷಗಳನ್ನಾಗಲೀ, ನಮ್ಮ ಕೋಮು ಸೌಹಾರ್ದ ವೇದಿಕೆ ಮತ್ತು ಪ್ರಜಾಪ್ರಭುತ್ವಕ್ಕಾಗಿ ಜನರ ಒಕ್ಕೂಟವನ್ನಾಗಲೀ ಮುಕ್ತವಾಗಿ ಖಂಡಿಸುವ ಅವಕಾಶ ಬಿಜೆಪಿಗೆ ಸೇರಿದಂತೆ ಅದರ ಹಲವಾರು ಚೆಡ್ಡಿ ಸಂಘಟನೆಗಳಿಗೆ ಖಂಡಿತವಾಗಿಯೂ ಇರಲೇಬೇಕು. ಹಾಗೆಯೇ ಅವರ ಎಲ್ಲಾ ಸಂಘಟನೆಗಳನ್ನು ಟೀಕಿಸುವ, ವಿಮರ್ಶೆಗೆ ಒಳಪಡಿಸುವ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲರಿಗೂ ಇರಬೇಕು. ಅದು ನಿಜವಾದ ಪ್ರಜಾಪ್ರಭುತ್ವದ ಲಕ್ಷಣ.


ಮೊದಲೇ ಹೇಳಿದಂತೆ ಬಿಜೆಪಿ ಪಕ್ಷಕ್ಕೆ ವಾಕ್ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದಲ್ಲಿ ನಿಜವಾಗಲೂ ನಂಬಿಕೆ ಇದ್ದರೆ ಒಕ್ಕೂಟಕ್ಕೆ ಯಾವ ಅಡಚಣೆಯನ್ನೂ ಮಾಡಬಾರದೆಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಬೇಕು. ಯಾವ ಹಕ್ಕನ್ನು ಇವತ್ತು ತನಗಾಗಿ ಬಿಜೆಪಿ ಕೇಳುತ್ತಿದೆಯೋ ಅದೇ ಹಕ್ಕು ಈ ನಾಡಿನ ಜನರಿಗೂ ಇರಬೇಕೆಂದು ಒತ್ತಾಯಿಸಬೇಕು.

ಆದರೆ ಬಿಜೆಪಿ ಹಾಗೆ ಮಾಡುತ್ತದೆಂಬ ಭರವಸೆ ನನಗಿಲ್ಲ. ಯಾಕೆಂದರೆ ಬಿಜೆಪಿ ಮೂಲಭೂತವಾಗಿ ಪ್ರಜಾತಂತ್ರದ ವಿರೋಧಿ ಮಾತ್ರವಲ್ಲ, ಈಗಾಗಲೇ ಹಲವಾರು ಪ್ರಕರಣಗಳು ಸಾಬೀತುಪಡಿಸಿರುವಂತೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡಲು ಇಚ್ಛಿಸುತ್ತದೆ.

ಇದನ್ನೆಲ್ಲ ಇಲ್ಲಿ ಬರೆದಿದ್ದಕ್ಕೆ ಕಾರಣ ಬಿಜೆಪಿಗೆ ಜ್ಞಾನೋದಯವಾಗಿ ಜನಪರ ನಿಲುವನ್ನು ತೆಗೆದುಕೊಳ್ಳುತ್ತದೆ ಎಂಬ ಆಶಯದಿಂದಲ್ಲ. ಬದಲಾಗಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣಾ ಸಂದರ್ಭದಲ್ಲೂ ಹೇಗೆ ಸಾಮಾನ್ಯ ಜನರ ಮೂಲಭೂತ ಹಕ್ಕನ್ನು ನಿರಾಕರಿಸಲಾಗುತ್ತದೆ ಎಂದು ಎಲ್ಲರಿಗೂ ತಿಳಿಸಲು.

ಅಂದಹಾಗೆ ಈ ವಾರದ ಸಂಚಿಕೆಯ ಹಲವು ಪುಟಗಳಲ್ಲಿ ನಮ್ಮ ಒಕ್ಕೂಟವು ಪ್ರಕಟಿಸಲಿಚ್ಛಿಸಿದ್ದ ವಾಲ್‌ಪೋಸ್ಟರ್‌ಗಳನ್ನು ಚಿಕ್ಕದಾಗಿ ಪ್ರಕಟಿಸಿದ್ದೇವೆ. ಅವುಗಳಲ್ಲಿ ಬಿಜೆಪಿ ಪಕ್ಷವು ಹೇಗೆ ಹಿಂದುಳಿದ, ಲಿಂಗಾಯತರ, ಅಲ್ಪಸಂಖ್ಯಾತರ, ರೈತರ ವಿರೋಧಿ ಎಂದು ಸ್ಪಷ್ಟಪಡಿಸಲಾಗಿದೆ.

ಏನೇ ಅಡಚಣೆ ಬಂದರೂ ನಾವು ಕೋಮುವಾದಿಗಳ ವಿರುದ್ಧದ ನಮ್ಮ ಹೋರಾಟವನ್ನು ನಿಲ್ಲಿಸುವುದಿಲ್ಲ ಎಂಬುದಕ್ಕೆ ಇದೊಂದು ಸ್ಯಾಂಪಲ್. ■



ಕರ್ನಾಟಕದಲ್ಲಿ ಚುನಾವಣೆ ಘೋಷಣೆಯಾದಾಗಲಿಂದಲೂ ಬಿಜೆಪಿ ಪಕ್ಷ ತಾನು ಮೋದಿ ಮಾದರಿ ಆಡಳಿತವನ್ನು ಮತ್ತು ಗುಜರಾತ್ ಮಾದರಿ ಅಭಿವೃದ್ಧಿಯನ್ನು ನೀಡುವುದಾಗಿ ಘೋಷಿಸುತ್ತಿದೆ. ಹಾಗಿದ್ದಲ್ಲಿ ಈ ಗುಜರಾತ್ ಮಾದರಿ ಅಭಿವೃದ್ಧಿಯೆಂದರೇನು?

ಗುಜರಾತ್ ಮಾದರಿ ಅಭಿವೃದ್ಧಿಯೆಂದರೆ ನರಹತ್ಯೆ, ಹೆಚ್ಚುತ್ತಿರುವ ಅಸಮಾನತೆ, ಅಲ್ಪಸಂಖ್ಯಾತರ ಕೊಲೆ ಮತ್ತು ದಲಿತ ಶೂದ್ರರ ಮೇಲೆ ಹಲ್ಲೆ, ಮಹಿಳೆಯರ ಮೇಲೆ ಸತತ ಅತ್ಯಾಚಾರ, ರೈತರ ಆತ್ಮಹತ್ಯೆ ಮತ್ತು ಕಾರ್ಮಿಕರ ನರಕ ಎಂದು ಸಾಕ್ಷ್ಯಾಧಾರ ಮತ್ತು ದಾಖಲೆಗಳ ಸಮೇತ ವಿವರಿಸುವ ಕಿರು ಪುಸ್ತಿಕೆಯನ್ನು ಪ್ರಜಾಪ್ರಭುತ್ವಕ್ಕಾಗಿ ಜನರ ಒಕ್ಕೂಟ ಬಿಡುಗಡೆ ಮಾಡಿದೆ. ನೀವೂ ಓದಿ, ಇತರರಿಗೂ ಓದಿಸಿ...

ಪ್ರತಿಗಳಿಗಾಗಿ
ಸಂಪರ್ಕಿಸಿ
94482-56216

ಸೂಚಿತ ಕೊಡುಗೆ 10/-
ಪುಟ -32

ವಿಜಯ ಕರ್ನಾಟಕ ಹರಾಜಿಗಿಟ್ಟ ದುರುಳರು



ವಿಜಯ ಕರ್ನಾಟಕ ಪತ್ರಿಕೆಯ ಉಳಿದುಳಿದ ಮಾನವನ್ನು ಯಾರ್‍ಯಾರು ಎಷ್ಟೆಷ್ಟು ದುಡ್ಡಿಗೆ ಹರಾಜು ಹಾಕುತ್ತಿದ್ದಾರೆಂದು ಮಾಲೀಕರು ತನಿಖೆ ಮಾಡಿದರೆ ಒಳ್ಳೆಯದು.

ಮೊನ್ನೆ 3ನೇ ತಾರೀಖಿನ ವಿಕ ಸಂಚಿಕೆಯಲ್ಲಿ 'ಪದ್ಮನಾಭನಗರದಲ್ಲಿ ಜಯಭೇರಿಯತ್ತ ಆರ್. ಅಶೋಕ್' ಎಂಬ ಕಾಲುಪುಟದ ವಿಶೇಷ ವರದಿಯೊಂದು ಪ್ರಕಟವಾಯಿತು. ಆದರೆ ಮಾರನೇ ದಿನ ಮೇ 4ರಂದು ವಿಕದ 2ನೇ ಪುಟದ ಅಂಚಿನಲ್ಲಿ 'ಆ ವರದಿ ಅಭ್ಯರ್ಥಿ ನೀಡಿರುವ ಜಾಹೀರಾತು' ಎಂದು ಸ್ಪಷ್ಟನೆ ನೀಡಲಾಗಿದೆ. ಅಸಲಿ ತಮಾಷೆ ಏನೆಂದರೆ ಕಳೆದ 10 ದಿನಗಳಿಂದಲೂ ವಿಜಯ ಕರ್ನಾಟಕದಲ್ಲಿ ಅಶೋಕ್ ವಿರುದ್ಧ ಪ್ರತಿದಿನ ವರದಿಗಳು ಬರುತ್ತಿದ್ದವು. ನಂತರ ದಿಢೀರನೆ 'ಅಶೋಕ್ ಜಯಭೇರಿ'ಯೆಂತಲೂ ಮತ್ತೆ ಅದರ ಮಾರನೇ ದಿನವೇ 'ಅದು ವರದಿಯಲ್ಲ ಜಾಹೀರಾತು' ಎಂತಲೂ ಸ್ಪಷ್ಟನೆ ಬಂದಿದೆ.

ಆದರೆ ಸ್ಪಷ್ಟವಾಗಬೇಕಾದ ವಿಚಾರ ಯಾವುದೆಂದರೆ ಅಶೋಕ್ ಹತ್ತಿರ ಹಣ ಕಿತ್ತು ಈ ಪುಣ್ಯಕಾರ್ಯ ಮಾಡಿದ ವಿಜಯ ಕರ್ನಾಟಕದ ಪುಣ್ಯಾತ್ಮ ಯಾರು ಎಂಬುದು?

1 ನೇ ಹಂತದ ಚುನಾವಣೆ

ಕಾಂಗ್ರೆಸ್ ಮುಂದೆ ದಳ-ಬಿಜೆಪಿ ಹಿಂದೆ

ಮೇ 10 ರಂದು ಮತದಾನ ನಡೆಯಲಿರುವ 1 ನೇ ಹಂತದ 11 ಜಿಲ್ಲೆಗಳ ಒಟ್ಟು 89 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಹೆಚ್ಚು ಸ್ಥಾನ ಪಡೆಯುವ 2 ನೇ ಪಕ್ಷ ಜೆಡಿಎಸ್ ಅಥವಾ ಬಿಜೆಪಿ ಆಗಬಹುದು. ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ಬಿಜೆಪಿಗೆ ಸೆಣಸಾಡಬಲ್ಲ ಅಭ್ಯರ್ಥಿಗಳ ಕೊರತೆ ಇದೆ. ಮಂಡ್ಯ, ಮೈಸೂರು, ಹಾಸನ, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಚಿಕ್ಕಬಳ್ಳಾಪುರ ಏರಿಯಾದ ಅಂದಾಜು 30 ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದ್ದಾರೆ. ಇನ್ನು ಕೆಲವರು ಬೇರೆ ಪಕ್ಷದಲ್ಲಿ ಟಿಕೆಟ್ ಸಿಗಲಿಲ್ಲವೆಂದು ಮುನಿಸಿಕೊಂಡು ಬಿಜೆಪಿಗೆ ಬಂದಿರುವ ಅಭ್ಯರ್ಥಿಗಳು (ಸ್ಥಳಭಾವದ ಕಾರಣ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಸಮೀಕ್ಷಾ ವರದಿ ಪ್ರಕಟವಾಗಿಲ್ಲ)

ಜಾತ್ಯತೀತ ದಳದ ಕತೆ ಮುಗಿದೇ ಹೋಯಿತೆಂದು ಹೇಳುತ್ತಿದ್ದವರೆಲ್ಲಾ ಬೆರಗಾಗುವಂತೆ ದಕ್ಷಿಣ ಕರ್ನಾಟಕದಲ್ಲಿ ದಳ ಮತ್ತೆ ಚಿಗುರಿಕೊಂಡಿದೆ. ಜೆಡಿಎಸ್ ಬಹುತೇಕ ಬಿಜೆಪಿಗಿಂತ ಒಂದೆರಡು ಹೆಚ್ಚು ಸ್ಥಾನ ಗೆದ್ದರೂ ಅಚ್ಚರಿಯಿಲ್ಲ.

ಪಕ್ಷಗಳು ಗೆಲ್ಲಬಹುದಾದ ಸ್ಥಾನಗಳು

ಜಿಲ್ಲೆ	ಕ್ಷೇತ್ರ ಸಂಖ್ಯೆ	ಕಾಂಗ್ರೆಸ್	ಜೆಡಿಎಸ್	ಬಿಜೆಪಿ
ಚಾಮರಾಜನಗರ	4	2	-	2
ಮೈಸೂರು	11	5 ರಿಂದ 6	2	2 ರಿಂದ 4
ಮಡಿಕೇರಿ	2	1	-	1
ಮಂಡ್ಯ	7	2 ರಿಂದ 4	2 ರಿಂದ 4	1
ಹಾಸನ	7	3	4	-
ತುಮಕೂರು	11	5	4	2
ರಾಮನಗರ	4	2	2	-
ಬೆಂ. ಗ್ರಾಮಾಂತರ	4	3	1	-
ಕೋಲಾರ	6	3	2	1
ಚಿಕ್ಕಬಳ್ಳಾಪುರ	5	2	2	1
ಬೆಂ. ನಗರ	28	11	4	12
ಒಟ್ಟು	89	35-40	23-26	22-25

ಬೆಂಗಳೂರು

ಬೆಂಗಳೂರಿನ ಚುನಾವಣಾ ರಂಗದಲ್ಲಿ ಭೂ ಕಳ್ಳರು ಮತ್ತು ಗಣಿ ಧಣಿಗಳ ಆರ್ಭಟವೇ ಹೆಚ್ಚಾಗಿದೆ. ಆದರೆ ಬೆಂಗಳೂರಿನ ಒಳಿತಿಗಾಗಿ ಯಾರು ಗೆಲ್ಲಬಹುದೆಂದು ಮತ್ತು ಯಾರು ಗೆಲ್ಲಬೇಕೆಂದು ಇಲ್ಲಿ ವರದಿ ಮಾಡಲಾಗಿದೆ.

ಯಲಹಂಕದಲ್ಲಿ ಮುಂಗಾರು ಮಳೆ!



ಎಸ್.ಆರ್. ವಿಶ್ವನಾಥ್ ಆಲಿಯಾಸ್ ವಿಶ್ವನಾಥ್ ರೆಡ್ಡಿ ಎಂಬ ಭೂಗಳ್ಳನ ದೌಲತ್ತಿಗೆ ಯಲಹಂಕಕ್ಕೆ ಯಲಹಂಕವೇ ದಂಗುಬಡಿದಿದೆ. ಪ್ರತಿ ಕಾರ್ಯಕರ್ತನಿಗೂ ಒಂದೊಂದು ಕ್ವಾಲೀಸ್, ಮನೆಮನೆಗೂ ಕುಂಕುಮದ ಬೆಳ್ಳಿಬಟ್ಟಲು, ಜೊತೆಗೆ ತಲಾ ಮನೆಗೆ ಹತ್ತು ಸಾವಿರ ರೂಪಾಯಿ ಕ್ಯಾಷು. ಇದು ಯಲಹಂಕದ ಬಿಜೆಪಿ ಅಭ್ಯರ್ಥಿ ವಿಶ್ವನಾಥ್ ರೆಡ್ಡಿಯ ಓಟಿನ ಬೇಟೆಯ ಸ್ಟೈಲು!

ಜನ ಎಲ್ಲಿ ತನ್ನನ್ನು ಭೂಗಳ್ಳನೆಂದು ಅಸಹ್ಯ ಪಡುತ್ತಾರೋ ಎಂಬ ದಿಗಿಲಿಗೆ ಬಿದ್ದೇ ತನ್ನ ಹೆಸರಿನ ಜೊತೆಗಿದ್ದ ಜಾತಿ ಸೂಚಕವನ್ನು ಮುಚ್ಚಿಟ್ಟು ಐದು ಕೋಟಿ ಕೊಟ್ಟು ಬಿಜೆಪಿ ಟಿಕೆಟ್ ಖರೀದಿಸಿದ ವಿಶ್ವನಾಥ್ ಈ ಹಿಂದೆ ಎಚ್‌ಎಎಲ್ ಹೌಸಿಂಗ್ ಸೊಸೈಟಿಗೆ ಡೈರೆಕ್ಟರ್ ಆಗಿದ್ದು ದೋಚಿದ ದುಡ್ಡೇ 250 ಕೋಟಿಗೂ ಅಧಿಕ.

1991 ರಲ್ಲಿ ಎಚ್‌ಎಎಲ್ ಸೊಸೈಟಿಗೆ ಗೆದ್ದು ಡೈರೆಕ್ಟರ್ ಆದ ವಿಶ್ವನಾಥ್ ಈತನಕ ಮೂರು ಸಾವಿರ ಸದಸ್ಯರಿಗೆ ಸೈಟನ್ನೇ ಕೊಟ್ಟಿಲ್ಲ. ಹಾಗಂಥ ಸೊಸೈಟಿಯ ಹೆಸರಲ್ಲಿ ಜಮೀನಿರಲಿಲ್ಲವೆಂದಲ್ಲ, ಹೊಸೂರು ರಸ್ತೆಯ ಕೂಡ್ಲು-ಸಿಂಗಸಂದ್ರದ ಬಳಿ 374 ಎಕರೆಗಳಷ್ಟು ವಿಶಾಲ ಭೂಮಿಯೇ ಇತ್ತು. ಪ್ರತಿ ಸೈಟಿಗೆಂದು 5 ರಿಂದ 10 ಲಕ್ಷದಷ್ಟು ದುಡ್ಡನ್ನೂ ಕಟ್ಟಿಸಿಕೊಂಡ. ಆದರೆ ಬೆಲೆ ಬಾಳುವ ಸೈಟುಗಳನ್ನೆಲ್ಲ ಸದಸ್ಯರೇ ಅಲ್ಲದ ಶ್ರೀಮಂತರಿಗೆ ದುಬಾರಿ ರೇಟಿಗೆ ಮಾರಿಕೊಂಡ. ದುಡ್ಡು ಕಟ್ಟಿದವರೆಲ್ಲ ಗಲಾಟೆಗೆ ನಿಂತಿದ್ದೇ ತಲೆ ಓಡಿಸಿದ ವಿಶ್ವನಾಥ್ ಪಾರ್ಕು, ಆಟದ ಮೈದಾನ, ದೇವಸ್ಥಾನಕ್ಕೆಂದು ಮೀಸಲಾಗಿಟ್ಟಿದ್ದ ಸೀಎ ಸೈಟುಗಳಿಗೇ ಬೋಗಸ್ ದಾಖಲೆ ಸೃಷ್ಟಿಸಿ ಐನೂರು ಮಂದಿಗೆ ರಿಜಿಸ್ಟರ್ ಮಾಡಿಕೊಟ್ಟ. ಇದು ಬಿಡಿಎ ಅಧಿಕಾರಿಗಳಿಗೆ ಗೊತ್ತಾಗಿದ್ದೇ ನಕ್ಷೆ ಮಂಜೂರಾತಿಯನ್ನು ತಡೆಹಿಡಿದಿದ್ದಾರೆ. ಇನ್ನೆಲ್ಲಿ ಜನ ತನ್ನನ್ನು ನಡುರಸ್ತೆಯಲ್ಲಿ ಹೊಡೆಯುತ್ತಾರೋ ಎಂದು ಹೆದರಿದ ವಿಶ್ವನಾಥ್ ರೆಡ್ಡಿ ಈ ಬಾರಿ ಇನ್ನೊಂದು ಸ್ಕೆಚ್ ಹಾಕಿದ. ಸಿಂಗಸಂದ್ರದ ಕೆರೆ ಭೂಮಿ, ಕೂಡ್ಲು ಕೆರೆಯ ಜಮೀನು, ಹೆದ್ದಾರಿಗೆಂದು ಮೀಸಲಿಟ್ಟ ಸರ್ಕಾರಿ ಭೂಮಿಯನ್ನೇ ಕಬಳಿಸಿ ಅದಕ್ಕೇ ಬೋಗಸ್ ದಾಖಲೆ ಸೃಷ್ಟಿಸಿ ಮಾರಿಕೊಂಡ.


ಇದೇ ಎಚ್‌ಎಎಲ್ ಹೌಸಿಂಗ್ ಸೊಸೈಟಿಗೆಂದು ಮಾರತ್‌ಹಳ್ಳಿಯ ಕುಂದಲಹಳ್ಳಿಯಲ್ಲಿ ಒಟ್ಟು 130 ಎಕರೆ ಜಮೀನಿತ್ತು. ಈ ಪೈಕಿ ಮೂರುವರೆ ಎಕರೆ ಪಾರ್ಕ್ ಮತ್ತು ಆಟದ ಮೈದಾನಕ್ಕೆಂದು ಮೀಸಲಾಗಿತ್ತು. ವಿಶ್ವನಾಥ್ ಅದನ್ನೂ ಭೂ ಖದೀಮರಿಗೆ ಮಾರಿ ಹಾಕಿದ. ವಿಶ್ವನಾಥ್ ಮತ್ತು ಆತನ ಗ್ಯಾಂಗ್‌ನ ಭೂಕಬಳಿಕೆಯ ವಿರುದ್ಧ ಸರ್ಕಾರಿ ಅಧಿಕಾರಿಗಳೇ ಕೇಸು ಹಾಕಿದ್ದಾರೆ. ಎಚ್‌ಎಎಲ್ ಸೊಸೈಟಿಯನ್ನೇ ಸೂಪರ್‌ಸೀಡ್ ಮಾಡಿದ ಸರ್ಕಾರ ವಿಶ್ವನಾಥ್‌ನನ್ನು ಅಪರಾಧಿಯನ್ನಾಗಿ ಸೂಚಿಸಿದೆ.

ತನ್ನನ್ನು ಗೆಲ್ಲಿಸಿ ಬೆಳೆಸಿದ ಎಚ್‌ಎಎಲ್ ಕಾರ್ಮಿಕರನ್ನೇ ಬೀದಿಪಾಲು ಮಾಡಿ, ಕೊನೆಕೊನೆಗೆ ಊಟ ತಿಂಡಿಗೂ ಕಾರ್ಮಿಕರು ಪರದಾಡುವಂತೆ ಮಾಡಿದ ವಿಶ್ವನಾಥ್ ಅದ್ಯಾವ ಮುಖ ಹೊತ್ತು ಬಿಜೆಪಿಗೆ ಓಟು ಕೇಳುತ್ತಾನೊ!

ಸದ್ಯ ಈತನ ವಿರುದ್ಧ ಜೆಡಿಎಸ್ ಅಭ್ಯರ್ಥಿಯಾಗಿರುವವರು 'ಮುಂಗಾರು ಮಳೆ' ನಿರ್ಮಾಪಕ ಅಡಕಮಾರನಹಳ್ಳಿ ಕೃಷ್ಣಪ್ಪ. ವಿಶ್ವನಾಥ್‌ನ ಪಾಪದ ದುಡ್ಡಿನ ಮುಂದೆ ಕೃಷ್ಣಪ್ಪ ಮಾತ್ರವಲ್ಲ ಯಲಹಂಕವೇ ಥಂಡಾ ಹೊಡೆದಿದೆ. ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಚಂದ್ರಪ್ಪ ಕೂಡ ಬಿಜೆಪಿಯ ರೆಡ್ಡಿಯಂತೆ ಭೂಡಕಾಯಿತ. ಇಬ್ಬರಲ್ಲಿ ಯಾರೇ ಗೆದ್ದರೂ ಯಲಹಂಕಕ್ಕೆ ಕಂಟಕ.


ಕೃಷ್ಣಪ್ಪರ ಮುಂಗಾರು ಮಳೆ ಬಿದ್ದರಷ್ಟೇ ಯಲಹಂಕಕ್ಕೆ ಮುಕ್ತಿ!





ಚುನಾವಣೆ 2008

ಬಿಟಿಎಂ ಲೇಔಟ್: ಪ್ರಸಾದ್ ರೆಡ್ಡಿಯ ದೌಲತ್ತಿಗೆ ತಕ್ಕ ಶಾಸ್ತಿ?



ಓಟಿಗಾಗಿ ನೋಟು, ಮೂಗು ಬೊಟ್ಟು, ವಾಚು, ಟೀವಿ ಕೊಡುವುದನ್ನು ಕೇಳಿದ್ದೇವೆ. ಆದರೆ ಬಿಟಿಎಂ ಲೇಔಟಿನ ಬಿಜೆಪಿ ಅಭ್ಯರ್ಥಿ ಪ್ರಸಾದ್ ರೆಡ್ಡಿ ಸೈಟು ಕೊಡುತ್ತಾನಂತೆ!

ಬಿಟಿಎಂ ಲೇಔಟಿನಲ್ಲಿ ಕಾಂಗ್ರೆಸ್ಸಿನ ರಾಮಲಿಂಗಾರೆಡ್ಡಿಯವರನ್ನು ಸುಲಭಕ್ಕೆ ಮಣಿಸಲಾಗದು ಎಂಬುದು ಪ್ರಸಾದ್ ರೆಡ್ಡಿಗೆ ಚೆನ್ನಾಗಿ ಗೊತ್ತು. ಇಲ್ಲಿ ಜೆಡಿಎಸ್ ಅಭ್ಯರ್ಥಿ ಆಡುಗೋಡಿ ಮೋಹನ್ ನಿನ್ನೆಮೊನ್ನೆಯ ತನಕ ರಾಮಲಿಂಗಾರೆಡ್ಡಿಯವರ ಬಂಟನಂತಿದ್ದ. ಈಗ ನಾಮಕಾವಸ್ತೆಗಷ್ಟೇ ಆತ ಜೆಡಿಎಸ್ ಅಭ್ಯರ್ಥಿ!

ಆದರೆ ಪ್ರಸಾದ್ ರೆಡ್ಡಿಗೆ ವಿಪರೀತ ಬ್ಲಾಕ್ ಮನಿಯಿದೆ. ಜೊತೆಗೆ ಗಣಿ ಖದೀಮ ಜನಾರ್ದನ್ ರೆಡ್ಡಿಯೇ ಈತನನ್ನು ಎತ್ತಿ ಕಟ್ಟಿದ್ದಾನೆ. ರೊಕ್ಕ ಎಸೆದಾಕ್ಷಣ ಜನ ಬಿಕಾರಿಗಳಂತೆ ಓಟು ಕೊಡುತ್ತಾರೆಂಬುದು ಪ್ರಸಾದ್ ರೆಡ್ಡಿಯ ನಂಬಿಕೆ. ಎಲ್ಲೆಲ್ಲಿಂದಲೋ ಬಾಡಿಗೆ ಬಂಟರನ್ನು ಕರೆಸಿಕೊಂಡು ಅವರ ಜೊತೆಗೇ ಏರಿಯಾ ಸುತ್ತುತ್ತಾನೆ. ಇವರ್ಯಾರೂ ಸ್ಥಳೀಯರಲ್ಲ, ಅಸಲಿಗೆ ಬಿಟಿಎಂ ಲೇಔಟಿನ ಮತದಾರರೇ ಅಲ್ಲ. ಇನ್ನೂ ತಮಾಷೆಯೆಂದರೆ ಓಟು ಕೇಳುತ್ತಲೇ ಯಾರಾದರೂ ಪಡ್ಡೆ ಹುಡುಗರು ಸಿಕ್ಕರೆಂದರೆ ಅವರಿಗೆ ಬಿಜೆಪಿ ಚಿಹ್ನೆಯ ಟೋಕನ್ ಕೊಡುತ್ತಾನೆ.

ಕಮಲದ ಮಾರ್ಕಿನ ಅಂಥ ಟೋಕನನ್ನು ಪ್ರಸಾದ್ ರೆಡ್ಡಿ ಒಡೆತನದ ಯಾವುದೇ ಬಾರು ವೈನ್‌ಸ್ಟೋರಿಗೆ ಕೊಟ್ಟರೂ ಕುಡಿದಷ್ಟೂ ಎಣ್ಣೆ, ಕಡಿದಷ್ಟೂ ಚಿಕನ್ನು!

ಪ್ರತಿ ರಾತ್ರಿ ಚಿಕ್ಕಚಿಕ್ಕ ಹುಡುಗರೆಲ್ಲ ಸೇರಿ ಯಾವುದೇ ವೈನ್ ಸ್ಟೋರಿನಲ್ಲಿ ಕುಡಿಯುತ್ತಿದ್ದರೇ ಅದು ಬಿಜೆಪಿಯದೇ ಕಾಣಿಕೆ. ಈ ಪ್ರಸಾದ್ ರೆಡ್ಡಿ ಮೂಲತಃ ಲಿಕ್ಕರ್ ಕುಳ. ಲಕ್ಕಸಂದ್ರ, ಮಡಿವಾಳ, ಬೊಮ್ಮನಹಳ್ಳಿ, ಕೋರಮಂಗಲಗಳ ತುಂಬೆಲ್ಲ ಈತನದೇ ಲಾರ್ಡ್ಸ್ ಗ್ರೂಪ್ ಹೆಸರಿನ ಬಾರು ವೈನ್ ಸ್ಟೋರ್‌ಗಳಿವೆ. ನೀರಿಗೆ ಬಣ್ಣ ಬೆರೆಸಿ, ಕಲಬೆರಕೆ ವಿಸ್ಕಿಗೆ ಲೇಬಲ್ ಅಂಟಿಸಿಯೇ ಕುಬೇರನಾದ ರೆಡ್ಡಿ ಕ್ರಮೇಣ ಭೂಕೊಳ್ಳೆಗೆ ಕೈಯಿಟ್ಟ. ಹೊಸೂರು ರಸ್ತೆಯುದ್ದಕ್ಕೂ ಸರ್ಕಾರಿ ಭೂಮಿ ದೋಚಿದ. ಅದೇ ದುಡ್ಡಲ್ಲಿ ಬಿಜೆಪಿ ಟಿಕೆಟ್ ಖರೀದಿಸಿ, ತನ್ನ ಭೂಕಬಳಿಕೆ ಮತ್ತು ಥರ್ಡ್ಸ್ ದಂಧೆಯನ್ನು ಪೋಷಿಸುವುದಕ್ಕಷ್ಟೇ ಈತನ ಎಮ್ಮೆಲ್ಲೇಗಿರಿಯ ಉದ್ದೇಶ.

ಈಗಾಗಲೇ ಮೂವತ್ತು ಸಾವಿರದಷ್ಟು ಮೂಗುತಿ ಹಂಚಿದ್ದಾನೆ, ತನಗೆ ದುಡಿದವರಿಗೆಂದು ತಲಾ ಒಂದೊಂದು ಸೈಟು ಕೊಡುತ್ತಾನಂತೆ. ಅದಕ್ಕೆಂದು ತಾನು ಖರೀದಿಸಿದ ಐವತ್ತೆಕರೆಯ ದಾಖಲೆಯನ್ನೂ ತೋರಿಸುತ್ತಾನೆ. ಆದರೆ ಸೈಟು ರಿಜಿಸ್ಟರ್ ಮಾಡಿಸುವುದು ಮಾತ್ರ ಚುನಾವಣೆಯ ನಂತರವೇ ಅಂತೆ. ಅದ್ಯಾಕೆ ಈಗಲೇ ರಿಜಿಸ್ಟರ್ ಮಾಡಿಸಿಕೊಡಬಹುದಲ್ಲ? ಅಂತ ಯಾರಾದರೂ ಕೇಳಿಬಿಟ್ಟರೆ ಪ್ರಸಾದ್ ರೆಡ್ಡಿ ಮಿಂಚಿನ ವೇಗದಲ್ಲಿ ನಾಪತ್ತೆಯಾಗುತ್ತಾನೆ.

ನೆಲ ದೋಚಿಯೇ ರಾಜಕೀಯಕ್ಕೆ ಬಂದವನು ಇನ್ನಷ್ಟು ನೆಲ ದೋಚುತ್ತಾನೆಯೇ ಹೊರತು ಜನಕ್ಕೆಲ್ಲಿ ಸೈಟು ಕೊಡುತ್ತಾನೆ? ಪ್ರಸಾದ್ ರೆಡ್ಡಿಯ ಇಂಥ ದುರ್ಬುದ್ಧಿಗೆ ಸದ್ಯ ಅಲ್ಲಿನ ಜನರೇ ತಿರುಗೇಟು ಕೊಟ್ಟಿದ್ದಾರೆ. ಈತನ ಜೊತೆಗಿದ್ದ ಅಳಿದುಳಿದ ಲೋಕಲ್ ಕಾರ್ಯಕರ್ತರೂ ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿಯನ್ನು ಬೆಂಬಲಿಸುತ್ತಿದ್ದಾರೆ.

ರೊಕ್ಕ ಸುರಿದು ಯಾರೇ ಗೆದ್ದು ಎಮ್ಮೆಲ್ಲೆಯಾಗುವ ಹಾಗಿದ್ದರೆ ಬೋಡೆ ಮಾರ್ವಾಡಿಗಳೆಲ್ಲ ಯಾವತ್ತೋ ಮಂತ್ರಿಗಳಾಗಬೇಕಿತ್ತು. ಪ್ರಸಾದ್ ರೆಡ್ಡಿಯ ದುಡ್ಡಿನ ದರ್ಪವೇ ಆತನ ಸೋಲಿನ ಸೋಪಾನದಂತಿದೆ.

ಚುನಾವಣೆ 2008

ಇದು 1 ನೇ ಹಂತದ ಫಲಿತಾಂಶ ಏನಾಗಬಹುದುದೆಂಬ ಅಂದಾಜು ತ್ತು.

ತಮ್ಮ ಕೈಗೆ ಅಧಿಕಾರ ಸಿಕ್ಕೇ ಹೋಯಿತೆಂಬ ನಿರೀಕ್ಷೆಯಲ್ಲಿರುವ ಪಿ ದಕ್ಷಿಣ ಕರ್ನಾಟಕದಲ್ಲಿ 25 ಕ್ಷೇತ್ರ ಗೆಲ್ಲಬಹುದಷ್ಟೇ. ಇನ್ನು 2 ನೇ ಗೂ 3 ನೇ ಹಂತದಲ್ಲಿ ಬಾಕಿ ಉಳಿಯುವ 135 ಕ್ಷೇತ್ರಗಳಲ್ಲೂ ಗ್ರೆಸ್-ಬಿಜೆಪಿ ಹಾಗೂ ಜೆಡಿಎಸ್ ನಡುವೆ ತುರುಸಿನ ಪೈಪೋಟಿ ..

ಸರಳ ಬಹುಮತದ ಸರ್ಕಾರ ರಚಿಸಲು ಯಾವುದೇ ಪಕ್ಷಕ್ಕೆ 113 ಬಲ ಬೇಕು. 1 ನೇ ಹಂತದಲ್ಲಿ ಬಿಜೆಪಿ 25 ಯಾಕೆ ಒಂದು ವೇಳೆ ಸ್ಥಾನ ಗೆದ್ದರೂ ಸರ್ಕಾರ ರಚಿಸಲು ಅದಕ್ಕೆ ಇನ್ನೂ 83 ಸ್ಥಾನಗಳಲ್ಲಿ ಬೇಕಾಗುತ್ತದೆ. ಅಂದರೆ 2 ಹಾಗೂ 3 ನೇ ಹಂತದ 135 ಕ್ಷೇತ್ರಗಳಲ್ಲಿ ಪಿಯು ಪ್ರತಿ ಮೂರರಲ್ಲಿ ಎರಡು ಸ್ಥಾನ ಗೆಲ್ಲಲೇಬೇಕಾಗುತ್ತದೆ. ಇದು ಕಷ್ಟಸಾಧ್ಯವೆಂಬುದು ಸ್ವತಃ ಬಿಜೆಪಿಗಳಿಗೇ ಗೊತ್ತಿದೆ. ರ್ನಾಟಕದಲ್ಲಿ ಈ ಕ್ಷಣದ ರಾಜಕೀಯ ಪರಿಸ್ಥಿತಿ 'ಅತಂತ್ರ'ವಾಗಿಯೇ ..

ಲೇಔಟ್ ನೋ ಡೌಟ್!




ಪ್ರಮೀಳಾ ನೇಸರ್ಗಿಯವರಿಗೆ ಮಹಿಳೆಯರ ಬಗ್ಗೆ ಅದೆಷ್ಟು ಕಾಳಜಿ ಎಂದರೆ ನಮ್ಮ ಪುರಾಣಗಳಲ್ಲಿನ ಮಹಿಳೆಯರಿಗೆ ಆದ ಅನ್ಯಾಯವನ್ನೂ ಸರಿಪಡಿಸುತ್ತೇನೆಂದು ಹೇಳಿಕೆ ನೀಡಿ ಹಾಸ್ಯಾಸ್ಪದರಾಗುತ್ತಾರೆ. ಅವರನ್ನು ಗುರುತು ಪರಿಚಯವಿಲ್ಲದ ವಿಜಯನಗರದಲ್ಲಿ ಸ್ಪರ್ಧೆಗೆ ನಿಲ್ಲಿಸಿರುವ ಬಿಜೆಪಿಗಳು ಅವರ ಇಂತಹ ಮುಗ್ಧತೆಯನ್ನು ಜನರ ಮುಂದೆ ಬಟಾಬಯಲುಗೊಳಿಸಲು ಹೊಂಚುಹಾಕಿದ್ದಾರೆನೋ ಅನಿಸುತ್ತದೆ.



ನೇಸರ್ಗಿ ವಿರುದ್ಧ ಕಾಂಗ್ರೆಸ್‌ನ ಎಂ.ಕೃಷ್ಣಪ್ಪ ಅಲಿಯಾಸ್ ಲೇಔಟ್ ಕೃಷ್ಣಪ್ಪ ನಿಂತಿದ್ದಾರೆ. ಇವರದ್ದೂ ಲ್ಯಾಂಡ್ ದಂಧೆಯಾದರೂ ಅವರನ್ನು ಕುಪೇಂದ್ರ ರೆಡ್ಡಿ, ಪ್ರಸಾದ್ ರೆಡ್ಡಿ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮುಂತಾದವರಿಗೆ ಹೋಲಿಸಿದರೆ ಈತ ಸಂತನೇ ಸರಿ. ಅವರ ರಿಯಲ್ ಎಸ್ಟೇಟ್ ಬಿಸಿನೆಸ್ ಕಾನೂನಿನ ಪರಿಧಿಯಲ್ಲಿರುತ್ತದೆ. ಅವರು ರೌಡಿ ಹಿಂಬಾಲಕರನ್ನು ಬೆಳೆಸಿಲ್ಲ, ವಂಚಕ ಚೇಲಾಗಳನ್ನು ಬೆನ್ನಿಗಿಟ್ಟುಕೊಂಡಿಲ್ಲ.


ವಿಜಯನಗರದಲ್ಲಿ ಕೃಷ್ಣಪ್ಪರಿಗೆ ಎದುರಾಳಿಗಳಿಲ್ಲ, ಅವರನ್ನು ಗೆಲ್ಲಿಸದೇ ವಿಜಯನಗರದ ಜನಕ್ಕೆ ಬೇರೆ ದಾರಿಯೂ ಉಳಿದಿಲ್ಲ.

ಜಯನಗರ: ಬಿಜೆಪಿ ಗೆಲುವಿಗೆ ಸಮೀವುಲ್ಲನೇ ನಾವಿಕ?



ರಾಮಲಿಂಗಾರೆಡ್ಡಿ ಇದ್ದಷ್ಟೂ ದಿನ ಜಯನಗರದಲ್ಲಿ ಕಾಂಗ್ರೆಸ್ ನೆಮ್ಮದಿಯಾಗಿ ಇತ್ತು. ಅವರ ಉತ್ತರಾಧಿಕಾರಿಯಾಗಿ ಎಂ. ಸುರೇಶ್ ಎಂಬ ಹಿರಿಯ ಕಾರ್ಯಕರ್ತನೊಬ್ಬನಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಾಗಲೂ ಕಾಂಗ್ರೆಸ್ ಪಾಳಯದಲ್ಲಿ ಉತ್ಸಾಹವಿತ್ತು. ದುಡ್ಡಿಲ್ಲದ, ಪ್ರಭಾವವಿಲ್ಲದ ಸಾಮಾನ್ಯ ಕಾರ್ಯಕರ್ತನೊಬ್ಬನಿಗೆ 'ಬಿ' ಫಾರ್ಮ್ ಕೊಟ್ಟಿದ್ದು ಬಿ.ಕೆ. ಹರಿಪ್ರಸಾದ್ ಥರದ ಪಕ್ಷನಿಷ್ಠರ ಪ್ರಯತ್ನವಾಗಿತ್ತು. ಗೂಂಡಾಗಿರಿ, ಕ್ರಿಮಿನಲ್ ಕೇಸ್ ಇತ್ಯಾದಿ ಹಾವಳಿಗಳಿಲ್ಲದೇ ತೆಪ್ಪಗೆ ಸಮಾಜ ಸೇವೆ ಮಾಡಿಕೊಂಡಿದ್ದ ಸುರೇಶ್ ಇನ್ನೇನು ಪಿಯ ವಿಜಯಕುಮಾರ್ ಪಾಲಿಗೆ ಮುಳುಗುನೀರು ತರುತ್ತಾರೆನ್ನುವಾಗಲೇ ಎದ್ದು ನಿಂತವನು ಪಾಖಂಡಿ ೀವುಲ್ಲ!

ಕಾಂಗ್ರೆಸ್ ಮೂಲಕವೇ ಕೌನ್ಸಿಲರ್ ಆಗಿ, ಕೋಟಿಗಟ್ಟಲೇ ಗಳಿಕೆಯನ್ನೂ ಮಾಡಿಕೊಂಡ ಸಮೀವುಲ್ಲ ಸದ್ಯ ಯನಗರದ ಬಂಡಾಯ ಕಾಂಗ್ರೆಸ್ ಅಭ್ಯರ್ಥಿ. ಎಮ್ಮೆಲ್ಲೆಯಾಗುವ ಯೋಗ್ಯತೆಯಾದರೂ ಇದ್ದಿದ್ದರೆ ಆ ಮಾತು ಬೇರೆ. ಬ ಗುರಪ್ಪನಪಾಳ್ಯದ ಮುಸ್ಲಿಂ ನಾಯಕನೆಂದು ಪೋಜು ಕೊಟ್ಟೇ ಗುಲ್ಬರ್ಗದ ಹುಡುಗಿಯೊಬ್ಬಳನ್ನು ಅಪಹರಿಸಿ ಪೀಡಿಸಿದ್ದಕ್ಕೆ ಈತನ ವಿರುದ್ಧ ಪೊಲೀಸ್ ಕೇಸಿದೆ. ನ ಕುಖ್ಯಾತಿ ಕಂಡೇ ಶಬನಂ ಡೆವಲಪರ್ಸ್ ಮೇಲೆ ರವಿ ಪೂಜಾರಿ ಗ್ಯಾಂಗ್ ದಾಳಿ ಸಿ ಇಬ್ಬರು ಅಮಾಯಕರನ್ನು ಕೊಂದು ಹಾಕಿತು.



ಅದ್ಯಾವ ಮುಖ ಹೊತ್ತು ಓಟು ಕೇಳುತ್ತಾನೋ! ತಾನೊಬ್ಬ ಮುಸ್ಲಿಂ ಲೀಡರ್ ಬ ಕಾರಣಕ್ಕೇ ತನಗೆ ಕಾಂಗ್ರೆಸ್ ಟಿಕೆಟ್ ತಪ್ಪಿತೆಂದು ಮರುಗುತ್ತಾನೆ. ಆದರೆ ಗ್ರೆಸ್‌ಗೆ ಬರಬೇಕಿದ್ದ ಮುಸ್ಲಿಂ ಮತಗಳನ್ನೇ ಒಡೆಯಲು ಹೊರಟಿದ್ದಾನೆ. ಹಾಗೊಮ್ಮೆ ಪಿಯ ವಿಜಯ್‌ಕುಮಾರ್ ಏನಾದರೂ ಜಯನಗರದಿಂದ ಗೆದ್ದುಬಿಟ್ಟರೆ ಅದಕ್ಕೆ ವುಲ್ಲನ ಕೊಡುಗೆಯೇ ಹೆಚ್ಚಿರುತ್ತದೆ.


ಸಮೀವುಲ್ಲ ನಿಜಕ್ಕೂ ಮುಸ್ಲಿಂ ನಾಯಕನೇ ಆಗಿದ್ದರೆ ಮೊದಲು ಸುರೇಶ್ ಗೆಲುವಿಗೆ ಸಬೇಕಷ್ಟೇ.

ೋಮಣ್ಣನಿಗೆ ಈಜೀ ವಾಕ್



ಒಂದು ಡಜನ್ನಿನಷ್ಟು ರೆಡ್ಡಿ-ನಾಯ್ಡು ಭೂ ಖದೀಮರೆಲ್ಲ ಗೆದ್ದು ಮ್ಮೆಲ್ಲೆಗಳಾದರೆಂದರೆ ಏನೆಲ್ಲಾ ಅನಾಹುತವಾಗಬಹುದು?

ಇಂಥ ರೆಡ್ಡಿ-ನಾಯ್ಡುಗಳಿಗೆ ತಕ್ಕ ಉತ್ತರ ಅಂತಿದ್ದರೆ ಅದು ವಿಜಯನಗರದ ಮಣ್ಣಾ, ಸದ್ಯ ಗೋವಿಂದರಾಜನಗರದಲ್ಲಿ ಸೋಮಣ್ಣನಿಗೆ ಎದುರಾಳಿಗಳೇ . ಬಿಜೆಪಿಯ ಅಭ್ಯರ್ಥಿ ರವೀಂದ್ರ ಸೋಮಣ್ಣನ ಮುಂದೆ ಏನೇನೂ ಅಲ್ಲ. ಎಸ್‌ನ ರಂಗೇಗೌಡ ಯಾರು, ಎತ್ತ ಎಂದು ಇಲ್ಲಿನ ಜನರಿಗೆ ಗೊತ್ತೇ ಇಲ್ಲ. ಬಹುಶಃ ಸೋಮಣ್ಣನ ಹಂಗಿಗೆ ಬಿದ್ದು ಜೆಡಿಎಸ್ -ಬಿಜೆಪಿಗಳೇ ಡಮ್ಮಿ ಅಭ್ಯರ್ಥಿಗಳನ್ನು ಹಾಕಿರಬಹುದೆ?




ಎಲ್ಲಿಯ ತನಕ ಪ್ರಸಾದ್ ರೆಡ್ಡಿ, ನಂದೀಶ್ ರೆಡ್ಡಿ, ವಿಶ್ವನಾಥ್ ರೆಡ್ಡಿ, ಕುಪೇಂದ್ರ ರೆಡ್ಡಿ, ಕಟ್ಟಾ ನಾಯ್ಡು ಥರದ ದುರುಳರು ಬೆಂಗಳೂರಿನ ರಾಜಕಾರಣಿಗಳಾಗಿ ಚಾಲ್ತಿಯಲ್ಲಿರುತ್ತಾರೋ ಅಲ್ಲಿಯ ತನಕ ಸೋಮಣ್ಣನಂಥವರು ಬೆಂಗಳೂರಿಗೆ ಬೇಕೆ ಬೇಕು. ಆತ ಬೆಂಗಳೂರಿನ ಕನ್ನಡಿಗರ ದನಿ.

ಸೋಮಣ್ಣ ಗೆಲ್ಲುತ್ತಾರೆ ನಿಜ. ಆದರೆ ಎಷ್ಟು ಅಂತರದಿಂದ ಗೆಲ್ಲುತ್ತಾರೆಂಬುದಷ್ಟೇ ಪ್ರಶ್ನೆ!

ಬ್ಯಾಟರಾಯನಪುರ : ಅನಿವಾರ್ಯವಾದ ಕೃಷ್ಣ ಭೈರೇಗೌಡ



ಬ್ಯಾಟರಾಯನಪುರ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿರುವ ಎ.ರವಿ ಮಾಜಿ ಮಂತ್ರಿ ಆರ್.ಅಶೋಕನ ಖಾಸಾ ತಮ್ಮ. ಪಕ್ಕಾ ಲ್ಯಾಂಡ್ ಗ್ರಾಬರ್. ಎಲ್ಲೆಲ್ಲಿ ಸರ್ಕಾರಿ ಜಮೀನಿದೆ? ಅದಕ್ಕೆ ಬೋಗಸ್ ದಾಖಲೆ ಸೃಷ್ಟಿಸುವುದು ಹೇಗೆ? ಹೇಗೆ ದೋಚಬೇಕು? ಇತ್ಯಾದಿಗಳ ಹೊರತಾಗಿ ಯಾವತ್ತೂ ಜನರ ಸಮಸ್ಯೆಗಳ ಪರ ತಲೆಕೆಡಿಸಿಕೊಂಡವನಲ್ಲ. ಸಮಸ್ಯೆ, ಸಿದ್ಧಾಂತ ಯಾವುದೂ ಗೊತ್ತೇ ಇಲ್ಲ. ಎಮ್ಮೆಲ್ಲೆಯಾಗುವ ಯೋಗ್ಯತೆಯಂತೂ ಮೊದಲೇ ಇಲ್ಲ.




ಬಹುಷ ಚಕ್ರಪಾಣಿಯೇನಾದರೂ ಪಕ್ಷೇತರನಾಗಿ ಸ್ಪರ್ಧಿಸಿದ್ದರೆ ಕತೆಯೇ ಬೇರೆಯಾಗಿರುತ್ತಿತ್ತು. ಹಾಗಾಗಲಿಲ್ಲ. ಕೊನೆ ಗಳಿಗೆಯಲ್ಲಿ ನಾಮ ಪತ್ರ ಹಿಂಪಡೆದು ಕಾಂಗ್ರೆಸ್ ಸೇರಿದ ಚಕ್ರಪಾಣಿಯಿಂದಾಗಿ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣ ಭೈರೇಗೌಡರ ದಾರಿ ಸಲೀಸಾಗಿದೆ. ಒಬ್ಬ ಜನಪರ ರಾಜಕಾರಣಿ ಹೇಗಿರಬೇಕೆಂಬುದಕ್ಕೆ ಮಾದರಿ ಅಂತಿದ್ದರೆ ಅದಕ್ಕೆ ಕೃಷ್ಣ ಭೈರೇಗೌಡರಿಗಿಂತ ಬೇರೆ ನಿದರ್ಶನವಿಲ್ಲ.

ಬಡತನ, ಭ್ರಷ್ಟಾಚಾರ, ಮಾಲಿನ್ಯ ಎಲ್ಲದರ ಬಗ್ಗೆಯೂ ಆಳವಾಗಿ ಅಧ್ಯಯನ ಮಾಡಿರುವ ಕೃಷ್ಣ ಭೈರೇಗೌಡರೆಲ್ಲಿ? ಲ್ಯಾಂಡ್ ಡೀಲು ಬಿಟ್ಟರೆ ಬೇರೇನೂ ಗೊತ್ತಿಲ್ಲದ ಬಿಜೆಪಿಯ ಎ.ರವಿ ಎಲ್ಲಿ? ಜೆಡಿಎಸ್‌ನ ನಾರಾಯಣ ಸ್ವಾಮಿ ಸಭ್ಯರು ನಿಜ. ಆದರೆ ಟೂ ಲೇಟ್!

ಲ್ಯಾಂಡ್ ಡೀಲರ್ ಬೇಕಾ ಅಥವಾ ಜನಪರ ಎಮ್ಮೆಲ್ಲೇ ಬೇಕಾ? ಎಂಬುದನ್ನು ಬ್ಯಾಟರಾಯನಪುರದ ಮತದಾರರೇ ನಿರ್ಧರಿಸಬೇಕು.

ಯಶವಂತಪುರ: ಕರಂದ್ಲಾಜೆಗೆ ಕಾದಿದೆ ದುರ್ಗತಿ



ಶೋಭಾ ಕರಂದ್ಲಾಜೆಯ ವಿರುದ್ಧ ಯಶವಂತಪುರದ ಬಿಜೆಪಿ ಕಾರ್ಯಕರ್ತರೇ ತಿರುಗಿಬಿದ್ದಿದ್ದಾರೆ. ಎಲ್ಲೋ ದೂರದ ಪುತ್ತೂರಿನಾಕೆ. ಗೆದ್ದರೆ ಹುಡುಕಿಕೊಂಡು ಡಾಲರ್ಸ್ ಕಾಲನಿಗೆ ಬರಬೇಕು. ಇನ್ನೂ ಎರಡೂವರೆ ವರ್ಷದ ಎಮ್ಮೆಲ್ಸಿಗಿರಿಯೇ ಬಾಕಿ ಇರುವಾಗ ಆಕೆ ಸ್ಥಳೀಯ ಕಾರ್ಯಕರ್ತರೊಬ್ಬರನ್ನು ಎಮ್ಮೆಲ್ಲೇ ಮಾಡಬೇಕಿತ್ತೇ ಹೊರತು ಈ ರೀತಿ ಹೇರಿಕೆ ಸಲ್ಲ ಎಂಬುದು ಲೋಕಲ್ ಬಿಜೆಪಿ ನಾಯಕರ ಆಕ್ರೋಶ. ಅದರಲ್ಲಿ ಟಿಕೆಟ್ ವಂಚಿತ ಬಿಜೆಪಿ ನಾಯಕ ಹನುಮಂತರಾಯಪ್ಪ ಬಂಡೆದ್ದು ಶೋಭಾ ವಿರುದ್ಧವೇ ಪ್ರಚಾರಕ್ಕಿಳಿದಿದ್ದಾರೆ. ಶೋಭಾ ಎಲ್ಲೆಲ್ಲಿಂದಲೋ ದುಡ್ಡು ತಂದು ಸುರಿಯುತ್ತಿದ್ದಾಳೆ ನಿಜ. ಪಾಪದ ದುಡ್ಡು ಕೊಡ್ಲಿ ಬಿಡ್ಲಾ... ಎಂದು ದುಡ್ಡು ಈಸಿಕೊಂಡು ಬಂದವರೇ ಶಾಪ ಹಾಕುತ್ತಿದ್ದಾರೆ.

ಶೋಭಾ ಕರಂದ್ಲಾಜೆಯ ಕರಾಳ ಚರಿತ್ರೆಗೆ ಹೋಲಿಸಿದರೆ ಕಾಂಗ್ರೆಸ್ ಅಭ್ಯರ್ಥಿ ಎಸ್.ಟಿ. ಸೋಮಶೇಖರ್ ಜನಾನುರಾಗಿ. ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರದ ದುರಾಡಳಿತದ ವಿರುದ್ಧ ಕಾಂಗ್ರೆಸ್-ನಾಯಕರಾದ ಖರ್ಗೆ-ಧರ್ಮಸಿಂಗ್ ಥರದವರೇ ಬಾಯಿ ಮುಚ್ಚಿ ಕೂತಾಗ ದಿನಬೆಳಿಗ್ಗೆ ಬೀದಿಗಿಳಿದು ಹೋರಾಡಿದ್ದು ಇದೇ ಎಸ್.ಟಿ. ಸೋಮಶೇಖರ್. ಇಪ್ಪತ್ತು ತಿಂಗಳ ಕಾಲ ಅವರೇ ವಿರೋಧ ಪಕ್ಷವಾಗಿ ಉತ್ತರಹಳ್ಳಿ ಬಗರ್‌ಹುಕುಂ ಭೂಕಬಳಿಕೆಯ ವಿರುದ್ಧ ಸತತವಾಗಿ ಹೋರಾಡಿದ್ದಾರೆ. ಆರ್. ಅಶೋಕನ ದುರಾಚಾರವನ್ನು ಬಯಲಿಗೆಳೆದಿದ್ದಾರೆ. ಕಟ್ಟಾನ ಭೂಕಬಳಿಕೆ, ಕುಡಿಯುವ ನೀರಿನ ಸಮಸ್ಯೆ, ರಸ್ತೆ ದುರವಸ್ಥೆ ಪೊಲೀಸ್ ದೌರ್ಜನ್ಯ ಎಲ್ಲದರ ವಿರುದ್ಧವೂ ಸತತವಾಗಿ ಹೋರಾಟ ನಡೆಸಿದ ಸೋಮಶೇಖರ್ ಎಲ್ಲಿ? ಯಡ್ಡಿ ರಾಮಚಂದ್ರೇಗೌಡರ ನೆರಳಲ್ಲಿ ಕೋಟ್ಯಾಧಿಪತ್ನಿಯಾದ ಶೋಭಾ ಕರಂದ್ಲಾಜೆ ಎಲ್ಲಿ?

ಕರಂದ್ಲಾಜೆಯ ದುಡ್ಡಿನ ದರ್ಪಕ್ಕೆ ಯಶವಂತಪುರದ ಮತದಾರ ತಕ್ಕ ಉತ್ತರವನ್ನಂತೂ ಖಂಡಿತಾ ಕೊಡಬೇಕಿದೆ.

■ ರಾ. ಸೋಮನಾಥ್


ಮೈಸೂರು: ಕಾಂಗ್ರೆಸ್ ಮುನ್ನಡೆ

ಚುನಾವಣೆ 2008

ಜನತಾದಳದ ಭದ್ರಕೋಟೆಯಾಗಿದ್ದ ಮೈಸೂರು ಜಿಲ್ಲೆಯಲ್ಲಿ ಸಿದ್ದರಾಮಯ್ಯ ನಿರ್ಗಮನದ ನಂತರ ಆ ಪಕ್ಷ ನೆಲೆ ಕಳೆದುಕೊಂಡಿದೆ. ಸಿದ್ದರಾಮಯ್ಯನವರನ್ನು ಬೈಯ್ದುಕೊಂಡು ಗೌಡರ ಪಾಳಯದಲ್ಲಿ ಸಚಿವ ಸ್ಥಾನ ಗಿಟ್ಟಿಸಿದ್ದ ಜಿ.ಟಿ.ದೇವೇಗೌಡ ಹಾಗೂ ಡಿ.ಟಿ. ಜಯಕುಮಾರ್ ಕೂಡ ಈಗ ದಳದಲ್ಲಿಲ್ಲ. ಉಳಿದಂತೆ ಸಿದ್ದರಾಮಯ್ಯನ ಪ್ರಭಾವದಿಂದ ಕಾಂಗ್ರೆಸ್ ಮೊದಲಿಗಿಂತ ಬಲಿಷ್ಠವಾಗಿದೆ.

ಉಳಿದಂತೆ ಕಾಂಗ್ರೆಸ್‌ನಿಂದ ಹಾರಿಬಂದಿರುವ ಸಿ. ಬಸವೇಗೌಡ, ಸಂದೇಶ ನಾಗರಾಜ ಹಾಗೂ ಆರೆ ಚೆಡ್ಡಿ ಸಾ.ರಾ. ಮಹೇಶ್ ಜೆಡಿಎಸ್ ಮೇಲೆತ್ತಲು ಪ್ರಯತ್ನ ನಡೆಸಿದ್ದಾರೆ. ಬಿಜೆಪಿಯಲ್ಲಿ ಹಳೇ ನಾಯಕರ ಜೊತೆಗೆ ರೇವಣ್ಣಸಿದ್ದಯ್ಯ ಸುಭಾಷ್ ಭರಣಿ, ಜಿ.ಟಿ. ದೇವೇಗೌಡರ ಸೇರ್ಪಡೆ ಹೊಸ ಲೀಡರುಗಳ ಬಂದಂತಾಗಿದೆಯೇ ವಿನಃ ಹೆಚ್ಚಿನ ಶಕ್ತಿ ಬಂದಿಲ್ಲ.


ಮೈಸೂರು ಜಿಲ್ಲೆಯ ಒಟ್ಟು 11 ಕ್ಷೇತ್ರಗಳ ಪೈಕಿ 8ರಲ್ಲಿ ಕಾಂಗ್ರೆಸ್-ಬಿಜೆಪಿ ಮಧ್ಯೆ ನೇರ ಸ್ಪರ್ಧೆಯಿದ್ದು ಉಳಿದೆಡೆ ಕಾಂಗ್ರೆಸ್-ದಳ ಸೆಣಸಾಟ ನಡೆಯುತ್ತಿದೆ.


ಶಂಕರ್‌ಲಿಂಗೇಗೌಡ

ಚಾಮರಾಜ: ವಾಸು ಚಾಲೆಂಜ್


ಸತತ ಮೂರು ಬಾರಿ ಗೆದ್ದಿರುವ ಬಿಜೆಪಿಯ ಶಂಕರಲಿಂಗೇಗೌಡರಿಗೆ ಈ ಬಾರಿ ಅಡೆತಡೆಗಳೇ ಜಾಸ್ತಿ. ಕಾಂಗ್ರೆಸ್‌ನಿಂದ ಜಿ.ಟಿ.ದೇವೇಗೌಡರಿಗೆ ಟಿಕೆಟ್ ನೀಡಿದ್ದರೆ ಇಷ್ಟು ಹೊತ್ತಿಗೆ ಕಾಂಗ್ರೆಸ್ ಗೆಲುವು ಗ್ಯಾರಂಟಿಯಾಗಿರುತ್ತಿತ್ತೇನೋ. ಆದರೆ ವೀರಪ್ಪ ಮೊಯಿಲಿ ಮಾಜಿ ಮೇಯರ್ ವಾಸುಗೆ ಅವಕಾಶ ಕೊಡಿಸಿದ್ದಾರೆ. ಕ್ಷೇತ್ರ ಮರುವಿಂಗಡಣೆಯ ನಂತರ ಬಿಜೆಪಿ ಪ್ರಭಾವವಿದ್ದ ಕುವೆಂಪುನಗರ ಮತ್ತು ರಾಮಕೃಷ್ಣ ನಗರದ 5 ವಾರ್ಡ್‌ಗಳು ಚಾಮರಾಜದಿಂದ ಕೃಷ್ಣರಾಜ ಕ್ಷೇತ್ರಕ್ಕೆ ಬದಲಾಗಿದೆ. ಅದೇ ರೀತಿ ನರಸಿಂಹರಾಜ ಕ್ಷೇತ್ರದ 20 ಸಾವಿರ ಮುಸ್ಲಿಂ ಮತಗಳು ಈಗ ಚಾಮರಾಜಕ್ಕೆ ಶಿಫ್ಟ್ ಆಗಿದ್ದು ಬಿಜೆಪಿಗೆ ಹೊಡೆತ ಬಿದ್ದಂತಾಗಿದೆ.

ದಳದ ಲಯನ್ ಪ್ರಸಾದ್ ಇಲ್ಲಿ ಲೆಕ್ಕಕ್ಕಿಲ್ಲ. ದಳದಲ್ಲಿದ್ದು ಈಗ ಕಾಂಗ್ರೆಸ್‌ಗೆ ಸೇರಿರುವ ಸಿ. ಬಸವರಾಜ ಬೆಂಬಲದಿಂದ ಕಾಂಗ್ರೆಸ್ ಅಭ್ಯರ್ಥಿ ವಾಸು ಅವಕಾಶಗಳು ಹೆಚ್ಚಾಗಿ ಕಾಣುತ್ತದೆ. ಸಿದ್ದರಾಮಯ್ಯ ಸಹಕರಿಸಿದರೆ ಮಾತ್ರ ಇದು ಸಾಧ್ಯ


ರಾಮದಾಸ್

ಕೃಷ್ಣರಾಜ: ರಾಮದಾಸ್ ಭಂಡಾಟ


ಬಿಜೆಪಿ ಭೂಮಾಫಿಯಾದ ಸರದಾರ ಎಸ್.ವಿ. ರಾಮದಾಸ್ ಹಾಗೂ ಕಾಂಗ್ರೆಸ್‌ನ ಎಂ.ಕೆ. ಸೋಮಶೇಖರ್ ನಡುವೆ ನೇರ ಪೈಪೋಟಿ ನಡೆಯುತ್ತಿದೆ. ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ಹಣಬಲ ಮತ್ತು ಕುತಂತ್ರ ಮೈಗೂಡಿಸಿಕೊಂಡಿರುವ ಬಿಜೆಪಿಯ ರಾಮದಾಸ್ ವಿರುದ್ಧ ಸಭ್ಯ ನಿಗರ್ವಿ ಸೋಮಶೇಖರ್ ಸೆಣಸುತ್ತಿದ್ದಾರೆ. ದಳದಿಂದ ಚಾಮುಂಡೇಶ್ವರಿಯಲ್ಲಿ ಸಿದ್ದು ವಿರುದ್ಧ ಸೋತಿದ್ದ ಶಿವಬಸಪ್ಪ ಕಣದಲ್ಲಿದ್ದು ಅಂಥ ಪ್ರಭಾವವೇನಿಲ್ಲ. ರಾಮದಾಸ್ ಫೋರ್ಜರಿ ದಾಖಲೆಗಳನ್ನು ಸೃಷ್ಟಿಸಿ ಸೋಮಶೇಖರ್ ವಿರುದ್ಧ ಅಪಪ್ರಚಾರ ನಡೆಸಿದ್ದಾರೆ. ಹೊರನೋಟಕ್ಕೆ ಇಲ್ಲಿ ಬಿಜೆಪಿ ಮೇಲುಗೈ ಸಾಧಿಸಿದಂತೆ ಕಾಣುತ್ತಿದೆ. ಆದರೆ ರಾಮದಾಸ್ ಸೋತರೆ ಮೈಸೂರಿನ ಜನಕ್ಕೆ ಒಳ್ಳೆಯದು.


ತನ್ವೀರ್ ಸೇಠ್

ನರಸಿಂಹರಾಜ: ಸಂದೇಶ - ಸೇಠ್ ಟೈ

ಮುಸ್ಲಿಂರೇ ಹೆಚ್ಚಾಗಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ತನ್ವೀರ್ ಸೇಠ್ ಹ್ಯಾಟ್ರಿಕ್ ಸಾಧಿಸುವಂತೆ ಕಾಣುತ್ತಿದೆ. ಜನತಾ ದಳದ ಸಂದೇಶ ನಾಗರಾಜ ಸೇಠ್‌ಗೆ ಭಾರಿ ಪೈಪೋಟಿ ಕೊಡುತ್ತಿದ್ದಾರೆ. ಬಿಜೆಪಿಯ ಮಂಜುನಾಥ್‌ಗೆ ಇನ್ನೊಬ್ಬ ಬಿಜೆಪಿ ಬಂಡಾಯಗಾರ ಮಾರುತಿ ಪವಾರ್ ಕಿರುಕುಳ ನೀಡುತ್ತಿದ್ದಾರೆ. ಕೆಲವು ಮುಸ್ಲಿಂ ಕಾರ್ಪೋರೇಟರುಗಳು ದಳಕ್ಕೆ ಬೆಂಬಲ ನೀಡಿರುವುದು ಸಹ ಕಾಂಗ್ರೆಸ್‌ನ ತನ್ವೀರ್ ಸೇಠ್‌ಗೆ ಕಷ್ಟವಾಗಿದೆ.


ಮುಂದಿದ್ದಾರೆ.


ಸಿ. ಬಸವೇಗೌಡ

ಚಾಮುಂಡೇಶ್ವರಿ-ಸತ್ಯನಾರಾಯಣ ಮೇಲುಗೈ


ಸಿದ್ದರಾಮಯ್ಯ ಬೆಂಬಲಿಗ ಎಂ.ಸತ್ಯನಾರಾಯಣ ಇಲ್ಲಿ ಕಾಂಗ್ರೆ ಅಭ್ಯರ್ಥಿಯಾಗಿದ್ದು ದಳದಿಂದ ಸಿ. ಬಸವೇಗೌಡ ಇದ್ದಾನೆ. ಅಭ್ಯರ್ಥಿ ಆಯ್ಕೆಯಲ್ಲಿ ತಪ್ಪು ಮಾಡಿರುವ ಬಿಜೆಪಿ ಇಲ್ಲಿ ಭೂಮಾಫಿಯಾದ ಕುಖ್ಯಾತ ಸಿ.ಎನ್. ಮಂಜೇಗೌಡನಿಗೆ ಟಿಕೆಟ್ ನೀಡಿ ಸೋಲನ್ನು ಆಹ್ವಾನಿಸಿಕೊಂಡಿದೆ. ಇನ್ನು ಗೌಡರೊಂದಿಗೆ ಮುನಿಸಿಕೊಂಡು ಬಿಎಸ್‌ಪಿಯಿಂದ ಕಣಕ್ಕಿಳಿದಿರುವ ಮಾಜಿ ಸಚಿವ ಡಿ.ಟಿ. ಜಯಕುಮಾರ್ ಅಸಹಾಯಕರಾಗಿದ್ದಾರೆ.

ಕಾಂಗ್ರೆಸ್ ಸತ್ಯನಾರಾಯಣರದೇ ಇಲ್ಲಿ ಸದ್ಯಕ್ಕೆ ಮೇಲುಗೈಯಾಗಿ ಭಾಸವಾಗುತ್ತಿದೆ.




ವರುಣ: ಸಿದ್ದರಾಮಯ್ಯ ಗೆದ್ದಿದ್ದಾರೆ

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಪರ ಕ್ಷೇತ್ರದ ಜನ ಜಾತಿಭೇದವಿಲ್ಲದೆ ಬೆಂಬಲದ ಮಾತಾಡುತ್ತಿದ್ದಾರೆ. ಬಿಜೆಪಿಯ ಎಲ್. ರೇವಣಸಿದ್ದಯ್ಯ ಹಾಗೂ ದಳದಿಂದ ನಿವೃತ್ತ ಅಧಿಕಾರಿ ಡಾ|| ಕೃಷ್ಣಯ್ಯ ಸ್ಪರ್ಧಿಸಿದ್ದು ಸಿದ್ದು ಬಲದೆದುರು ನಿಶ್ಶಕ್ತರಂತೆ ಕಾಣುತ್ತಿದ್ದಾರೆ. ರೇವಣಸಿದ್ದಯ್ಯಗೆ ಲಿಂಗಾಯತರ ಸ್ವಲ್ಪ ಓಟು ಬೀಳಬಹುದು. ಉಳಿದಂತೆ ಸಿದ್ದರಾಮಯ್ಯ ಗೆಲುವಿಗೆ ಇಲ್ಲಿ ಅಡೆತಡೆಗಳಿಲ್ಲ.



ವಿಶ್ವನಾಥ್

ಕೆ.ಆರ್.ನಗರ: ಕಳ್ಳ-ಸುಳ್ಳರೆದುರು ಸಂಭಾವಿತನ ಸೆಣಸಾಟ

ಕ್ರಿಯಾಶೀಲ ಶಿಕ್ಷಣ ಸಚಿವರಾಗಿದ್ದ ಎಚ್.ವಿಶ್ವನಾಥ್ ಇಲ್ಲಿ ಕಾಂಗ್ರೆಸ್ ಹುರಿಯಾಳು. ಇವರೆದುರು ಮೈಸೂರಿನ ಮಹಾನ್ ಭೂಗಳ್ಳ ಸಾ.ರಾ. ಮಹೇಶ್ ದಳದಿಂದಲೂ ಮತ್ತು ಹುಟ್ಟು ಸುಳ್ಳ ಪುಟ್ಟಸಿದ್ದಶೆಟ್ಟಿ ಬಿಜೆಪಿಯಿಂದಲೂ ಅಖಾಡದಲ್ಲಿದ್ದಾರೆ. ಬಿಜೆಪಿ ಇಲ್ಲಿ 3ನೆ ಸ್ಥಾನಕ್ಕೆ ಬಡಿದಾಡಬೇಕಷ್ಟೆ. ಬಿಎಸ್‌ಪಿಯಿಂದ ಡಾ|| ಯೋಗೇಶ್ ಸ್ಪರ್ಧಿಸಿದ್ದಾರೆ. ಮೈತುಂಬಾ ಚೆಡ್ಡಿ ಬುದ್ದಿ ತುಂಬಿಕೊಂಡಿರುವ ದಳದ ಸಾ.ರಾ. ಮಹೇಶ್, ಈಗಾಗಲೇ 10 ಸಾವಿರ ಸೀರೆ, ಸಾವಿರಾರು ಹೊಲಿಗೆ ಮಿಷಿನ್ ಖರೀದಿಸಿ ತಂದು ಹಂಚಿದ್ದಾನೆ. ದೇವೇಗೌಡರ ಸೊಸೆ ಭವಾನಮ್ಮನೂ ಇಲ್ಲಿಗೆ ದಯಮಾಡಿಸಿ ಭೂಗಳ್ಳ ಮಹೇಶ್‌ನಿಗಾಗಿ ಓಟು ಕೇಳಿಹೋಗಿದ್ದಾರೆ. ಸದ್ಯಕ್ಕೆ ಮಹೇಶನ ಆರ್ಭಟ ಎದ್ದು ಕಾಣುತ್ತಿದೆ. ಆದರೆ ಕಾಂಗ್ರೆನ ವಿಶ್ವನಾಥ ಗೆಲ್ಲಬೇಕಾಗಿರುವ ಚುನಾವಣೆ ಇದು.


ಮಹೇಶ್

ಮಂಡ್ಯ: ದಳದ ಶ್ರೀನಿವಾಸ್ ಮುಂದೆ


ಶ್ರೀನಿವಾಸ್


ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್, ಬಿಜೆಪಿ, ಕಾಂಗ್ರೆಸ್ಸಿನ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಕೆರಗೋಡು ಕ್ಷೇತ್ರ ವಿಸರ್ಜನೆಯಿಂದಾಗಿ ಕೆರಗೋಡು, ಬಸರಾಳು ಹೋಬಳಿಯ ಎಂಭತ್ತು ಸಾವಿರ ಮತದಾರರು ಮಂಡ್ಯ ಕ್ಷೇತ್ರಕ್ಕೆ ಜಮೆಯಾಗಿದ್ದಾರೆ. ಮಾಜಿ ಶಾಸಕರಾದ ಎಂ. ಶ್ರೀನಿವಾಸ್ ಜೆಡಿಎಸ್ ಸ್ಪರ್ಧಿ ಪಕ್ಷದ ಬಂಡಾಯಗಾರರನ್ನು ಸಮಾಧಾನಿಸಿಕೊಂಡಿರುವ ಶ್ರೀನಿವಾಸ್ ರೇಸಿನಲ್ಲಿ ಕೊಂಚ ಮುಂದಿದ್ದಾರೆ. ಅಬಕಾರಿ ಉದ್ಯಮಿ ನಾಗಣ್ಣನ ಹತ್ಯೆಯನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ಹೊರಟಿರುವ ಬಿಜೆಪಿ ಇಲ್ಲಿ ವಿದ್ಯಾ ನಾಗೇಂದ್ರರನ್ನು ಕಣಕ್ಕಿಳಿಸಿದೆ. ಮಂಡ್ಯದ ಅಬಕಾರಿ ವ್ಯವಹಾರಸ್ಥರು ವಿದ್ಯಾ ನಾಗೇಂದ್ರನ ಗೆಲುವಿಗೆ ಟೊಂಕ ಕಟ್ಟಿದ್ದಾರೆ. ಸದ್ಯ ವಿದ್ಯಾ ನಾಗೇಂದ್ರ ಇಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಕಾಂಗ್ರೆಸ್ ಟಿಕೆಟ್ ಪಡೆದಿರುವ ಅಂಬಿ ಶಿಷ್ಯ ರಾಮು ಕ್ಷೇತ್ರಕ್ಕೆ ಹೊಸಬ. ಕಾಂಗ್ರೆಸ್ ಟಿಕೆಟ್ ವಂಚಿತ ಆತ್ಮಾನಂದರ ಒಳೇಟು ರಾಮುವನ್ನು ಮಗ್ಗಾಮಲಗಿಸಲಿದೆ. ಇಷ್ಟು ಪಕ್ಷೇತರವಾಗಿ ಸ್ಪರ್ಧಿಸಿರುವ ಬಿಜೆಪಿಯ ಅಬ್ಬಾಸ್ ಅಲಿ ಬಿಜೆಪಿಯ ಪರವಾಗಿ ಮುಸ್ಲಿಮರ ಮತಗಳನ್ನು ಡಿವೈಡ್ ಮಾಡಿ ಬಿಜೆಪಿಗೆ ಅನುಕೂಲ ಮಾಡುವ ಯತ್ನದಲ್ಲಿದ್ದಾರೆ ಉಳಿದ ಸ್ಪರ್ಧಿಗಳು ಇಲ್ಲಿ ಗೌಣ. ಬಿಎಸ್‌ಪಿ ಹಿಂದಿಗಿಂತ ಕೊಂಚ ಹೆಚ್ಚು ಮತಗಳನ್ನು ಗಳಿಸಲಿದೆ.


ವಿದ್ಯಾ

ಮಂಡ್ಯ: ತ್ರಿಕೋನ ಸ್ಪರ್ಧೆಯ ಕುರುಕ್ಷೇತ್ರ


ಕ್ಷೇತ್ರ ಪುನರ್ ವಿಂಗಡಣೆಯಿಂದಾಗಿ ಒಂಭತ್ತು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದ್ದ ಮಂಡ್ಯ ಜಿಲ್ಲೆ ಈಗ ಕೆರಗೋಡು ಮತ್ತು ಕಿರುಗಾವಲು ವಿಧಾನಸಭಾ ಕ್ಷೇತ್ರಗಳನ್ನು ಕಳೆದುಕೊಂಡು ಏಳು ವಿಧಾನಸಭಾ ಕ್ಷೇತ್ರಗಳಿಗೆ ಸೀಮಿತಗೊಂಡಿದೆ. ಉಳಿದಂತೆ ಮಳವಳ್ಳಿ ಹಾಗೂ ಮೈಸೂರು ಜಿಲ್ಲೆಯ ಕೆ.ಆರ್. ನಗರ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಹೊಸದಾಗಿ ಸೇರ್ಪಡೆಗೊಂಡಿವೆ. ಇವಿಷ್ಟು ಕ್ಷೇತ್ರ ವಿಂಗಡಣೆಯ ಎಫೆಕ್ಟ್. ಜಿಲ್ಲೆಯಲ್ಲಿ ಚುನಾವಣೆ ರಂಗು ಏರಿದೆ.

ನಾಗಮಂಗಲ: ಈಗ ಶಾಂತ


ಸುರೇಶ್‌ಗೌಡ

ಜಿಲ್ಲೆಯ ಚುನಾವಣಾ ಕುರುಕ್ಷೇತ್ರವಾಗಿದ್ದ ನಾಗಮಂಗಲ ಈಗ ಶಾಂತ. ಆಡಳಿತ ವಿರೋಧಿ ಅಲೆ ಜನತಾದಳದ ಚೆಲುವರಾಯಸ್ವಾಮಿಯನ್ನು ಕಂಗೆಡಿಸಿದೆ. ಕಾಂಗ್ರೆಸ್‌ನ ಸುರೇಶ್ ಗೌಡ ಕ್ಷೇತ್ರದುದ್ದಕ್ಕೂ ಹಣದ ಹೊಳೆ ಹರಿಸುತ್ತಿದ್ದಾರೆ. ಜಿ.ಪಂ. ಸದಸ್ಯ ಪ್ರಸನ್ನರನ್ನು ಹೊರತುಪಡಿಸಿ ತಾಲ್ಲೂಕಿನಲ್ಲಿ ನಿರ್ಣಾಯಕವಾಗಿರುವ ಕುರುಬ ಮತದಾರರು ಸುರೇಶ್ ಗೌಡನ ಪರ ವಾಲಿದ್ದಾರೆ. ಕಾಂಗ್ರೆಸ್ ಟಿಕೆಟ್ ವಂಚಿತ ಶಿವರಾಮೇಗೌಡ ಸುರೇಶ್ ಗೌಡರಿಗೆ ಬೆಂಬಲ ಸೂಚಿಸಿ ಸಕ್ರಿಯವಾಗುವುದು ಕಷ್ಟ. ತೋರಿಕೆಗೆ ಸ್ವಾಮಿಗೌಡರನ್ನು ಬೆಂಬಲಿಸಿ ಎಂಬ ಶಿವರಾಮೇಗೌಡರ ಮಾತುಗಳನ್ನು ಅವರ ಹಿಂಬಾಲಕರು ಕೇರ್ ಮಾಡುತ್ತಿಲ್ಲ. ಚೆಲುವರಾಯಸ್ವಾಮಿಯ ರೈಟ್‌ಹ್ಯಾಂಡ್ ಜವರೇಗೌಡ, ಕಾಂಗ್ರೆಸ್ ಪರ ಹೆಜ್ಜೆ ಹಾಕಿರುವುದು ಕಾಂಗ್ರೆಸ್ಸನ್ನು ಗಟ್ಟಿಗೊಳಿಸಿದೆ. ಬಿಜೆಪಿಯು ಜಯರಾಮೇಗೌಡ ಎಂಬ ಕುರುಬ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದರೂ ಅದು ಲೆಕ್ಕಕ್ಕಿಲ್ಲ. ಅಂತಿಮವಾಗಿ ಚೆಲುವರಾಯಸ್ವಾಮಿ ಮತ್ತು ಸುರೇಶ್ ಗೌಡರ ಮಧ್ಯೆ ಗೆಲುವು ಎಂಬುದು ಫೋಟೋ ಫಿನಿಷ್ ಆಗಲಿದೆ.


ಮಳವಳ್ಳಿ: ಅನ್ನದಾನಿ ಬೀದಿಪಾಲು


ಅನ್ನದಾನಿ

ಜಿಲ್ಲೆಯ ಏಕೈಕ ಮೀಸಲು ಕ್ಷೇತ್ರ ಮಳವಳ್ಳಿಯಲ್ಲಿ ಆಡಳಿತ ವಿರೋಧಿ ಅಲೆ ಬೀಸುತ್ತಿದೆ. ಇದು ಜೆಡಿಎಸ್‌ನ ಮಾಜಿ ಶಾಸಕ ಅನ್ನದಾನಿಯನ್ನು ವಿರೋಧಿ ಅಲೆ ಅಪೋಷನ ಮಾಡಲಿದೆ. ಹಲವಾರು ಹಳ್ಳಿಗಳಲ್ಲಿ ಜೆಡಿಎಸ್‌ನ ಅನ್ನದಾನಿಯನ್ನು ಪ್ರಚಾರಕ್ಕೆ ಬಿಟ್ಟುಕೊಳ್ಳುತ್ತಿಲ್ಲ. ಬಿಎಸ್‌ಪಿಯ ಕಾಡುಮನೆ ಪ್ರಸನ್ನ ಕಾಂಗ್ರೆ ಮತ್ತು ಜೆಡಿಎಸ್‌ನ ಅತೃಪ್ತ ನಾಯಕರನ್ನು ತಮ್ಮೆಡೆ ಸೆಳೆದು ಪ್ರಬಲ ಸ್ಪರ್ಧೆ ನೀಡುತ್ತಿದ್ದರೆ, ಜೆಡಿಯುನ ಬಿ. ಸೋಮಶೇಖರ್ ತಿಣುಕುತ್ತಿದ್ದಾರೆ. ಎರಡೆರಡು ಬಾರಿ ಸೋತಿರುವ ಬಿಜೆಪಿಯ ಕಲ್ಯಾಣಿ ಮಹದೇವಯ್ಯ ಬಿಜೆಪಿಯ ಅಲೆಯ ನಿರೀಕ್ಷೆಯಲ್ಲಿದ್ದಾರೆ. ಕಾಂಗ್ರೆನ ಬಂಡಾಯ ಅಭ್ಯರ್ಥಿ ನರೇಂದ್ರ ಸ್ವಾಮಿ, ಅಧಿಕೃತ ಅಭ್ಯರ್ಥಿ ಸಿದ್ಧರಾಜುಗೆ ಬ್ರೇಕ್ ಹಾಕಲಿದ್ದಾರೆ. ಅಂತಿಮವಾಗಿ ಎಲ್ಲರೂ ಪರಿಶಿಷ್ಟ ಅಭ್ಯರ್ಥಿಗಳಾಗಿರುವುದರಿಂದ ಕ್ಷೇತ್ರಕ್ಕೆ ನಿರ್ಣಾಯಕ ಮತದಾರರಾಗಿರುವ ಒಕ್ಕಲಿಗರು, ಲಿಂಗಾಯತರು ಯಾರೆಡೆಗೆ ಒಲಿಯುವರೋ ಅವರಿಗೆ ಗೆಲುವು ಕಟ್ಟಿಟ್ಟಬುತ್ತಿ. ನರೇಂದ್ರ ಸ್ವಾಮಿ ಆ ಅದೃಷ್ಟಶಾಲಿಯಾಗಬಹುದು.

ಮದ್ದೂರು: ಸಿದ್ದರಾಜು ತೆಕ್ಕೆಗೆ

ಮಾಜಿ ಶಾಸಕ ಡಿ.ಸಿ. ತಮ್ಮಣ್ಣನಿಗೆ ಟಿಕೆಟ್ ನೀಡಿರುವುದಕ್ಕೆ ಸ್ವತಃ ಕೃಷ್ಣರ ಸಹೋದರ ಎಸ್.ಎಂ. ಶಂಕರ್ ಬಿಜೆಪಿಯ ಪರ ಬಹಿರಂಗ ಪ್ರಚಾರಕ್ಕಿಳಿದಿದ್ದಾರೆ. ಮಾಜಿ ಸಂಸದ ಜಿ. ಮಾದೇಗೌಡರ ಪುತ್ರ ಮಧು ಇಲ್ಲಿ ಬಿಜೆಪಿ ಅಭ್ಯರ್ಥಿ. ಕಳೆದ ಬಾರಿ ದೇವೇಗೌಡರ ಬಿ ಫಾರಂ ಪ್ರಹಸನದಿಂದ ಗೆಲುವಿನಿಂದ ದೂರವುಳಿದ ಸಿದ್ಧರಾಜು ಜೆಡಿಎಸ್ ಪರವಾಗಿ ಅಭ್ಯರ್ಥಿ. ಇವರು ಉಳಿದವರಿಗಿಂತ ಮುಂದಿದ್ದಾರೆ. ತಮ್ಮಣ್ಣ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಕುಮಾರಸ್ವಾಮಿ ಈ ಸಾರಿ ಸಿದ್ಧರಾಜು ಪರವಾಗಿ ಸ್ಪಷ್ಟವಾಗಿ ಬೆಂಬಲಿಸಿರುವುದು ಅನುಕೂಲ ಮಾಡಿಕೊಟ್ಟು ಸಿದ್ಧರಾಜು ಪರ ಕ್ಷೇತ್ರದಲ್ಲಿ ಸಿಂಪಥಿಯಿದೆ. ಎಸ್.ಎಂ. ಶಂಕರ್ ಬಣ ತಟಸ್ಥವಾಗದಿದ್ದರೆ, ಬಿಜೆಪಿಗೆ ಅವಕಾಶವಾಗಬಹುದೇನೋ, ಅಂತಿಮವಾಗಿ ಜೆಡಿಎಸ್ ಮತ್ತು ಬಿಜೆಪಿ ನಡುವೆ ಇಲ್ಲಿ ಸ್ಪರ್ಧೆ ಸಾಗಿದ್ದು ಜೆಡಿಎಸ್‌ನ ಸಿದ್ಧರಾಜು ಪರಿಸ್ಥಿತಿ ಆಶಾದಾಯಕವಾಗಿದೆ.


ಮಧು


ರಾಮನಗರ:ಕಾಂಗ್ರೆ-ದಳ ಸಮಪಾಲು

ರಾಮನಗರ ಜಿಲ್ಲೆಯಲ್ಲಿ ರಾಜಕೀಯ ಕಲಿಗಳ ಗುದುಮುರಿ ಶುರುವಾಗಿದೆ. ಇಡೀ ಕರ್ನಾಟಕ ಜನತೆಯು ಕಣ್ಣಳತೆಯ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿರುವ ರಾಮನಗರದಲ್ಲಿ ಕುಮಾರಣ್ಣ ಮತ್ತೆ ಎದ್ದು ಬರೋದು ಎಷ್ಟು ನಿಚ್ಚಳವೋ, ಹಾಗೆಯೇ ಕನಕಪುರದಲ್ಲಿ ಡಿಕೇಶಿ ಪುನಃ ಗೆದ್ದು ತನ್ನ ಪಾರುಪತ್ಯ ಸಾರಲು ಟೊಂಕ ಕಟ್ಟಿ ನಿಂತಾಗಿದೆ. ಚನ್ನಪಟ್ಟಣದಲ್ಲಿ ನಟಭಯಂಕರ ಯೋಗೀಶ್ವರ್‌ಗೆ ಅಳಿವು ಉಳಿವಿನ ಪ್ರಶ್ನೆಯಾದರೆ ಮಾಗಡಿಯಲ್ಲಂತೂ ಮಾಜಿ ಶಾಸಕ ಬಾಲಕೃಷ್ಣ ತಿಣುಕಾಡಿಯಾದರೂ ಗೆದ್ದೇತೀರುವ ಧಾವಂತದಲ್ಲಿದ್ದಾರೆ.




ಕನಕಪುರದ ಕಾಳಗದಲ್ಲಿ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಆರ್ಭಟ ಜೋರಾಗಿಯೇ ನಡೆದಿದೆ. ಡಿಕೆಶಿಗೆ ಎದುರಾಳಿಯಾಗಿ ನಿಂತಿರುವ ಜೆಡಿಎಸ್‌ನ ಡಿ.ಎಂ. ವಿಶ್ವನಾಥ್‌ಗೆ ಡಿಕೇಶಿಯ ಅಬ್ಬರ ನಡುವಿಗೆ ಉಳಿಮಡಗಿದಂತಾಗಿದೆ. ಕಾಂಗ್ರೆಸ್ ಗೆಲುವಿಗೆ ಮುಖಂಡರಾದ ಎಸ್. ರವಿ, ಡಿ.ಕೆ. ಸುರೇಶ್, ಎಂ.ಡಿ. ವಿಜಯದೇವ್, ವಿಶ್ವನಾಥ್, ಹೊನ್ನಿಗನಹಳ್ಳಿ ಶ್ರೀಕಂಠುರಂಥವರು ಟೊಂಕಕಟ್ಟಿ ನಿಂತಿದ್ದರೆ, ಇನ್ನೊಂದೆಡೆ ಟಿಕೆಟ್ ಸಿಗದೆ ಬೇಸತ್ತಿರುವ ನಾರಾಯಣಗೌಡನ ಬಣ ಹಾಗೂ ಸೂರನಹಳ್ಳಿ ಜಯರಾಮ, ಆಲಸೂರು ಸಿದ್ಧರಾಜು, ಹೊನ್ನಿಗನಹಳ್ಳಿ ಶ್ರೀಕಂಠುರಂತಹ ಮಖೇಡಿಗಳು ಒಳಗೊಳಗೆ ಜೆಡಿಎಸ್ ಅಭ್ಯರ್ಥಿ ಪರ ಬೆಂಬಲಕ್ಕಿಳಿದಿದ್ದಾರೆಂಬ ಪುಕಾರಿದೆ. ಅಖಾಡದಲ್ಲಿ ಕೊನೆಗೆ ಗೆಲ್ಲೋದು ಮಾತ್ರ ಡೀಕೇಶಿಯೇ. ಯಾಕೆಂದರೆ ಕೋಡಿಹಳ್ಳಿ, ಉಯ್ಯಂಬಳ್ಳಿ, ಸಾತನೂರು ಹೋಬಳಿಗಳಲ್ಲಿ ಡೀಕೇಶಿಯ ಪರವಾದ ಓಟುಗಳಿವೆ. ಕನಕಪುರ ಕಸಬಾದಲ್ಲಿ ವಿಶ್ವನಾಥ್ ಹೋರಾಟ ಕೊಟ್ಟರೂ, ಟೌನ್‌ನಲ್ಲಿ ಕಾಂಗ್ರೆಸ್‌ಗೆ ಕೈಕೊಟ್ಟರೂ, ಡಿ.ಕೆ. ಗೆಲುವಿಗೆ ಅಡ್ಡಿಯಿಲ್ಲ, ಕನಕಪುರದಲ್ಲಿ ಡಿಕೆ ಆನೆಯಾದರೆ ದಳದ ವಿಶ್ವನಾಥ್ ಆಡಿನ ಮರಿ ಥರ ಅಷ್ಟೆ.

ರಾಮನಗರ-ಕುಮಾರಸ್ವಾಮಿ ಗೆದ್ದಾಗಿದೆ



ಯಾವಾಗ ರಾಮನಗರ ಕ್ಷೇತ್ರದ ಜನತೆಗಿರಲಿ, ಮುಖಂಡರಿಗೇನೆ ಗುರುತು ಪರಿಚಯವಿಲ್ಲದ ಹೆಗಡೆ ಪುತ್ರಿ ಮಮತಾ ನಿಚ್ಚಾನಿಯನ್ನು ಕಾಂಗ್ರೆಸ್ ಕಣಕ್ಕಿಳಿಸಿತೋ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅನಾಯಾಸವಾಗಿ ಗೆಲ್ಲುವುದು ಗ್ಯಾರಂಟಿಯಾಗಿ ಹೋಯಿತು. ದೇವೇಗೌಡರ ಕುಟುಂಬಕ್ಕೆ ಸ್ತ್ರೀಯಿಂದಲೇ ಶಾಸ್ತಿ ಅಂತ ಅದ್ಯಾವ ಗಳಿಗೆಯಲ್ಲಿ ಜ್ಯೋತಿಷಿ ಪುಂಗಿ ಊದಿದನೋ, ನಿಚ್ಚಾನಿಯನ್ನು ಹಿಡಿದು ತಂದು ಅಖಾಡಕ್ಕಿಳಿಸಲಾಗಿದೆ. ಟಿಕೆಟ್ ಆಕಾಂಕ್ಷಿಯಾಗಿ ಬಕಪಕ್ಷಿಯಂತೆ ಕಾದು ಕುಂತಿದ್ದ ಸಿ.ಎಂ. ಲಿಂಗಪ್ಪ ಕನಲಿಹೋಗಿ ರಾಜಿಯಾಗಿದ್ದರೂ, ಆಂತರ್ಯದ ಬೇಗುದಿ ಕೊತಕೊತನೆ ಕುದಿಯುತ್ತಿದೆ. ಅಲ್ಲದೇ ತಾಲ್ಲೂಕು ಅಧ್ಯಕ್ಷ ರಮೇಶ್, ನಾಗಣ್ಣ ಮರಿದೇವರು ಮುಂತಾದ ಮುಖಂಡರು ನಿಚ್ಚಾನಿಯ ವಿರುದ್ಧ ತಲೆ ಅಲ್ಲಾಡಿಸತೊಡಗಿದ್ದಾರೆ.



ಇನ್ನೂ ಚಿಡ್ಡಿ ಬಿಜೆಪಿಯಿಂದ ಕಾದಾಟಕ್ಕಿಳಿದಿರುವ ನೈಸ್ ಖೇಣಿಯ ಮಾನಸಪುತ್ರನಂತೆ ಪೋಸು ಕೊಡುತ್ತಿದ್ದಾರೆ ರುದ್ರೇಶ್. "ನಾನೇ ಕಣ್ರಿ ಗೆಲ್ಲೋದು ನಮ್ ಧಣಿ ಎಷ್ಟೇ ಖರ್ಚಾದ್ರೂ ಪರ್ವಾಗಿಲ್ಲ ಗೆದ್ದು ಬಾ ಅಂದವ್ರೆ" ಅಂತೆಲ್ಲಾ ಓತ್ಲಾ ಹೊಡೆಯುತ್ತಿರುವ ರುದ್ರೇಶ್ ತಾನೆಷ್ಟೇ ಲಿಂಗಾಯತರ ನಾಯಕನೆಂದು ಪೋಜು ಕೊಟ್ಟರೂ ಖೇಣಿಯ ಆಸೆಯನ್ನು ಈಡೇರಿಸಲಾಗುತ್ತಿಲ್ಲ, ರಾಮನಗರದ ಸುತ್ತಮುತ್ತಲಿನ ಜಮೀನನ್ನೆಲ್ಲಾ ಹೋಲ್‌ಸೇಲಾಗಿ ಅಶೋಕ್ ಖೇಣಿಯ ಮಡಿಲಿಗೆ ಅರ್ಪಿಸಿ, ಬಡರೈತರಿಗೆ ಉಂಡೆನಾಮ ತಿಕ್ಕಿದ ರುದ್ರೇಶ್ ತನ್ನ ರಿಯಲ್ ಎಸ್ಟೇಟ್‌ನಿಂದ ಬಂದ ಹಡಬೆ ದುಡ್ಡು ಹಾಗೂ ಖೇಣಿಯ ಥೈಲಿ ಎಷ್ಟೇ ಸುರಿದರೂ ರುದ್ರೇಶ್ ಚುನಾವಣೆಯ ರುದ್ರಭೂಮಿಗೆ ಸರಿಯೋದು ಶತಸಿದ್ಧ.

ಕುಮಾರಸ್ವಾಮಿ ರಾಮನಗರವನ್ನು ಜಿಲ್ಲೆಯಾಗಿಸಿ, ಮಾಡಿದ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಕೈಹಿಡಿದು ಮತ್ತೆ ಗೆಲುವಿನಿಂದ ಪ್ರಜ್ವಲಿಸೋದು ನೂರಕ್ಕೆ ನೂರರಷ್ಟು ಖಚಿತ.

ಚನ್ನಪಟ್ಟಣ-ಯೋಗೀಶ್ವರ್‌ಗೆ ಕಷ್ಟ ಕಾಲ



ಚೆನ್ನಪಟ್ಟಣದಲ್ಲಿ ಎತ್ತಲಿಂದ ತೂಗಿದರೂ, ಗೆಲುವಿನ ಆನೆ ಪಟಾಕಿ ಹೊಡೆಯುವ ಮುಂಚೂಣಿಯಲ್ಲಿ ಕಾಂಗ್ರೆಸ್‌ನ ಸಿ.ಪಿ. ಯೋಗೀಶ್ವರ ಸ್ವಲ್ಪ ಮುಂದಿದ್ದಾರೆ. ಈ ಸಲ ಮುಸ್ಲಿಂ ಸಮುದಾಯದ ಮತಗಳು ಹಾಗೂ ದಲಿತರ ಓಟುಗಳು ಅಕಸ್ಮಾತ್ ಬಿಎಸ್‌ಪಿ ಅಭ್ಯರ್ಥಿ ಮುಕರಂ ಪಾಲಾದರೆ ಅದೇ ಕಾಂಗ್ರೆಸ್ ಗೆಲುವಿಗೆ ಮುಳುವಾಗಬಹುದು. ಯಾವಾಗಲೂ ಲೇಡಿಸ್ಸು-ಯೂತ್ಸ್ ಮತಗಳೊಂದಿಗೆ ಒಂದಷ್ಟು ಸಾಂಪ್ರದಾಯಿಕ 'ಕೈ' ಮತಗಳಿಂದ ಗೆಲುವಿನ ಭಾಷ್ಯಾ ಬರೆಯುತ್ತಿದ್ದ ಯೋಗೀಶ್‌ಗೆ ಈ ಸಲ ಜಯಮಾಲೆ ತುಸು ಕಷ್ಟವಾಗಿಯೇ ಇದೆ. ಕಳೆದ ಸಲ ಸೋತು ಅನುಕಂಪದ ಅಲೆ ಗಿಟ್ಟಿಸಹೊರಟಿರುವ ಜೆಡಿಎಸ್‌ನ ಅಶ್ವತ್ಥ್‌ಗೆ ಪಕ್ಷದ ಆಂತರಿಕ ಜಗಳ ವೈಮನಸ್ಸು ಸೋಲಿಗೆ ಎರಕವಾಗಲೂಬಹುದು. ಆದರೂ ಈಗಾಗಲೇ ಕ್ಷೇತ್ರದಲ್ಲಿ ಅಬ್ಬರದ ಆರ್ಭಟದಲ್ಲೇ ಶುರುವಿಟ್ಟಿರುವ ಅಶ್ವತ್ಥ್‌ಗೆ ಗೆಲುವು ಕೂಗಳತೆಯಲ್ಲೇನಿಲ್ಲ. ಕೊನೆಗೆ ಏನೇ ಇದ್ದರೂ ಅತ್ಯಲ್ಪ ಮತಗಳಿಂದ ಯೋಗೀಶಿಯೇ ಗೆಲ್ಲುವ ಛಾನ್ಸ್ ಇದೆ. ಬಿಜೆಪಿ ಆಟಕ್ಕುಂಟು ಲೆಕ್ಕಕ್ಕಿಲ್ಲದಂತಾಗಿದೆ.

ಮಾಗಡಿ: ಮತ್ತೆ ಬಾಲಕೃಷ್ಣ




ಮಾಗಡಿಯಲ್ಲಂತೂ ಮತ್ತೆ ಜೆಡಿಎಸ್‌ನ ಬಾಲಕೃಷ್ಣ ಗೆಲ್ಲುವ ಛಾನ್ಸೆ ಹೆಚ್ಚಿದೆ. ಕಾಂಗ್ರೆಸ್‌ನಿಂದ ಟಿಕೆಟ್ ದಕ್ಕದೇ ದುಮುದುಮು ಬೇಗುದಿಯಲ್ಲಿರುವ ಜೇಡರಹಳ್ಳಿ ಕೃಷ್ಣಪ್ಪ ಮತ್ತೆ ಕಮಲದೊಂದಿಗೆ 'ಕೈ' ಜೋಡಿಸಿರುವುದರಿಂದ ಸೀತಾಫಲ ಗಿರಾಕಿ ಪಿ. ನಾಗರಾಜು ಲಕಲಕಿಸುತ್ತಿದ್ದರೂ, ಇನ್ನೊಂದೆಡೆ ಟಿಕೆಟ್ ವೈಫಲ್ಯದಿಂದಾಗಿ ಹತಾಶೆಗೆ ಬಿದ್ದಿರುವ ಮಾಗಡಿ ಕಮಲಮ್ಮನ ದಂಡು ಒಳಗೊಳಗೆ ಜೆಡಿಎಸ್‌ಗೆ ಬೆಂಬಲಿಸುತ್ತಿದೆ. ಹಾಗಾಗಿ ಕಾಂಗ್ರೆಸ್‌ನ ಕಲ್ಪನಾ ಶಿವಣ್ಣ ಗೆಲುವಿಗಾಗಿ ಏದುಸಿರುಬಿಡುವಂತಾಗಿರುವುದು ಸುಳ್ಳೇನಲ್ಲ. ಟಿಕೆಟ್ ಸಿಗದವರ ಆಂತರ್ಯದ ಹಾರಾಟ, ವಿರೋಧದ ನಡುವೆಯೂ ಗೆಲುವು ಕಾಣಲು ಹಪಾಹಪಿಸುತ್ತಿರುವ ಕಾಂಗ್ರೆಸ್‌ನ ಕಲ್ಪನಾ ಶಿವಣ್ಣ, ಬಿಜೆಪಿಯ ಪಿ. ನಾಗರಾಜು ಹಾಗೂ ಬಾಲಕೃಷ್ಣರ ನಡುವೆ ಟ್ರಯಾಂಗಲ್ ಸ್ಪರ್ಧೆ ಏರ್ಪಟ್ಟಿದೆಯಾದರೂ ಕೊನೆಗೆ ಜೆಡಿಎಸ್‌ನ ಬಾಲಕೃಷ್ಣ ಗೆಲ್ಲುವ ಛಾನ್ಸ್ ಹೆಚ್ಚಿದೆ.

ರಿಯಾಪಟ್ಟಣ: ಕಾಂಗ್ರೆಸ್‌ನ ವೆಂಕಟೇಶ್‌ಗೆ ಗೌಡ ಫಿಟ್ಟಿಂಗ್

ಸಿದ್ದರಾಮಯ್ಯ ಬೆಂಬಲಿಗ ಕೆ.ವೆಂಕಟೇಶ್ ದಳ ತ್ಯಜಿಸಿ ಕಾಂಗ್ರೆಸ್ ಸೇರಿ ಟಿಕೆಟ್ ಪಡೆದಿದ್ದಾರೆ. ಇಲ್ಲಿ ಎಸ್‌ಎಸ್ ಹಿನ್ನೆಲೆಯ ಗಣೇಶ ಬಿಜೆಪಿ ಅಭ್ಯರ್ಥಿ. ಬಿಜೆಪಿ ಸಂಸದ ವಿಜಯಶಂಕರ ನೆಂಟರಾದ ಗಣೇಶ್‌ಗೆ ದ ಟಿಕೆಟ್ ವಂಚಿತ ಹೆಚ್.ಸಿ.ಬಸವರಾಜು ಬೆಂಬಲವೂ ಸಿಕ್ಕಿದೆ. ಜೊತೆಗೆ ಸಿದ್ದು ಶಿಷ್ಯ ವೆಂಕಟೇಶ್‌ರನ್ನು ಲಿಸಲು ದೇವೇಗೌಡರು ದಳದಿಂದ ದಮ್ಮಿ ಕ್ಯಾಂಡಿಡೇಟ್ ಹಾಕಿಸಿದ್ದಾರೆ.


ಹಾಗಾಗಿ ಇಲ್ಲಿ ಕಾಂಗ್ರೆಸ್‌ನ ವೆಂಕಟೇಶ್‌ಗೆ ಬಿಜೆಪಿಯ ಗಣೇಶ ನೇರ ಸ್ಪರ್ಧೆಯೊಡ್ಡುತ್ತಿದ್ದಾರೆ. ಇಲ್ಲಿ ಗಣೇಶ ಲುಗೈ ಸಾಧಿಸಿರುವಂತೆ ಕಂಡರೂ ಕೂಡಾ ಕಾಂಗ್ರೆ ಅಥವಾ ಬಿಜೆಪಿ ಯಾರೇ ಗೆದ್ದರೂ ಗೆಲುವಿನ ಅಂತರ ೀ ಕಡಿಮೆ ಇರುತ್ತದೆ.

ಣಸೂರು: ಕಾಂಗ್ರೆನ ಮಂಜುನಾಥ್‌ಗೆ ಅಡೆತಡೆ




ದಳದ ಚಿಕ್ಕಮಾದು ಹಾಗೂ ಬಿಜೆಪಿಯ ಜಿ.ಟಿ. ದೇವೇಗೌಡರಿಗೆ ಹೋಲಿಸಿದರೆ ಗ್ರೆಸ ಎಚ್.ಪಿ.ಮಂಜುನಾಥ್ ತೀರಾ ಕಡಿಮೆ ಸಂಖ್ಯೆಯ ವೈಶ್ಯ ಜನಾಂಗದವರು. ರೆ ಕಾಂಗ್ರೆಸ್‌ಗೆ ಇಲ್ಲಿ ದಲಿತ, ಹಿಂದುಳಿದವರ ಪೂರ್ಣ ಬೆಂಬಲ ಇದೆ. ಜೊತೆಗೆ ಲಿಗರ ಬೆಂಬಲ ಯಾರಿಗೆಂಬುದರ ಮೇಲೆ ಸೋಲು-ಗೆಲುವು ತೀರ್ಮಾನವಾಗುತ್ತದೆ. ು ದಕ್ಕಿದರೆ ಕಾಂಗ್ರೆಸ್‌ನ ಮಂಜುನಾಥ್‌ಗೆ ಹಾದಿ ಸುಗಮ.

ಚ್.ಡಿ. ಕೋಟೆ: ನಾಯಕರ ನಾಯಕ ಯಾರು?




ಇದು ಮೀಸಲು ಕ್ಷೇತ್ರ. ಕಾಂಗ್ರೆಸ್‌ನಿಂದ ಜಿ.ಪಂ. ಸದಸ್ಯ ಹಾಗೂ ಎಸ್.ಎಂ.ಕೃಷ್ಣ ಬಲಿಗ ಬೀಚನಹಳ್ಳಿ ಚಿಕ್ಕಣ್ಣ ಇದ್ದಾರೆ. ಬಂಡಾಯ ಕಾಂಗ್ರೆಯಾಗಿ ಅಹಿಂದ ಮುಖಂಡ ಪ್ಪಣ್ಣ ನಿಂತಿದ್ದಾರೆ. ಸಿದ್ದರಾಮಯ್ಯ ಬೆಂಬಲಿತ ಅಭ್ಯರ್ಥಿ ಇವರು. ಇನ್ನು ಬಿಜೆಪಿಯಿಂದ ವೀರನಾಯಕ ಸ್ಪರ್ಧಿಸಿದ್ದು, ಇವರಿಗೆ ಜಿ.ಟಿ. ದೇವೇಗೌಡರ ನೆರವೂ ಸಿಕ್ಕಿದೆ. ಬಂಡಾಯ ಕಾಂಗ್ರೆಸ್‌ನ ಅಪ್ಪಣ್ಣನ ರಭಸ ಇಲ್ಲಿ ಎದ್ದು ಕಾಣುತ್ತಿದೆ. ಎಸ್.ಎಂ.ಕೃಷ್ಣ ಬರದಿದ್ದಲ್ಲಿ ಅಪ್ಪಣ್ಣ ಕಾಂಗ್ರೆನ ಅಧಿಕೃತ ಅಭ್ಯರ್ಥಿಯಾಗಿ ಗೆಲ್ಲುವುದು ಹಂಡ್ರೆಡ್ ೯ಂಟ್ ಗ್ಯಾರಂಟಿಯಿತ್ತು, ಈಗಲೂ ಕೂಡಾ ಫಲಿತಾಂಶವೇನೂ ಬದಲಾಗುವಂತೆ ುತ್ತಿಲ್ಲ.

.ನರಸೀಪುರ: ಮಹದೇವಪ್ಪ ಪರ ಒಲವು



ಕಾಂಗ್ರೆಸ್‌ನ ಡಾ|| ಎಚ್.ಸಿ. ಮಹಾದೇವಪ್ಪ ಕ್ಷೇತ್ರದಲ್ಲಿ ಜಾಸ್ತಿ ಕೆಲಸ ಮಾಡಿಲ್ಲ ಬ ದೂರಿದ್ದಾಗಲೂ ಅದೇಕೋ ಕ್ಷೇತ್ರದ ಜನ ಮತ್ತೆ ಮಹಾದೇವಪ್ಪ ಪರ ಒಲವು ೇರುತ್ತಿದ್ದಾರೆ. ಸೈದ್ಧಾಂತಿಕ ಭ್ರಷ್ಟಾಚಾರಿ ಸುಭಾಷ್ ಭರಣಿ ಬಿಜೆಪಿ ಸೇರಿ ಕಣಕ್ಕಿಳಿದಿರುವುದು ತದಾರರಿಗೆ ಅಸಹ್ಯ ಹುಟ್ಟಿಸಿದೆ. ಅದೆಲ್ಲ ಕಾಂಗ್ರೆಸ್‌ಗೆ ಅನುಕೂಲವಾಗಿದೆ. ಜೊತೆಗೆ ಜೆಪಿಯ ಸ್ಥಳೀಯ ಮುಖಂಡ ಪುಟ್ಟಬಸವಯ್ಯ ಬಂಡಾಯ ಅಭ್ಯರ್ಥಿಯಾಗಿ ್ಧಿಸಿರುವುದು ಭರಣಿಗೆ ಕಾಲೆಳೆದಂತೆ ಆಗಿದೆ. ಬಿಎಸ್‌ಪಿಯ ಗುರಪ್ಪಾಜಿಯನ್ನು ್ಕಿಸುವಂತಿಲ್ಲ, ದಳದ ಸ್ಪರ್ಧಿ ಸುಂದರೇಶ್ ಆಟಕ್ಕುಂಟು ಲೆಕ್ಕಕ್ಕಿಲ್ಲ, ಬೆಂಗಳೂರಿನ ಭರಣಿಯನ್ನು ಗೆಲ್ಲಿಸಿದರೂ ಜನರ ಕೈಗೆ ಸಿಗಲಾರ. ಹಾಗಾಗಿ ಅಲ್ಲೆ ಇರುವ ಮಹಾದೇವಪ್ಪ ಬೆಟರ್ ಎಂಬ ಅಭಿಪ್ರಾಯ ಜನರದ್ದು.

ಂಜನಗೂಡು: ಶ್ರೀನಿವಾಸ್ ಪ್ರಸಾದ್ ಮುನ್ನಡೆ



ಮೀಸಲು ಕ್ಷೇತ್ರವಾದ ನಂಜನಗೂಡಿನಿಂದ ಜಯಕುಮಾರ್ ಮತ್ತು ಬೆಂಕಿ ಮಹಾದೇವು ಹೋದ ಮೇಲೆ ಈಗಲ್ಲಿ ಶ್ರೀನಿವಾಸ್ ಪ್ರಸಾದ್ ಒಬ್ಬರೇ ನಾಯಕ. ಬಿಜೆಪಿಯಿಂದ ಕಿ ಮಹಾದೇವು ಬೆಂಬಲಿಗ ಎನ್. ಮಹಾದೇವಯ್ಯ, ದಳದಿಂದ ಕಳಲೆ ಕೇಶವಮೂರ್ತಿ ಗೂ ಬಿಎಸ್‌ಪಿಯಿಂದ ಸಿ.ಎಂ. ಮಹಾದೇವಪ್ಪ ಅಖಾಡದಲ್ಲಿದ್ದಾರೆ. ಶ್ರೀನಿವಾಸ್ ಾದ್ ಗೆಲುವಿಗೆ ಇಲ್ಲಿ ಅಂತಾ ಅಡೆತಡೆಗಳಿಲ್ಲ.

ೕರಂಗಪಟ್ಟಣ: ಅಂಬಿ ರೇಸಿನಲ್ಲಿ ಮುಂದೆ



ಕಾಂಗ್ರೆಸ್ ತಮಗೆ ಕೊಟ್ಟ ಬಿ ಫಾರಂ ಹಿಂಪಡೆದ್ದರಿಂದ ರೊಚ್ಚಿಗೆದ್ದ ರವೀಂದ್ರ ಶ್ರೀಕಂಠಯ್ಯ ಶಾಂತವಾಗಿದ್ದಾರೆ. ಇತರೆ ನಾಯಕರನ್ನು ತಮ್ಮ ಬುಟ್ಟಿಗೆ ತುಂಬಿಕೊಳ್ಳುತ್ತಿರುವ ಅಂಬರೀಷ್ ಮುಂದಿದ್ದಾರೆ. ಅಂಬರೀಷ್ ಗೆದ್ದರೂ ಕೈಗೆ ಸಿಗುವುದಿಲ್ಲವೆಂಬ ಆರೋಪವಿದ್ದರೂ ್ಯಾವುದೂ ಅಂಬಿಯ ಓಟಕ್ಕೆ ಬ್ರೇಕ್ ಹಾಕಿಲ್ಲ. ಹಳೆಯ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಲವಾಗಿರುವ ರೈತ ಸಂಘದ ನಂಜುಂಡೇಗೌಡ ತಗ್ಗಹಳ್ಳಿ ಹಿನ್ನೆಡೆಯಲಿದ್ದಾರೆ. ಬಿಜೆಪಿಯ ಜಾ ಸಂತೋಷ್ ಸಾಂಪ್ರದಾಯಿಕ ಮತಗಳನ್ನಷ್ಟೇ ನೆಚ್ಚಿಕೊಳ್ಳಬೇಕು. ಬಿಎಸ್‌ಪಿಯ ಲಿಂಗಯ್ಯ ನರ್ಹ ಮತಗಳನ್ನು ಪಡೆಯಲಿದ್ದಾರೆ. ಇಲ್ಲಿ ಕಾಂಗ್ರೆನ ಅಂಬರೀಷ್, ಜೆಡಿಎಸ್‌ನ ರಮೇಶ್ ಬಾಬು ಮತ್ತು ರೈತ ದ ನಂಜುಂಡೇಗೌಡ ನಡುವೆ ತ್ರಿಕೋನ ಸ್ಪರ್ಧೆಯಿದೆ. ನಾಲ್ಕು ಬಾರಿ ಸೋತಿರುವ ರೈತ ಸಂಘದ ನಂಜುಂಡೇಗೌಡರಿಗೆ ಗಪಟ್ಟಣ ಒಲಿಯುವುದೇ ಕಾದು ನೋಡಬೇಕು.

ೀಲುಕೋಟೆ : ಪುಟ್ಟಣ್ಣಯ್ಯ ಮುಂದೆ



ರೈತ ಸಂಘದ ಪುಟ್ಟಣ್ಣಯ್ಯ ಸ್ಥಿತಿ ಇಲ್ಲಿ ಉತ್ತಮವಾಗಿದೆ. ಕ್ಷೇತ್ರದುದ್ದಕ್ಕೂ ರೈತಸಂಘದ ಣ್ಣಯ್ಯ ಮತ್ತು ಜೆಡಿಎಸ್‌ನ ಪುಟ್ಟರಾಜುವಿನ ನಡುವೆ ನೇರ ಸ್ಪರ್ಧೆ ಸಾಗಿದೆ. ಮೊದಲಿನಿಂದಲೂ ಒಣ ಪ್ರದೇಶ ಮತ್ತು ನೀರಾವರಿ ಪ್ರದೇಶವಾಗಿ ರಾಜಕೀಯ ಜಂಗಿಕುಸ್ತಿ ನಡೆದಿದೆ. ಆ ದಲ್ಲಿ ಬಿಜೆಪಿಯ ಕೆಂಪೇಗೌಡ ಪುಟ್ಟರಾಜುವಿಗೆ ಕೊಂಚ ಹಿನ್ನೆಡೆ ಆಗಲಿದ್ದು, ಕಾಂಗ್ರೆಸ್‌ನ ೇಗೌಡ ಪುಟ್ಟಣ್ಣಯ್ಯನವರ ಕೆಲವು ಮತ ಕಸಿಯಲಿದ್ದಾರೆ. ಶೀಳನೆರೆ ಹೋಬಳಿ ಕೆ.ಆರ್. ಗೆ ಸೇರ್ಪಡೆಗೊಂಡಿರುವುದು ಪುಟ್ಟರಾಜುವಿಗೆ ಮತ್ತೊಂದು ಹೊಡೆತ. ಕ್ಷೇತ್ರಕ್ಕೆ ಹೊಸದಾಗಿ ಡೆಯಾಗಿರುವ ದುದ್ದ ಹೋಬಳಿ ನಿರ್ಣಾಯಕವಾಗಲಿದೆ. ಸದ್ಯ ರೈತ ಸಂಘದ ಪುಟ್ಟಣ್ಣಯ್ಯ ಸ್ಪರ್ಧೆಯಲ್ಲಿ ದಿದ್ದು, ಗೆಲುವಿನ ಸನಿಹದಲ್ಲಿದ್ದಾರೆ.

ಆರ್. ಪೇಟೆ: ಬಿಜೆಪಿಗೆ ಭರವಸೆ



ಜಿಲ್ಲೆಯಲ್ಲಿ ಖಾತೆ ತೆರೆಯಬಹುದೆಂದು ಬಿಜೆಪಿ ನಂಬಿಕೊಂಡಿರುವ ಕೆ.ಆರ್. ಪೇಟೆಯಲ್ಲಿ ಸ್ ಪ್ರಕಾಶ್ ಕೃಷ್ಣರಿಗೆ ಆಡಳಿತ ವಿರೋಧಿ ಅಲೆ ಅಡ್ಡಗಾಲಿಕ್ಕಿದೆ. ಬಿಜೆಪಿಯಿಂದ ಸಿರುವ ಪ್ರಕಾಶ್ ಒಂದೊಮ್ಮೆ ಪಕ್ಷೇತರವಾಗಿ ಗೆಲುವು ಕಂಡವರು. ಸದ್ಯ ಯಡಿಯೂರಪ್ಪನ ಪ್ಪರು, ಬಿಜೆಪಿ ಅಲೆ, ಅಹಿಂದ ವರ್ಗದ ಜೊತೆ ಉತ್ತಮ ಸಂಬಂಧವಿರುವ ಪ್ರಕಾಶ್ ಗಿಂತ ಮುಂದಿದ್ದಾರೆ. ಕಾಂಗ್ರೆಸ್‌ನ ಕೆ.ಬಿ. ಚಂದ್ರಶೇಖರ್ ಪೈಪೋಟಿ ನೀಡುತ್ತಿದ್ದಾರೆ. ಪಿಯ ಅಭ್ಯರ್ಥಿ ಉದ್ಯಮಿ ಕೆ.ಸಿ. ನಾರಾಯಣಗೌಡ, ಹಣದ ಹೊಳೆಯನ್ನು ಹರಿಸಿದ್ದಾರೆ. ಬಿಜೆಪಿ, ಕಾಂಗ್ರೆಸ್, ಬಿಎಸ್‌ಪಿ ನಡುವೆ ಸ್ಪರ್ಧೆಯಿದ್ದು ಬಿಜೆಪಿ ಇಲ್ಲಿ ಮುಂದಿದೆ.

■ ಎಂ.ಬಿ. ನಾಗಣ್ಣ

ಶಿವಮೊಗ್ಗ: ಕಾಂಗ್ರೆಸ್ ಮೇಲುಗೈ!

ಚುನಾವಣೆ 2008

■ ಕಡೇನಂದಿಹಳ್ಳಿ ಕುಮಾರ್

ಶಿವಮೊಗ್ಗ: ಕಾಂಗ್ರೆಸ್ಸಿನ ಮೂರ್ಖತನ



ಅತ್ತ ಶಿಕಾರಿಪುರದಲ್ಲಿ ಯಡ್ಡಿ ಅಪಾಯಕ್ಕೆ ಸಿಲುಕಿರುವುದು ಇತ್ತ ಈಶ್ವರಪ್ಪನಿಗೆ ಖುಷಿ ಕೊಟ್ಟಿದೆ. ಬಂಗಾರಿ ಎಲ್ಲಿ ಬಂದು ಶಿವಮೊಗ್ಗದಲ್ಲಿ ಸ್ಪರ್ಧಿಸಿಬಿಡುತ್ತಾರೋ ಎಂಬ ಭಯ ಆತನಿಗೆ ಮೊದಲಿನಿಂದಲೂ ಇತ್ತು. ಈಗ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡ ಆನಂದ ಈಶ್ವರಪ್ಪನದು. ಅದೂ ಅಲ್ಲದೇ, ತನ್ನ ಎದುರು ಕಾಂಗ್ರೆಸ್ ಇಸ್ಮಾಯಿಲ್ ಖಾನ್ ಎಂಬ ವೀಕ್ ಕ್ಯಾಂಡಿಡೇಟ್ ಹಾಕಿರುವುದು ಈಶ್ವರಪ್ಪನಿಗೆ ಮತ್ತೊಂದು ಖುಷಿಯ ವಿಚಾರವಾಗಿದೆ. ಬಿಎಸ್‌ಪಿಯಿಂದ ಜನಪರ ಹೋರಾಟಗಾರ ಲೋಕೇಶ್ ಈಸೂರ ಸ್ಪರ್ಧಿಸಿದ್ದಾರೆ.


ಅಸಲಿಗೆ ಈಶ್ವರಪ್ಪನನ್ನು ತುಳಿಯಲು ಶಿಮಮೊಗ್ಗದಲ್ಲೂ ಒಂದು ಶರಣ ಸಮೂಹ ಮೊದಲಿನಿಂದಲೂ ಕಾರ್ಯನಿರ್ವಹಿಸುತ್ತಿದೆ. ಇದನ್ನು ಬಹಿರಂಗವಾಗಿಯೇ ಹೇಳಿತ್ತು ಕೂಡ. ಈ ಹಿನ್ನೆಲೆಯಲ್ಲಿ ಅದು ಈಶ್ವರಪ್ಪನ ವಿರುದ್ಧ ಕಾಂಗ್ರೆಸ್ಸಿನಿಂದ ಸಮರ್ಥ ಅಭ್ಯರ್ಥಿಯನ್ನು ನಿರೀಕ್ಷಿಸಿತ್ತು, ಆದರೆ ಅದೀಗ ಹುಸಿಯಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಇಸ್ಮಾಯಿಲ್ ಖಾನ್ ಎಲ್ಲರ ಬೆಂಬಲ ಗಳಿಸುವುದು ತುಸು ಕಷ್ಟಕರ.

ಹೀಗಾಗಿ ಈಶ್ವರಪ್ಪನ ವಿರೋಧಿಗಳೂ, ಶರಣ ಸಮುದಾಯ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ದಲಿತ ಸಮುದಾಯಗಳು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಶ್ರೀಕಾಂತ್ ಬೆಂಬಲಕ್ಕೆ ನಿಲ್ಲುವ ಸೂಚನೆಯೇ ಜಾಸ್ತಿಯಿದೆ. ಶ್ರೀಕಾಂತ್ ಕೂಡ ಕುರುಬ ಜನಾಂಗದವರಾಗಿರುವುದರಿಂದ ಹೊಸ ತಲೆಮಾರಿನ ಕುರುಬ ಸಮುದಾಯದ ಯುವಕರೂ ಶ್ರೀಕಾಂತ್ ಬೆಂಬಲಕ್ಕೆ ನಿಲ್ಲಲಿದ್ದಾರೆ. ಇಲ್ಲಿ ಬಜೆಪಿ, ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ತ್ರಿಕೋಣ ಸ್ಪರ್ಧೆ ಏರ್ಪಡುವುದು ಸತ್ಯ.

ಸಾಗರ: ಅಡೆ-ತಡೆಯಿಲ್ಲದ ಕಾಗೋಡು



ಇಲ್ಲಿ ಕಾಂಗ್ರೆಸ್ಸಿನ ಕಾಗೋಡು ತಿಮ್ಮಪ್ಪನ ಗೆಲುವಿಗೆ ಯಾವ ತೊಂದರೆಯೂ ಇಲ್ಲ. ಈ ಹಿಂದೆ ಬಂಗಾರಿ ದೆಸೆಯಿಂದ ಬೇಳೂರು ಗೋಪಾಲಕೃಷ್ಣ ಎಂಬ ಪುಡಿ ಲೀಡರ್ ಶಾಸಕನ ಸ್ಥಾನಕ್ಕೇರಿದ್ದ. ಈತನ ಧೂರ್ತ ನಡವಳಿಕೆಯನ್ನು ನೋಡಿದರೆ ಅದ್ಹೇಗೆ ಸಾಗರದ ಸಂಭಾವಿತ ಜನ ಇವನನ್ನು ಆರಿಸಿದ್ದರು ಎಂಬುದು ಅರ್ಥವಾಗುವುದಿಲ್ಲ. ಪಕ್ಕಾ ಗೋಸುಂಬೆಯಂತೆ ಬಣ್ಣಬದಲಿಸುವ ಜಾಯಮಾನದ ಈತ ದಿಢೀರ್ ಎಂದು ಜೆಡಿಎಸ್ ಸೇರಿ ಕುಮಾರಸ್ವಾಮಿಯ ಆರಾಧಕನಾಗಿದ್ದ. ಗತಿಗೆಟ್ಟ ಬಜೆಪಿಗಳು ಈತನನ್ನು ಮತ್ತೆ ಕರೆದು ಟಿಕೆಟ್ ಕೊಟ್ಟಿವೆ. ಸಧ್ಯ ಕ್ಷೇತ್ರದ ಹಿರಿಯ ರಾಜಕಾರಣಿ ಕಾಗೋಡು ತಿಮ್ಮಪ್ಪನ ಪರವಾಗಿ ಬಲವಾದ ಅಲೆಯಿರುವುದರಿಂದ ಈ ಚುನಾವಣೆಯೊಂದಿಗೆ ಬೇಳೂರು ಗೋಪಾಲಕೃಷ್ಣನ ರಾಜಕೀಯ ಜೀವನವೂ ಅಂತ್ಯಗೊಳ್ಳಲಿದೆ.






ಸೊರಬ : ಸಹೋದರರ ಸವಾಲ್

ಸೊರಬದಲ್ಲಿ ಎಲ್ಲವೂ ಸುಸೂತ್ರವಾಗಿಯೇ ನಡೆದಿತ್ತು. ಕುಮಾರ್ ಬಂಗಾರಪ್ಪ ಕ್ಷೇತ್ರಕ್ಕೆ ಒಳ್ಳೆಯ ಕೆಲಸಗಳನ್ನೇ ಮಾಡುತ್ತಾ ಬಂದಿದ್ದರು. ತನ್ನ ಸುಸಂಸ್ಕೃತ ನಡವಳಿಕೆ ಮತ್ತು ವರ್ತನೆಗಳಿಂದ ಕ್ಷೇತ್ರ ಕೈಜಾರದಂತೆ ಹಿಡಿದಿಟ್ಟುಕೊಂಡಿದ್ದರು. ಆದರೆ, ಈಗ 'ಬಂ' ಮಧು ಬಂಗಾರಪ್ಪನೊಂದಿಗೆ ಸೇರಿಕೊಂಡು ಕಣಕ್ಕಿಳಿದು ಒಂದಿಷ್ಟು ಕುಮಾರ್ ಬೆಂಬಲಿಗರನ್ನೂ ಸೆಳೆದುಕೊಂಡಿದ್ದಾರೆ.

ಹೊಸನಗರ ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಮಾಯವಾದ ಕಾರಣ ಹರತಾಳು ಹಾಲಪ್ಪ ಬಜೆಪಿಯಿಂದ ಸೊರಬದಲ್ಲಿ ಕಾಣಿಸಿಕೊಂಡಿದ್ದಾರೆ. 'ಬಂ' ಕೆಂಗಣ್ಣಿಗೆ ಗುರಿಯಾಗಿರುವ ಈತ ಠೇವಣಿ ಉಳಿಸಿಕೊಳ್ಳಲು ಹೆಣಗಾಡಬೇಕಷ್ಟೆ. ಇಲ್ಲಿ ಹಣಾಹಣಿಯೇನಿದ್ದರೂ ಕುಮಾರ್ ಬಂಗಾರಪ್ಪ ಮತ್ತು ಮಧು ಬಂಗಾರಪ್ಪನ ನಡುವೆ ನಡೆಯಲಿದ್ದು ಕುಮಾರ್ ಒಂದಿಷ್ಟು ಕಷ್ಟದಲ್ಲಿರುವುದು ಸತ್ಯ. ಉಳಿದಂತೆ ಎಲ್ಲರೂ ಆಟಕ್ಕುಂಟು ಲೆಕ್ಕಕ್ಕಿಲ್ಲ.

ಶಿಕಾರಿಪುರ: ಮದಗಜಗಳ ಲಡಾಯಿ!



ಬರಲಿರುವ ಚುನಾವಣೆಯಲ್ಲಿ ಬಜೆಪಿ ಸ್ಪಷ್ಟ ಬಹುಮತ ಗಳಿಸಿದರೆ (?) ಮುಖ್ಯಮಂತ್ರಿ ಪಟ್ಟ ತನಗೆ ಕಾಯಂ ಎಂದುಕೊಂಡಿದ್ದ ಯಡ್ಡಿ ಈಗ ಮುಕ್ಕಾಲು ಭಾಗ ಕುಸಿದುಹೋಗಿದ್ದಾರೆ. ಸೋಲಿಲ್ಲದ ಸರದಾರನೆಂದೇ ಹೆಸರಾಗಿರುವ ಮಾಜಿ ಮುಖ್ಯಮಂತ್ರಿ ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷ ಎಸ್.ಬಂಗಾರಪ್ಪ ಯಡ್ಡಿಯ ವಿರುದ್ಧ ಕಣಕ್ಕಿಳಿದಿರುವುದು, ಅದಕ್ಕೆ ಕಾಂಗ್ರೆಸ್, ದಳಗಳು ಬಹಿರಂಗವಾಗಿ ಬೆಂಬಲಿಸಿರುವುದು ಯಡ್ಡಿಯ ಬಿಪಿ ಜಾಸ್ತಿಯಾಗಲು ಕಾರಣವಾಗಿದೆ.

ಹಾಗೆ ನೋಡಿದರೆ ಯಡ್ಡಿಯ ವಿರುದ್ಧ ಸ್ಪರ್ಧಿಸುವ ಬಂಗಾರಿಯ ತೀರ್ಮಾನ ಹಠಾತ್ತನೆ ಮಾಡಿದ್ದೇನಲ್ಲ. ಇಂತಹ ಒಂದು ತೀರ್ಮಾನವನ್ನು ಅವರು ಹಲವು ತಿಂಗಳುಗಳ ಮೊದಲೇ ಮಾಡಿಕೊಂಡಿದ್ದು ಆ ಗುಟ್ಟನ್ನು ಯಾರಿಗೂ ಬಿಟ್ಟುಕೊಡದೆ ಒಳಗೊಳಗೇ ತಯಾರಿ ನಡೆಸಿದ್ದರು. ಇತ್ತೀಚೆಗೆ ಶಿಕಾರಿಪುರದಲ್ಲಿ ಒಂದೆಡೆ ಯಡ್ಡಿಯ ನೇತೃತ್ವದಲ್ಲಿ ಸಿದ್ಧರಾಮೇಶ್ವರ ಜಯಂತಿ ನಡೆಯುತ್ತಿದ್ದರೆ, ಅತ್ತ ಬಂಗಾರಿ ನೇತೃತ್ವದಲ್ಲಿ ಕನಕ ಜಯಂತಿ ನಡೆಯುತ್ತಿತ್ತು. ಆಗಲೂ ಯಾರಿಗೂ ಅನುಮಾನ ಬಂದಿರಲಿಲ್ಲ. ಹಲವು ತಿಂಗಳುಗಳಿಂದ ಬಂಗಾರಪ್ಪ ಶಿಕಾರಿಪುರದ ಯಡ್ಡಿ ವಿರೋಧಿಗಳ ಹತ್ತಿರ ನಿರಂತರ ಮತ್ತು ಆತ್ಮೀಯ ಸಂಪರ್ಕವಿಟ್ಟುಕೊಂಡೇ ಬಂದಿದ್ದಾರೆ. ಅವರೆಲ್ಲ ಬಂಗಾರಿಗೆ ಶಿಕಾರಿಪುರಕ್ಕೇ ಬಂದು ಸ್ಪರ್ಧಿಸುವಂತೆ ದುಂಬಾಲು ಬಿದ್ದಾಗ ಅವರಿಗೆ ನೋಡೋಣ ಎಂದಷ್ಟೇ ಹೇಳಿಹೋಗಿದ್ದರು. ಆದರೆ ಅದೀಗ ಸತ್ಯವಾಗಿಬಿಟ್ಟಿದೆ.



ಶಿಕಾರಿಪುರಕ್ಕೆ ಯಡ್ಡಿ ಹರಿಸಿದ ಹಣದ ಹೊಳೆ ನೈಜ ಅಭಿವೃದ್ಧಿಗೆ ಹೋಗದೇ ತನ್ನ ಮಕ್ಕಳು, ಕಳ್ಳುಬಳ್ಳಿಗಳ ಜೇಬು ಸೇರಿದ್ದನ್ನು ಕಣ್ಣಾರೆ ಕಂಡಿರುವ ಅಲ್ಲಿನ ಕೆಲವು ನಾಯಕರು ಈಗ ಬಂಗಾರಪ್ಪನ ಬೆಂಬಲಕ್ಕೆ ನಿಂತಿದ್ದಾರೆ. ಅದೂಅಲ್ಲದೇ, ಮೊದಲಿನಿಂದಲೂ ಯಡೂರಪ್ಪನ ಕಾರ್ಯವೈಖರಿಯನ್ನು ವಿರೋಧಿಸುತ್ತಾ ಬಂದಿರುವ ಶರಣ ಸಮೂಹವೂ ಹಿಂದೊಮ್ಮೆ ಮಹಾಲಿಂಗಪ್ಪನನ್ನು ಬೆಂಬಲಿಸಿ ಯಡ್ಡಿಯನ್ನು ಸೋಲಿಸಿತ್ತು. ಈಗ ಬಂಗಾರಿ ಕಣಕ್ಕಿಳಿದಿರುವುದರಿಂದ ಅವರಿಗೆ ತಮ್ಮ ಸಂಪೂರ್ಣ ಬೆಂಬಲ ನೀಡಲಿದೆ. ಯಡ್ಡಿಯ ವಿರೋಧಿಗಳ ದಂಡು, ಕೆಳ ಮತ್ತು ಹಿಂದುಳಿದ ಜಾತಿಗಳ ಸಮುದಾಯಗಳು, ಅಲ್ಪಸಂಖ್ಯಾತರು, ಅಷ್ಟೇ ಏಕೆ ಲಿಂಗಾಯತರಲ್ಲೂ ಅರ್ಧದಷ್ಟು ಜನ ಬಂಗಾರಿಯ ಎಡಬಲಗಳಲ್ಲಿ ನಿಂತಿರುವುದು, ಕಾಂಗ್ರೆಸ್ ಬಂಗಾರಿಗೆ ಬೆಂಬಲ ಸೂಚಿಸಿ ತನ್ನ ಅಭ್ಯರ್ಥಿಯನ್ನು ವಾಪಾಸ್ಸು ಪಡೆದಿರುವುದು ಯಡ್ಡಿಯ ಸೋಲಿಗೆ ಸೋಪಾನವಾಗಲಿದೆ. ಕಾಂಗ್ರೆಸ್ಸಿಗೆ ತನ್ನದೇ ಆದ ಓಟ್ ಬ್ಯಾಂಕಿದೆ. ಅಂತೆಯೇ, ಬಂಗಾರಿಗೂ ಕ್ಷೇತ್ರದಲ್ಲಿ ತನ್ನದೇ ಆದ ಪ್ರಭಾವವಿದೆ. ಅವೆರಡೂ ಈಗ ಸೇರಿರುವುದರಿಂದ ಅವರ ಗೆಲುವು ನಿಚ್ಚಳವಾಗಿದೆ.

ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ಬಂಗಾರಿಯ ವಿರುದ್ಧ ಯಡ್ಡಿ ಬಿಪಿ ಏರಿಸಿಕೊಂಡು ಆತಂಕದಿಂದ ಮಾತನಾಡಿದ್ದನ್ನು ನೋಡಿದರೆ ಸಾಕು, ಯಡ್ಡಿ ಈಗಾಗಲೇ ಅರ್ಧ ಸೋಲೊಪ್ಪಿಕೊಂಡಿದ್ದದ್ದು ಎದ್ದು ಕಾಣುತ್ತದೆ.

ಗೆದ್ದರೆ ಕಟ್ಟಾ ಹೆಬ್ಬಾಳಕ್ಕೇ ಚಟ್ಟ!



ಹೆಬ್ಬಾಳದ ಮತದಾರರ ಮುಂದೆ ಎರಡು ಪ್ರಶ್ನೆಗಳಿವೆ ಒಂದು; ಹೆಬ್ಬಾಳ, ಗಂಗೇನಹಳ್ಳಿ, ಸಂಜಯನಗರ, ನಾಗಶೆಟ್ಟಿಹಳ್ಳಿ ಏರಿಯಾಗಳಲ್ಲೇನಾದರೂ ಮುಂದೊಮ್ಮೆ ನಿಲ್ಲಲಿಕ್ಕೂ ಜಾಗ ಸಿಗದಂತೆ ಮಾಡಬೇಕೆ? ಹೆಣ ಹೂಳುವುದಕ್ಕೆ ಕೊನೆಗೆ ನಡೆದಾಡುವುದಕ್ಕೂ ಜಾಗವಿಲ್ಲದೇ ಪರದಾಡಬೇಕೆ?

ಹಾಗಿದ್ದರೇನೇ ಅವರು ಕಟ್ಟಾ ಸುಬ್ರಹ್ಮಣ್ಯ ನಾಯ್ಡುವನ್ನು ಗೆಲ್ಲಿಸಬೇಕು!

ಸದ್ಯ ಮನೆ ಮನೆಗೆ ಚಿನ್ನದ ಮೂಗು ಬೊಟ್ಟು, ಬೆಳ್ಳಿಯ ತಟ್ಟೆ-ಲೋಟ ಹಂಚುತ್ತಿರುವ ಬಜೆಪಿಯ ಕಟ್ಟಾ ನಾಯ್ಡು ಈತನಕ ಮಾಡಿದ ಲ್ಯಾಂಡ್ ರಾಬರಿ, ದೋಚಿದ ಅರಣ್ಯ ಭೂಮಿ, ಆತನ ಮಗ ಕಟ್ಟಾ ಜಗ್ಗನ ಗೂಂಡಾಗಿರಿ, ಕಟ್ಟಾನ ಗಾಡ್‌ಫಾದರ್ ವೆಂಕಯ್ಯ ನಾಯ್ಡು ಬೆನ್ನಿಗಿರುವ ಆಂಧ್ರದ ನೆಲಗಳ್ಳರ ದುಷ್ಟಕೂಟ ಇತ್ಯಾದಿಗಳೆಲ್ಲಕ್ಕೂ ಪೂರ್ಣ ವಿರಾಮ ಹಾಕದೇ ಹೋದರೆ ಮುಂದೊಮ್ಮೆ ಕಟ್ಟಾ ಕರ್ನಾಟಕ್ಕೇ ಕಂಟಕನಾಗಲಿದ್ದಾನೆ.

ಕೇವಲ ಒಂದೇ ಒಂದು ವರ್ಷ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದ ಕಟ್ಟಾನಾಯ್ಡು ಇವತ್ತು ಐದೂವರೆ ಸಾವಿರ ಕೋಟಿಯ ಕುಬೇರ. ಒಂದಾನೊಂದು ಕಾಲಕ್ಕೆ ಫುಟ್‌ಪಾತ್ ಟೀ ಅಂಗಡಿಯಲ್ಲಿ ಲೋಟ ತೊಳಕೊಂಡಿದ್ದ. ಕ್ರಮೇಣ ಕೆಕ್ಕಸ್ಸು ಕಾಮಗಾರಿಗೆ ಮೇಸ್ತ್ರಿಯಾಗಿ, ಮನೆ ಕೊಡಿಸುವ ಬ್ರೋಕರ್ ಆಗಿ, ಭೂಮಿ ಕಬಳಿಸುತ್ತಾ ಸಾಗಿದ ಕಟ್ಟಾ ನಾಯ್ಡು ಬರುಬರುತ್ತ ಬೆಂಗಳೂರಿನ ಕುಖ್ಯಾತ ನೆಲಗಳ್ಳರ ಪಟ್ಟಿಗೆ ಸೇರಿಕೊಂಡ. ಇಲ್ಲಿಯತನಕ ಕಟ್ಟಾ ಕೊಳ್ಳೆ ಹೊಡೆದ ಸರ್ಕಾರಿ ಸೊತ್ತಿನ ಮೊತ್ತವೇ ಎಂಟುನೂರು ಕೋಟಿಗೂ ಅಧಿಕ. ಇದೆಲ್ಲ ಕಟ್ಟಾ ಮಂತ್ರಿಯಾಗುವುದಕ್ಕೂ ಮುನ್ನ ಮಾಡಿದ ಹಾವಳಿಗಳಾದರೆ ಆತ ಮಂತ್ರಿಯಾದ ಮೇಲೆ ಮಾಡಿದ ಲೂಟಿಯಿದೆಯಲ್ಲ ಅದನ್ನೇ ಈ ಮೂಲಕ ಪತ್ರಿಕೆ ಬಯಲಿಗೆಳೆಯುತ್ತಿದೆ.



ಬಜೆಪಿ-ಜೆಡಿಎಸ್ ಸರ್ಕಾರದಲ್ಲಿ ಆರಂಭದಲ್ಲಿ ಸಣ್ಣ ಕೈಗಾರಿಕಾ ಮಂತ್ರಿಯಾಗಿದ್ದ ಕಟ್ಟಾ ಇದ್ದಕ್ಕಿದ್ದಂತೆ ಭಾರಿ ಕೈಗಾರಿಕಾ ಮಂತ್ರಿಯಾಗಿದ್ದು, ಭಾರೀ ಕೈಗಾರಿಕಾ ಮಂತ್ರಿಯಾಗಲು ಆತ ಯಡ್ಡಿಗೆ ಐದು ಕೋಟಿ ಲಂಚ ಕೊಟ್ಟಿದ್ದು, ಆನಂತರ ದೋಚಿದ ಸಾರ್ವಜನಿಕ ಸೊತ್ತಿನ ಅಷ್ಟೂ ವಿವರಗಳನ್ನು ಪತ್ರಿಕೆ ಕಲೆ ಹಾಕಿದೆ. ಭಾರೀ ಕೈಗಾರಿಕಾ ಮಂತ್ರಿಯೆಂದರೆ ಅದು ಸುಮ್ಮನೇನಲ್ಲ, ಯಾವ ಜಮೀನನ್ನು ಬೇಕಾದರೂ KIADB ಯ ಮೂಲಕ ಕಿತ್ತುಕೊಳ್ಳುವ, ಹಾಗೇ ಕಿತ್ತಿದ್ದನ್ನು ಯಾವುದೇ ನಕಲಿ ಕಂಪನಿಗಾದರೂ ಕಮ್ಮಿ ರೇಟಿಗೆ ಮಂಜೂರು ಮಾಡುವ ಅಧಿಕಾರ ಒಮ್ಮೆ ಕಟ್ಟಾನಂಥ ಹುಟ್ಟಾ ನೆಲಗಳ್ಳನ ಕೈಗೆ ಬಂತೆಂದರೆ ಏನಾಗುತ್ತದೋ ಅದೇ ಆಯಿತು.

ಎಲೆಕ್ಟ್ರಾನಿಕ್ ಸಿಟಿ ಪಕ್ಕದಲ್ಲೇ ವೀರಸಂದ್ರದ ಸರ್ವೆ ನಂಬರ್ 110 ರಿಂದ 121 ರಲ್ಲಿ 20 ಎಕರೆ ಕೆಐಡಿಬಿಯ ಜಮೀನಿತ್ತು, ಕಾನೂನು ಪ್ರಕಾರ ಅದನ್ನು ಡೀನೋಟಿಫೈ ಮಾಡುವಂತಿಲ್ಲ, ಆದರೆ ಎಕರೆಗೆ 15 ಕೋಟಿಗೂ ಹೆಚ್ಚು ಬೆಲೆ ಬಾಳುವ ಆ ಭೂಮಿಯನ್ನು ದೋಚಬೇಕಲ್ಲ, ಅದಕ್ಕೊಂದು ಹದಿನೈದಕ್ಕೂ ಹೆಚ್ಚು ನಕಲಿ ಕಂಪೆನಿಗಳನ್ನು ರಾತ್ರೋರಾತ್ರಿ ಹುಟ್ಟುಹಾಕಿದ ಕಟ್ಟಾ ಅಂಥ ಕಂಪೆನಿಗಳ ಪ್ರಾಜೆಕ್ಟ್‌ಗಳನ್ನೆಲ್ಲ ಮಂಜೂರು ಮಾಡಿದಂತೆ ದಾಖಲೆ ಸೃಷ್ಟಿಸಿಬಿಟ್ಟ. ಒಂದೇ ದಿನದಲ್ಲಿ ಇಪ್ಪತ್ತೂ ಎಕರೆ ಭೂಮಿಯನ್ನು ತನ್ನ ನಕಲಿ ಕಂಪೆನಿಗಳಿಗೆ ಹಂಚಿಕೊಂಡ.


ಇದು ಕೈಗಾರಿಕಾ ಮಂತ್ರಿ ಕಟ್ಟಾನ ಒಂದು ಹಗರಣ ಮಾತ್ರ. ಇದಕ್ಕಿಂತಲೂ ದೊಡ್ಡ ದರೋಡೆ ನಡೆದದ್ದು ವೈಟ್‌ಫೀಲ್ಡ್‌ನ ಐಟಿಪಿಎಲ್ ಎದುರಿಗಿದ್ದ ನೂರೆಕರೆಯ Concor ಆಸ್ತಿಯ ಕರ್ಮಕಾಂಡದಲ್ಲಿ, ದೆಹಲಿ ಮೂಲದ concor ಎಂಬ ಕಂಪೆನಿಯೊಂದಕ್ಕೆ ವೈಟ್‌ಫೀಲ್ಡ್‌ನ ಐಟಿಪಿಎಲ್ ಎದುರಿಗೆ ಮೂವತ್ತು ವರ್ಷಗಳ ಹಿಂದೆ ಕೆಐಎಡಿಬಿಯಿಂದ ನೂರೆಕರೆ ಮಂಜೂರಾಗಿತ್ತು. ಕ್ರಮೇಣ ಕೆಐಎಡಿಬಿ ಸದರಿ ಮಂಜೂರಾತಿಯನ್ನು ರದ್ದುಗೊಳಿಸಿದ್ದರಿಂದಾಗಿ concor ಧಣಿ ಸುಪ್ರೀಂಕೋರ್ಟಿನಲ್ಲಿ ಕೇಸು ಹಾಕಿದ್ದ.

ಕಟ್ಟಾ ಮಂತ್ರಿಯಾಗುತ್ತಿದ್ದಂತೆ ಸುಪ್ರೀಂಕೋರ್ಟ್ ತೀರ್ಪು ಹೊರಬಿತ್ತು. ರದ್ದತಿಯನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್ concor ಆಸ್ತಿಯ ವಿಷಯದಲ್ಲಿ KIADB ಸಂಪೂರ್ಣ ಅಧಿಕಾರ ಕೊಟ್ಟಿತ್ತು.

ಈ ನೂರೆಕರೆಯನ್ನು ಯಾವುದೇ ಸಾರ್ವಜನಿಕ



ವೈಟ್‌ಫೀಲ್ಡ್‌ನಲ್ಲಿ ಕಟ್ಟಾ ದೋಚಿದ ಸರ್ಕಾರಿ ಸ್ವತ್ತು




ಮಲ್ಲೇಶ್ವರದಲ್ಲಿ ಕಟ್ಟಾ ಕಟ್ಟುತ್ತಿರುವ ಛಾಯಾ ಆಸ್ಪತ್ರೆ




ಮಗನ ಹೆಸರಿನಲ್ಲಿ ಬೇನಾಮಿ ಬಂಗಲೆ

ಭದ್ರಾವತಿ: ಸಂಗಮೇಶ್‌ಗೆ ವಿಜಯದ ಹಾರ








ಇದಂತೂ ಸದಾ ಘರ್ಷಣೆಯಲ್ಲಿಯೇ ಮುಳುಗಿ ಹೆಸರು ಮಾಡಿರುವ ಕ್ಷೇತ್ರ. ಜೆಡಿಎಸ್‌ನ ಅಪ್ಪಾಜಿ, ಕಾಂಗ್ರೆಸ್‌ನ ಸಂಗಮೇಶ್ ಹಾಗೂ ಬಿಜೆಪಿಯಿಂದ ಆಯನೂರು ಮಂಜುನಾಥ್ ಕಣದಲ್ಲಿದ್ದಾರೆ.

ಅಸಲಿಗೆ ಇಲ್ಲಿ ಸದಾ ಹಣಾಹಣಿ ಏರ್ಪಡುವುದು ಅಪ್ಪಾಜಿ ಮತ್ತು ಸಂಗಮೇಶ್ ನಡುವೆಯೇ. ಏಕೆಂದರೆ ಅವರಿಬ್ಬರೂ ಭದ್ರಾವತಿಯಲ್ಲಿಯೇ ಹತ್ತಾರು ವರ್ಷಗಳಿಂದ ಇದ್ದು ಅದರ ನ್ಯೂಕ್ಲಿಯರ್ ವಾತಾವರಣದಲ್ಲಿ ಪಳಗಿದವರು. ಆಯನೂರು ಮೊನ್ನೆ ಮೊನ್ನೆ ಎಲ್ಲೂ ಸಲ್ಲದವನಾಗಿ ಇಲ್ಲಿಗೆ ವಕ್ಕರಿಸಿರುವುದರಿಂದ ಕ್ಷೇತ್ರದ ಜನರಿಗೆ ಅವರು ಗೊತ್ತಿಲ್ಲ, ಅವರಿಗೆ ಕ್ಷೇತ್ರ ಗೊತ್ತಿಲ್ಲ. ಹೀಗಾಗಿ ತನಗೆ ಆದಿರುವ ಸೋಲಿನ ಅರಿವು ಈಗಾಗಲೇ ಆತನಿಗೆ ಆಗಿದ್ದು ಆತ ಕಾಟಾಚಾರಕ್ಕೆ ಪ್ರಚಾರದಲ್ಲಿ ತೊಡಗಿರುವಂತೆ ಕಾಣುತ್ತಿದೆ.

ಈ ನಡುವೆ ಬಿಎಸ್ಪಿಯ ಅಭ್ಯರ್ಥಿ ಮಹೇಶ್ ಕುಮಾರ್ ಹಣ ಸುರಿಯುವುದು, ಬಾಡೂಟ ಮಾಡಿಸುವುದು, ಸಾರಾಯಿ ಹಂಚುವುದು ಮುಂತಾದ 'ಜನೋಪಕಾರಿ' ಕೆಲಸಗಳಲ್ಲಿ ತೊಡಗಿದ್ದಾನೆ. ಹಾಗೇನಾದರೂ ಆತ ಪ್ರತಿನಿಧಿಸುವ ಕುರುಬ ಜನಾಂಗ ಮತ್ತು ದಲಿತರು ಈತನನ್ನು ಬೆಂಬಲಿಸಿದರೆ ಕಾಂಗ್ರೆಸ್‌ಗೆ ಹೊಡೆತ ಬೀಳುತ್ತದೆ. ಸದ್ಯಕ್ಕಿರುವ ಪರಿಸ್ಥಿತಿಯಲ್ಲಿ ಕ್ಷೇತ್ರದ ಹವಾ ಸಂಗಮೇಶ್ ಪರವಾಗಿದೆ.



ತೀರ್ಥಹಳ್ಳಿ: ಈ ಬಾರಿ ಕಿಮ್ಮನೆ ಮಿಕ್ಕವರೆಲ್ಲ ಸುಮ್ಮನೆ

ಇದು ಗೋಪಾಲಗೌಡರು ತಿರುಗಾಡಿ ಮತ ಯಾಚಿಸಿದ ಕ್ಷೇತ್ರ. ಪ್ರತೀ ಹಳ್ಳಿಗೂ ಅವರು ನಡೆದುಕೊಂಡು ಹೋಗಿ, ಅಲ್ಲಿಯೇ ಉಳಿದಿದ್ದು ಮರುದಿನ ಮುಂದಿನ ಹಳ್ಳಿಗೆ ಹೋಗಿ ಮತಯಾಚಿಸಿದ್ದರು. ಅವರ ಹೆಜ್ಜೆ ಗುರುತುಗಳೇ ಕೋಣಂದೂರು ಲಿಂಗಪ್ಪ ಅವರನ್ನು ಗೆಲ್ಲಿಸಿದ್ದವು. ಅಲ್ಲದೇ ಇದು ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರ ತವರು ಕ್ಷೇತ್ರ ಕೂಡ. ಇಂತಹ ತೀರ್ಥಹಳ್ಳಿಯನ್ನೀಗ ಮಲಿನ ಮಾಡಿ ಆಳುತ್ತಿರುವ ಮೋದಿ ಶಿಷ್ಯ ಚೆಡ್ಡಿ ಆರಗ ಜ್ಞಾನೇಂದ್ರನನ್ನು ಮಟ್ಟ ಹಾಕಬೇಕಾದ ಕರ್ತವ್ಯ ತೀರ್ಥಹಳ್ಳಿ ಮತದಾರರ ಮುಂದಿದೆ.

ಇಲ್ಲಿ ಎರಡು ಬಾರಿ ಸೋತಿರುವ ಕಿಮ್ಮನೆ ರತ್ನಾಕರ್ ಒಬ್ಬ ಆದರ್ಶ ರಾಜಕಾರಣಿಯಾಗಿದ್ದು ಈ ಬಾರಿ ಜ್ಞಾನೇಂದ್ರನನ್ನು ಮಟ್ಟ ಹಾಕುವ ಲಕ್ಷಣಗಳಿವೆ. ಇವರು ಸುಳ್ಳು ಹೇಳದೇ, ಭ್ರಷ್ಟಾಚಾರ ಮಾಡದೆ, ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಜನರ ವಿಶ್ವಾಸ ಗಳಿಸಿದ್ದಾರೆ. ತೀರ್ಥಹಳ್ಳಿಗೆ ಹೊಸನಗರದ ಕೆಲವು ಭಾಗಗಳೂ ಸೇರಿರುವುದರಿಂದ ಕಾಂಗ್ರೆಸ್‌ಗೆ ಅನುಕೂಲವಾಗಲಿದೆ. ಕಳೆದ ಚುನಾವಣೆಯಲ್ಲಿ 'ಬಂ' ಬೆಂಬಲಿಗರೆಲ್ಲಾ ಬಿಜೆಪಿಗೆ ಓಟು ಹಾಕಿದ್ದು ಈಗ ಕಾಂಗ್ರೆಸ್‌ಗೆ ಮರಳಿದ್ದಾರೆ. ಇದೆಲ್ಲಾ ಕಾಂಗ್ರೆಸ್‌ಗೆ ಪಾಸಿಟಿವ್ ಪಾಯಿಂಟ್ ಆಗಲಿದೆ. ಇವುಗಳನ್ನೆಲ್ಲಾ ಲೆಕ್ಕ ಹಾಕಿದರೆ ಕಿಮ್ಮನೆ ನಿರಾಯಾಸವಾಗಿ ಗೆಲ್ಲುವ ಎಲ್ಲ ಲಕ್ಷಣಗಳು ಸದ್ಯಕ್ಕೆ ಕಾಣುತ್ತಿವೆ.

ಉದ್ದೇಶಕ್ಕಾದರೂ ಬಳಸಬಹುದಿತ್ತು. ಆದರೆ ಮತ್ತೆ ಇದೇ ಜಮೀನನ್ನು ಅದೇ concor ಕಂಪೆನಿಗೆ ವಿನರ್ ಮಂಜೂರು ಮಾಡಿದಂತೆ ದಾಖಲೆ ಸೃಷ್ಟಿಸಿ ಅಷ್ಟೂ ನೂರೆಕರೆಯನ್ನು ಎಂಬೆಸ್ಸೀ ಬಿಲ್ಡರ್ಸ್‌ನ ಜೀತೂ ವೀರ್ವಾನಿಯ ಬಾಯಿಗಿಟ್ಟ. ಎಕರೆಗೆ ಹತ್ತು ಕೋಟಿ ಬೆಲೆ ಬಾಳುವ ಈ ಸೊತ್ತಿನ ಈಗಿನ ಮಾರ್ಕೆಟ್ ಮೌಲ್ಯ ಎಂಟುನೂರು ಕೋಟಿ! ಅದನ್ನು ಲಪಟಾಯಿಸಲು ನೆರವಾದ ಕಟ್ಟಾನಿಗೆ ವೀರ್ವಾನಿ ಕೊಟ್ಟ ಲಂಚವೇ ನೂರು ಕೋಟಿ!

ಹೀಗೆ ವೈಟ್‌ಫೀಲ್ಡ್‌ನಲ್ಲಿ ದೋಚಿದ ದುಡ್ಡನ್ನು ತಂದು ಕಟ್ಟಾ ತನ್ನ ಬೇನಾಮಿ ಭಾಸ್ಕರ ರಾಜು ಎಂಬಾತನನ್ನು ಮುಂದೆ ಬಿಟ್ಟು ಆರ್‌ಎಂವಿ ಡೆವಲಪರ್ಸ್ ಎಂಬ ಮತ್ತೊಂದು ನಕಲಿ ಕಂಪೆನಿ ಹುಟ್ಟು ಹಾಕುತ್ತಾನೆ. ಅದಕ್ಕೆಂದು ನೆಲಮಂಗಲದ ಸಮೀಪದ ಗಂಡ್ರಗೂಳಿಪುರ, ಓಬನಾಯಕನಹಳ್ಳಿ ಮತ್ತು ಯಲಚಗೆರೆಯೆಂಬ ಮೂರು ಗ್ರಾಮಗಳ ನೂರೆಕರೆಯನ್ನು ಕೆಐಎಡಿಬಿಯ ಮೂಲಕ ನೋಟಿಫೈ ಮಾಡಿಸುತ್ತಾನೆ.

ಇನ್ನೂ ದುರಂತವೆಂದರೆ ಇದೇ ಬೇನಾಮಿ ಭಾಸ್ಕರ ರಾಜು ಹೆಸರಲ್ಲಿ ಬಿ ಅಂಡ್ ಬಿ ಡೆವಲಪರ್ಸ್ ಎಂಬ ಮತ್ತೊಂದು ನಕಲಿ ಕಂಪೆನಿ ಹುಟ್ಟು ಹಾಕುತ್ತಾನೆ. ಅದಕ್ಕೆಂದು ದೇವನಹಳ್ಳಿ ಏರ್‌ಪೋರ್ಟ್ ಪಕ್ಕದ 75 ಎಕರೆ ಜಮೀನು ತಾನೇ ನಿಂತು ಮಂಜೂರು ಮಾಡುತ್ತಾನೆ.


ಇದಿಷ್ಟೇ ಅಲ್ಲದೇ ಕಟ್ಟಾ ಇಟಾಸ್ಕಾ ಎಂಬ ಮತ್ತೊಂದು ನಕಲಿ ಕಂಪೆನಿಯ ಮೂಲಕ ನೂರು ಎಕರೆ ದೋಚಿದ್ದನ್ನು ಈಗಾಗಲೇ ಪತ್ರಿಕೆ ಬಯಲಿಗೆಳೆದಿದೆ.

ಕಟ್ಟಾ ಕೈಗಾರಿಕಾ ಮಂತ್ರಿಯಾಗಿದ್ದ ಕಾಲಕ್ಕೆ ಒಂದೇ ದಿನದಲ್ಲಿ ಇನ್ನೂರು ನಕಲಿ ಕಂಪೆನಿಗಳಿಗೆ ಮಂಜೂರಾತಿ ಸಿಕ್ಕಿದ್ದು ಕೂಡ ಪವಾಡವೆ. ಆತನ ಮಂತ್ರಿಗಿರಿಯುದ್ದಕ್ಕೂ ಇಂಥ ಐನೂರು ನಕಲಿ ಪ್ರಾಜೆಕ್ಟುಗಳನ್ನು ಸರ್ಕಾರ ಅನುಮೋದಿಸಿದೆಯೆಂದರೆ ಅವಳಿಗೆಂದು ಸಾವಿರದ ಆರುನೂರು ಎಕರೆ ಭೂಮಿ ಮಂಜೂರು ಮಾಡುತ್ತದೆಯೆಂದರೆ ಅದು ಕರ್ನಾಟಕದ ಇತಿಹಾಸದಲ್ಲಿ ನಡೆದ ಅತಿದೊಡ್ಡ ಭೂದಕಾಯಿತೆಯಲ್ಲದೇ ಮತ್ತೇನು? ಸದ್ಯ ಚುನಾವಣಾ ಆಯೋಗಕ್ಕೆ ತನ್ನ ಪುದಿ ಆಸ್ತಿಯನ್ನಷ್ಟೇ ಲೆಕ್ಕ ಕೊಟ್ಟು ಅದರ ನೂರು ಪಟ್ಟನ್ನು ಕಟ್ಟಾ ಮುಚ್ಚಿಟ್ಟಿದ್ದಾನೆ. ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಗಳಲ್ಲಿ ಮತ್ತು ಇತರೆ ನಗರಗಳಲ್ಲಿ ತನ್ನ ಹೆಂಡತಿ, ಮೂರು ಮಕ್ಕಳು ಮತ್ತು ಅಳಿಯಂದಿರ ಹೆಸರಿನಲ್ಲೂ ಕಟ್ಟಾ ಕೋಟ್ಯಂತರ ರೂಪಾಯಿಗಳ ಆಸ್ತಿ ಖರೀದಿಸಿದ್ದಾನೆ. ಹಲವೇ ವರ್ಷಗಳ ಹಿಂದೆ ಹೋಟೆಲ್‌ನಲ್ಲಿ ಲೋಟ ತೊಳೆಯುತ್ತಿದ್ದ ಕಟ್ಟಾ ಇಷ್ಟು ಬೇಗ ಕೋಟ್ಯಾಧೀಶನಾಗಿದ್ದು ಕಳ್ಳ ಮಾರ್ಗದಿಂದ ಎಂಬುದರ ಬಗ್ಗೆ ಅನುಮಾನಗಳಿಲ್ಲ.

ಇವತ್ತು ಹೆಬ್ಬಾಳಕ್ಕೆಂದೇ ಕಟ್ಟಾ ಇಪ್ಪತ್ತು ಕೋಟಿಯಷ್ಟು ಸುರಿದು ಎಮ್ಮೆಲ್ಲೆಯಾಗಲು ಹೊರಟಿದ್ದಾನೆ. ಗೆದ್ದರೆ ಇಡೀ ಬೆಂಗಳೂರಿಗೇ ಕಂಟಕನಾಗುತ್ತಾನೆ. ಈತನ ಬೆನ್ನಿಗಿರುವ ಆಂಧ್ರದ ಭೂದಕಾಯಿತರ ಪಡೆಯೂ ದೊಡ್ಡದಿದೆ. ಹೆಬ್ಬಾಳದ ಜನ ಎಚ್ಚೆತ್ತುಕೊಳ್ಳಲೆಂದೇ ಪತ್ರಿಕೆ ಈ ಮೂಲಕ ಈತನ ಪರಿಚಯವನ್ನು ನೀಡುತ್ತಿದೆ. ಕಟ್ಟಾ ಗೆದ್ದರೆ ಖಂಡಿತಾ ಅದು ಬೆಂಗಳೂರಿನ ಪಾಲಿಗೆ ಚಟ್ಟ!


■ ರಾ. ಸೋಮನಾಥ್

ಗೆಲ್ಲಬೇಕಾದವರು



ಮೇ 10ರಂದು ನಡೆಯಲಿರುವ ಮೊದಲನೇ ಹಂತದ 89 ಕ್ಷೇತ್ರಗಳ ಚುನಾವಣೆಯಲ್ಲಿ ರಾಜ್ಯ ರಾಜಕಾರಣದ ಪ್ರಮುಖ ನಾಯಕರಿದ್ದಾರೆ. ಇವರಲ್ಲಿ ಹೊಣೆಯರಿತ, ಸಾರ್ವಜನಿಕ ಜೀವನದ ಮಹತ್ವ ತಿಳಿದಿರುವ ಕೆಲವರಿದ್ದಾರೆ. ಹಾಗೆಯೇ ಅಯೋಗ್ಯರೂ, ಸಮಾಜದ್ರೋಹಿಗಳೂ ಶಾಸಕರಾಗಲು ತುದಿಗಾಲಲ್ಲಿ ಕಾದು ನಿಂತಿದ್ದಾರೆ. ಇಂಥವರ ಪುಟ್ಟಪಟ್ಟಿಯೊಂದನ್ನು 'ಲಂಕೇಶ್' ಬಳಗ ನಿಮ್ಮ ಗಮನಕ್ಕೆ ತರುತ್ತಿದೆ. ನಿಮ್ಮ ಪುರಸ್ಕಾರಕ್ಕೆ ಮತ್ತು ತಿರಸ್ಕಾರಕ್ಕೆ ಯೋಗ್ಯ ಅಭ್ಯರ್ಥಿಗಳಿವರು.

ಕೆ.ಚಂದ್ರಶೇಖರ್




ಮಾತು ಕಡಿಮೆ, ಕೆಲಸ ಜಾಸ್ತಿ, ಮಾಡಿದ ಕೆಲಸಕ್ಕೆ ತಕ್ಕಪ್ರಚಾರ ಪಡೆದುಕೊಳ್ಳುವ ಛಾತಿ, ಇವೆಲ್ಲಾ ಇರುವ ಬಸವನಗುಡಿಯ ಕಾಂಗ್ರೆಸ್ ಅಭ್ಯರ್ಥಿ ಕೆ. ಚಂದ್ರಶೇಖರ್ ಗೆಲ್ಲಬೇಕು. ಇವರು ಸದಾ ಜನರ ಕೈಯಳತೆಯಲ್ಲೇ ಇರುತ್ತಾರೆ. ಆಗಬೇಕಾದ ಕೆಲಸವನ್ನು ತಾವೇ ಮೊದಲು ಕಂಡುಕೊಂಡು, ಮಾಡಿಸುವ ಗುಣದ ಚಂದ್ರಶೇಖರ್ ವಿಧಾನಸಭೆಯಲ್ಲಿರಬೇಕು.

ಎಂ. ಕೃಷ್ಣಪ್ಪ



ವಿಜಯನಗರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಎಂ.ಕೃಷ್ಣಪ್ಪ (ಲೇಔಟ್ ಕೃಷ್ಣಪ್ಪ, ಬಿಜೆಪಿಯ ಪ್ರಮೀಳಾ ನೇಸರ್ಗಿಯನ್ನು ಸೋಲಿಸುವುದು ಕರ್ನಾಟಕದ ಹಿತದೃಷ್ಟಿಯಿಂದ ಒಳ್ಳೆಯದು. ಕೃಷ್ಣಪ್ಪ ಜನಪ್ರಿಯ ವ್ಯಕ್ತಿ ಕೂಡಾ ಹೌದು.

ಪುಟ್ಟಣ್ಣಯ್ಯ



ರೈತ ನಾಯಕ ಪುಟ್ಟಣ್ಣಯ್ಯ ಹೃದಯವಂತಿಕೆಯಿರುವ, ರೈತ ಬಡವರ ಕಷ್ಟಗಳಿಗೆ ದನಿಯಾಗಬಲ್ಲ ಸೂಕ್ತ ವ್ಯಕ್ತಿ. ರಾಜ್ಯದ ರೈತಾಪಿಯು ಇಂದು ಅಸಹನೀಯ ಬಿಕ್ಕಟ್ಟುಗಳಲ್ಲಿ ಸಿಲುಕಿ ನರಳುತ್ತಿದೆ. ಮೇಲುಕೋಟೆಯಿಂದ ಪುಟ್ಟಣ್ಣಯ್ಯ ಗೆದ್ದು, ವಿಧಾನಸಭೆ ಪ್ರವೇಶಿಸಲಿ, ರೈತ-ದಮನಿತರ ಪರವಾಗಿ ಮಾತನಾಡಬಲ್ಲವರು, ವಿಧಾನಸೌಧದಲ್ಲಿ ನಮಗೆ ಒಬ್ಬರಾದರೂ ಬೇಕೇ ಬೇಕು.

ಶ್ರೀನಿವಾಸ್ ಪ್ರಸಾದ್



ನಂಜನಗೂಡಿನ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್‌ಪ್ರಸಾದ್ ರಾಜ್ಯ ಕಂಡ ಪ್ರಬುದ್ಧ ಉತ್ತಮ ನಾಯಕರಲ್ಲೊಬ್ಬರು. ಹಲವು ದಶಕಗಳ ನಂತರ ವಿಧಾನಸಭೆ ಪ್ರವೇಶಿಸುವ ಹಾದಿಯಲ್ಲಿರುವ ಶ್ರೀನಿವಾಸ ಪ್ರಸಾದ್ ಕರ್ನಾಟಕದ ಇವತ್ತಿನ ಸಂಕೀರ್ಣ ರಾಜಕೀಯ ಪರಿಸ್ಥಿತಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸಬಲ್ಲವರು.


ಚಿಕ್ಕಮಗಳೂರು

ಎಸ್.ಮಲ್ಲಿಕಾರ್ಜುನ್

ಬಿಜೆಪಿಯ ಭ್ರಷ್ಟ ಸಿ.ಟಿ. ರವಿಯನ್ನು ಚಿಕ್ಕಮಗಳೂರಿನ ಜನ ಸೋಲಿಸಿಬಿಟ್ಟರೆ ಅಲ್ಲಿಗೆ ಕರ್ನಾಟಕಕ್ಕೆ ಸ್ವಲ್ಪ ನೆಮ್ಮದಿ ಸಿಕ್ಕಂತೆ. ಒಬ್ಬ ಮಾಮೂಲಿ ತುಂಡು ನಾಯಕನಾಗಿದ್ದ ರವಿ ಕಳೆದ ಬಾರಿ ಗೆದ್ದು ಶಾಸಕನಾದ ನಂತರ ಬೆಂಗಳೂರು, ಮೈಸೂರು, ದೇವನಹಳ್ಳಿ, ಸುರತ್ಕಲ್‌ಗಳಲೆಲ್ಲಾ ನೂರಾರು ಕೋಟಿ ರೂ. ಆಸ್ತಿ ಮಾಡಿಕೊಂಡಿದ್ದಾನೆ. ಇಷ್ಟು ಕಳ್ಳತನ ಮಾಡಿದ ಮೇಲೂ ಇವನ ದೇಶಭಕ್ತಿಯ ಬೊಗಳೆ ಮಾತು ನಿಂತಿಲ್ಲ, ಆದ್ದರಿಂದ ಜನರೇ ಸೋಲಿಸಿ ಮನೆಗೆ ಕಳಿಸಿದರೆ ಉತ್ತಮ.


ಕಾಂಗ್ರೆಸ್‌ನ ಮಲ್ಲಿಕಾರ್ಜುನ ಆ ಕಾರಣಕ್ಕಾಗಿ ಗೆಲ್ಲಬೇಕಿದೆ.

ಸಿದ್ದರಾಮಯ್ಯ



ಗ್ರಾಮೀಣ ಜೀವನದ ಸೊಗಡನ್ನು ಇನ್ನೂ ಉಳಿಸಿಕೊಂಡಿರುವ ಜನಪರ ಕಾಳಜಿಗಳ ಸಿದ್ದರಾಮಯ್ಯ ದೇವೇಗೌಡರ ಪಾಳೆಗಾರಿಕೆ ರಾಜಕಾರಣದ ಸೊಕ್ಕನ್ನು ಮುರಿದವರು. ಪ್ರಜಾಪ್ರಭುತ್ವ ವ್ಯವಸ್ಥೆ ಜೀವಂತವಾಗಿರಲು ಸಿದ್ದರಾಮಯ್ಯ ತರದ ಇನ್ನೂ ಅನೇಕರು ಕರ್ನಾಟಕಕ್ಕೆ ಬೇಕಾಗಿದ್ದಾರೆ. ವರುಣಾದ ಜನತೆ ಅವರನ್ನು ಗೆಲ್ಲಿಸಿದರೆ, ರಾಜ್ಯ ರಾಜಕಾರಣದ ಕ್ಯಾಸ್ಟ್ ಈಕ್ವೇಷನ್‌ನಲ್ಲಿ ಸಮತೋಲನ ಏರ್ಪಡುತ್ತದೆ. ಅದೇರೀತಿ ಕಾಂಗ್ರೆಸ್‌ನ ಪಾಳೆಗಾರಿಕೆ ಆಡಳಿತ ಶೈಲಿ ಬದಲಿಸಿ ಒಂದು ಪ್ರಜಾಸತ್ತಾತ್ಮಕ ಸ್ಪರ್ಶ ನೀಡಬಲ್ಲ ಶಕ್ತಿ ಸಿದ್ದರಾಮಯ್ಯನವರಿಗಿದೆ.

ಎನ್. ಮಹೇಶ್



ರಾಜಕೀಯ ತತ್ವ ಸಿದ್ಧಾಂತಗಳನ್ನು ಓದಿಕೊಂಡಿರುವ, ಕಟ್ಟಾ ಅಂಬೇಡ್ಕರ್ ವಾದಿ ಬಿಎಸ್‌ಪಿಯ ಎನ್. ಮಹೇಶ್ ಕೊಳ್ಳೇಗಾಲದಿಂದ ಗೆಲ್ಲಬೇಕು. ಕರ್ನಾಟಕದ ಪವರ್ ಪಾಲಿಟಿಕ್ಸ್‌ನಲ್ಲಿ ಮೇಲ್ಜಾತಿಗಳ ಹಿಡಿತ ಸಡಿಲವಾಗ ಬೇಕೆಂದರೆ ಮಹೇಶ್ ತರಹದ ನಾಯಕರು ವಿಧಾನಸೌಧ ಪ್ರವೇಶಿಸಬೇಕು.

ಎಚ್. ವಿಶ್ವನಾಥ್



ಕೆ.ಆರ್. ನಗರದಿಂದ ಕಾಂಗ್ರೆಸ್ ವತಿಯಿಂದ ಸ್ಪರ್ಧಿಸಿರುವ ಎಚ್.ವಿಶ್ವನಾಥ್ ಸರಳ ಮನುಷ್ಯ. ಕರ್ನಾಟಕದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಹೊಸ ಯೋಜನೆಗಳನ್ನು ಜಾರಿ ಮಾಡಿ ಹಳ್ಳಿಗಾಡಿನ ಅಸಹಾಯಕ ಕುಟುಂಬಗಳ ಮಕ್ಕಳು ಮತ್ತೆ ಶಾಲೆಗೆ ಬರುವಂತೆ ಮಾಡಿದರು. ಇವರು ಮತ್ತೆ ಗೆಲ್ಲಲೇ ಬೇಕೆನ್ನಲು ಇನ್ನೊಂದು ಸಮರ್ಥನೆಯೂ ಇದೆ. ಅದು ಇವರ ಪ್ರತಿಸ್ಪರ್ಧಿ ಜೆಡಿಎಸ್‌ನ ಸಾ.ರಾ.ಮಹೇಶ್, ಮಹಾನ್ ಭೂಗಳ್ಳನೂ ಮೂಲತಃ ಕೋಮುವಾದಿಗಳ ಏಜೆಂಟನೂ ಆಗಿರುವ ಸಾ.ರಾ. ಮಹೇಶ್ ಗೆದ್ದರೆ ಮೈಸೂರಿನ ಯಾರಿಗೂ ನೆಮ್ಮದಿ ಸಿಗದು.

ಸೋಲಬೇಕಾದವರು

ಆರ್.ಅಶೋಕ್



ಬಿಜೆಪಿಯ ಅಶೋಕನಂತಹ ಭೂಗಳ್ಳ ಕರ್ನಾಟಕ ರಾಜಕೀಯದ ಇತಿಹಾಸದಲ್ಲೇ ಸಿಗುವುದಿಲ್ಲ. ಪದ್ಮನಾಭನಗರದ ಮತದಾರ ಈತನನ್ನು ಒಮ್ಮೆ ಸೋಲಿಸಿದರೆ ರಾಜ್ಯದ ಸಾವಿರಾರು ಕೋಟಿ ರೂ. ಸಂಪತ್ತು ಉಳಿಯುತ್ತದೆ. ಈತನ ಭೂಗಳ್ಳತನದ ಬಗ್ಗೆ ಸರಿಯಾದ ತನಿಖೆ ಆದರೆ ಜೀವನಪರ್ಯಂತ ಜೈಲಿನಲ್ಲಿರುವಷ್ಟು ಹಗರಣಗಳಿವೆ.

ಡಾ|| ಅನ್ನದಾನಿ



ಮಳವಳ್ಳಿ ಮೀಸಲು ಕ್ಷೇತ್ರದಿಂದ ಕಳೆದ ಬಾರಿ ಗೆದ್ದಿದ್ದ ಅನ್ನದಾನಿ ಕ್ಷೇತ್ರದ ಜನತೆಗೂ ಒಳ್ಳೆಯದು ಮಾಡಲಿಲ್ಲ. ಜೊತೆಗೆ ಪಕ್ಷಕ್ಕೂ ಒಳ್ಳೇ ಹೆಸರು ತರಲಿಲ್ಲ. ಈತನ ಭ್ರಷ್ಟಾಚಾರಕ್ಕೆ ಮಿತಿಯೇ ಇರಲಿಲ್ಲ. 'ಕೋತಿ ತಾನು ಮೊಸರು ತಿಂದು ಮೇಕೆ ಬಾಯಿಗೆ ಒರೆಸಿತಂತೆ' ಅನ್ನೋ ಗಾದೆ ಮಾತು ಅನ್ನದಾನಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಈ ಭ್ರಷ್ಟ ತಾನೊಬ್ಬನೇ ಎಲ್ಲಾ ತಿಂದು ಕ್ಷೇತ್ರ ದಿವಾಳಿ ಎಬ್ಬಿಸಿದ್ದಾನೆ.

ರೊಕ್ಕದ ಮುಂದೆ ಆದರ್ಶವೇ ಹಿಂದೆ


ಜನಾರ್ದನ ರೆಡ್ಡಿ


ಸುಬ್ರತೋರಾಯ್


ಸಂಜಯ್ ಖೇಣಿ


ವಿಶ್ವನಾಥ್ ರೆಡ್ಡಿ


ರುದ್ರೇಶ್


ಜೀತೂ ನೀರ್‍ವಾನಿ

ಹೈಕಮಾಂಡ್‌ಗೋ ಪಾರ್ಟಿ ಫಂಡಿಗೋ ದುಡ್ಡು ಕೊಟ್ಟು ಪಾರ್ಟಿ ಟಿಕೆಟ್ ಖರೀದಿಸುವ ಕೆಟ್ಟ ಚಾಳಿಗೆ ಈತನಕ ಕಾಂಗ್ರೆಸ್ ಹೆಸರಾಗಿತ್ತು, ಆದರೆ ಬಿಜೆಪಿ ಈ ಬಾರಿ ಕಾಂಗ್ರೆಸ್ಸಿನ ಅಷ್ಟೂ ದಾಖಲೆಗಳನ್ನು ಮುರಿದು ಹಾಕಿದೆ. ಜೀವನಪರ್ಯಂತ ಬಿಜೆಪಿ ಕಟ್ಟಲು ಜೀವತೇದ ಕಾರ್ಯಕರ್ತರ ಸಮಾಧಿಯ ಮೇಲೇ ಊಟಕ್ಕೆ ಕುಂತ ಯಡ್ಡಿಯ ದುಡ್ಡಿನ ದಾಹ ಯಾವ ಮಟ್ಟದ್ದೆಂದರೆ; ಲಿಕ್ಕರ್ ದೊರೆ ಪ್ರಸಾದ್ ರೆಡ್ಡಿ ಒಬ್ಬನೇ ಹನ್ನೆರಡು ಕೋಟಿ ಕೊಟ್ಟು ಬಿಟಿಎಂ ಲೇಔಟ್ ಕ್ಷೇತ್ರದ ಬಿಜೆಪಿ ಟಿಕೆಟ್ ಖರೀದಿಸಿದ್ದಾನೆ.

ಸಾಲದ್ದಕ್ಕೆ ಇದೇ ಪ್ರಸಾದ್ ರೆಡ್ಡಿ ಬೆಂಗಳೂರಿನ ಇತರೇ ಎಂಟು ಮಂದಿ ಬಿಜೆಪಿ ಅಭ್ಯರ್ಥಿಗಳ ಎಲೆಕ್ಷನ್ ಖರ್ಚನ್ನೂ ನಿಭಾಯಿಸುವ ಭರವಸೆ ಕೊಟ್ಟಿದ್ದಾನೆ!

ಪ್ರಸಾದ್ ರೆಡ್ಡಿ ಒಬ್ಬನೇ ಹನ್ನೆರಡು ಕೋಟಿ ಕೊಟ್ಟರೆ, ಕೆ.ಆರ್. ಪುರದ ನಂದೀಶ್ ರೆಡ್ಡಿಗೆ ಹತ್ತು ಕೋಟಿ ಕೊಡುವುದು ಯಾವ ಕಷ್ಟ? ಶಾಂತಿನಗರದ ಬಿಜೆಪಿ ಅಭ್ಯರ್ಥಿ ಮಲ್ಲಿಕಾರ್ಜುನ ಹೇಳಿಕೇಳಿ ಜೆಡಿಎಸ್ ನಾಯಕ ಜಮೀರ್ ಅಹ್ಮದ್ ಛೇಲಾ. ನಿನ್ನೆಮೊನ್ನೆಯ ತನಕ ಕುಮಾರಸ್ವಾಮಿ, ಜಮೀರ್ ಜೊತೆ ಸದಾಶಿವನಗರದ ಗೆಸ್ಟ್‌ಹೌಸಿನಲ್ಲಿ ಕೂತು ಇಸ್ಪೀಟೆಲೆ ತಟ್ಟಿಕೊಂಡಿದ್ದ ಹುಟ್ಟಾ ನೆಲಗಳ್ಳ, ಮುಂಬಯಿಯ ಮಂತ್ರಿ ಬಿಲ್ಡರ್ಸ್, ಪೂರ್ವಂಕರ ಡೆವಲಪರ್ಸ್‌ನಂಥ ರಿಯಲ್ ಎಸ್ಟೇಟ್ ದೈತ್ಯರ ಪಾಲಿಗೆ ಈತನೇ ಲೋಕಲ್ ನೆಲಹಿಡುಕ. ಇಂಥ ಹರಾಮಿ ದುಡ್ಡಿತ್ತಲ್ಲ, ಅದರಲ್ಲಿ ಐದು ಕೋಟಿ ಕೊಟ್ಟಾ ಕ್ಷಣವೇ ಯಡ್ಡಿಗೆ ತಲೆತಿರುಗಿದೆ. ಕುಳ್ಳಾ ಮಲ್ಲಿಕಾರ್ಜುನನಿಗೆ ಬಿಜೆಪಿ ಟಿಕೆಟ್ ಸಿಕ್ಕಿದ್ದೇ ಈ ರೀತಿ.

ಅಶೋಕ್ ತನ್ನ ಖಾಸಾ ತಮ್ಮ ರವಿಗೆಂದು ಬ್ಯಾಟರಾಯನಪುರದ ಬಿಜೆಪಿ ಟಿಕೆಟ್ ಕೊಡಿಸಲು ಮೂರು ಕೋಟಿಯ ಪಾರ್ಟಿ ಫಂಡ್ ಕೊಡಬೇಕಾಯಿತು. ಶಿವಾಜಿನಗರದ ಬಿಜೆಪಿ ಅಭ್ಯರ್ಥಿ ನಿರ್ಮಲ್ ಕುಮಾರ್ ಸುರಾನಾ ಹೇಳಿಕೇಳಿ ಸಿಂಗಲ್ ನಂಬರ್ ಲಾಟರಿ ದೊರೆ. ಒಂದು ಮೂಲದ ಪ್ರಕಾರ ಈತನೇ ಹತ್ತು ಕೋಟಿ ಕೊಟ್ಟಿದ್ದಾನೆ.

ನಿನ್ನೆಮೊನ್ನೆಯ ತನಕ ಕಾಂಗ್ರೆಸ್ ನಾಯಕನಾಗಿದ್ದ ಮಾಜಿ ಡೆಪ್ಯೂಟಿ ಮೇಯರ್ ಆರ್. ಶಂಕರ್‌ಗೆ ರಾತ್ರೋರಾತ್ರಿ ಸರ್ವಜ್ಞನಗರದ ಬಿಜೆಪಿ ಟಿಕೆಟ್ ಸಿಕ್ಕಿದ್ದು ಕೂಡ ರೊಕ್ಕಕ್ಕೇ. ಐಪಿಎಸ್ ಅಧಿಕಾರಿ ಕೆ.ಸಿ. ರಾಮಮೂರ್ತಿಯನ್ನೇ ಬದಿಗೊತ್ತಿ ಬಿಜೆಪಿ ಟಿಕೆಟ್ ಗಿಟ್ಟಿಸಲು ಶಂಕರ್ ಮೂರು ಕೋಟಿ ಬಿಚ್ಚಬೇಕಾಯ್ತು, ಹಾಗೇ ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ಗಿಟ್ಟಿಸಿದ ಎಂ. ಕೃಷ್ಣಪ್ಪನಿಗೆ ಅದಕ್ಕಿಂತಲೇ ಮೂರು ಕೋಟಿ ಕೈಬಿಟ್ಟಿದೆ. ಏಕೆಂದರೆ ಈ ಹೊತ್ತಿಗಾಗಲೇ ಈತನ ಅಣ್ಣ ಮತ್ತು ಶಾಸಕ ಎಂ. ಶ್ರೀನಿವಾಸ್‌ಗೆ ರಾಜರಾಜೇಶ್ವರಿ ನಗರದ ಬಿಜೆಪಿ ಟಿಕೆಟ್ ಕೊಟ್ಟಾಗಿತ್ತು,

ಯಲಬುರ್ಗಾದ ವಿಶ್ವನಾಥ್ ರೆಡ್ಡಿ, ಚಾಮರಾಜಪೇಟೆಯ ಶಾಮಸುಂದರ್ ಗಾಯಕ್‌ವಾಡ್, ರಾಮನಗರದ ರುದ್ರೇಶ್, ಮಂಡ್ಯದ ವಿದ್ಯಾ ನಾಗಣ್ಣ ಮುಂತಾದವರೆಲ್ಲ ಕನಿಷ್ಠ ಐವತ್ತು ಲಕ್ಷದಿಂದ ಮೂರು ಕೋಟಿ ಕೊಟ್ಟೇ ಟಿಕೆಟ್ ಖರೀದಿಸಿದ್ದಾರೆ. ಈ ಕಾರಣಕ್ಕೇ ಒಂದೇ ಕುಟುಂಬದ ಇಬ್ಬರಿಗೆ ಟಿಕೆಟ್ ಎಂಬ ಶಿಷ್ಟಾಚಾರವನ್ನೂ ಬಿಜೆಪಿ ಬದಿಗೊತ್ತಿದೆ. ದುಡ್ಡಿನ ಮುಂದೆ ಬೇರೆಲ್ಲವೂ ಹಿಂದೆ!

ಬಿಜೆಪಿಯತ್ತ 480 ಕೋಟಿ ಹಣದ ಹೊಳೆ



ಸ್ವಾತಂತ್ರ್ಯಾನಂತರದಿಂದ ಕರ್ನಾಟಕವನ್ನಾಳಿದ ಕಾಂಗ್ರೆಸ್, ಮಧ್ಯೆ ಹತ್ತು ವರ್ಷ ಅಧಿಕಾರದಲ್ಲಿದ್ದ ಜನತಾ ಪರಿವಾರಗಳನ್ನೆಲ್ಲ ಬಿಜೆಪಿಯ ಮುಂದೆ ನೀವಾಳಿಸಿ ಎಸೆಯಬೇಕು. ಹಾಗಿದೆ ಕೇಸರಿಗಳ ಕಾಂಚಾಣಬಲ!

ಸೋಲುವ ಅಭ್ಯರ್ಥಿಗೂ ಕನಿಷ್ಠ ಮೂವತ್ತೈದು ಲಕ್ಷದ ಪಾರ್ಟಿ ಫಂಡು; ಮತ್ತೊಂದು ಕಾರು ಹೈಟೆಕ್ ಚುನಾವಣಾ ಪ್ರಚಾರಕ್ಕೆಂದೇ ಹೈಟೆಕ್ಕಾದ ಏರ್‌ಕಂಡೀಷನ್ಡ್ ಕಾಂಪ್ಲೆಕ್ಸು, ಮೀಡಿಯಾ ಕವರೇಜ್ ನೋಡಿಕೊಳ್ಳುವುದಕ್ಕೇ ನಾಲ್ಕು ದೈತ್ಯ ಕಂಪೆನಿಗಳು. ವಿ.ಕ.ದ ಹಿರಿಯ ಪತ್ರಕರ್ತರಿಂದ ಹಿಡಿದು ಪುಡಿ ಪತ್ರಕರ್ತನಿಗೂ ಗರಿಷ್ಠ ಹತ್ತು ಲಕ್ಷದ ತನಕ ಶಕ್ತ್ಯಾನುಸಾರ ಪ್ಯಾಕೇಜು, ಸರ್ವೆ ಏಜೆನ್ಸಿಯೊಂದಕ್ಕೆ ಒಂದೂವರೆ ಕೋಟಿಯ ಕಾಂಟ್ರಾಕ್ಟು ಹೀಗೆ ಸಾಗುವ ಬಿಜೆಪಿ ಚುನಾವಣಾ ಲೆಕ್ಕಾಚಾರದ ಒಟ್ಟು ಮೊತ್ತವೆಷ್ಟು ಗೊತ್ತೆ?

ಬರೋಬ್ಬರಿ ನಾನೂರ ಎಂಭತ್ತು ಕೋಟಿ!


ಬಳ್ಳಾರಿಯಲ್ಲಿ ಗಣಿರೆಡ್ಡಿಗಳ ಹತ್ತು ಕೋಟಿ ದುಡ್ಡು ಚುನಾವಣಾಧಿಕಾರಿಗಳ ಪಾಲಾಯಿತಲ್ಲ. ಬಿಜೆಪಿಯ ಕುರುಡು ಕಾಂಚಾಣದ ಆರ್ಭಟಕ್ಕೊಂದು ಸಣ್ಣ ಉದಾಹರಣೆಯಷ್ಟೆ. ಯಾವ ಕೇಡುಗಾಲಕ್ಕೋ ಏನೋ ಈತನಕ ಕರ್ನಾಟಕದ ಗಣಿ ಸಂಪತ್ತನ್ನು ಕೊಳ್ಳೆ ಹೊಡೆದ ರಾಹುಲ್ ಬಲ್ಡೋಟ, ಮುರುಗೇಶ್ ನಿರಾಣಿ, ಸಹರಾ ಏರ್‌ಲೈನ್ಸ್ ಧಣಿ ಸುಬ್ರತೋ ರಾಯ್, ನೈಸ್ ಕಂಪೆನಿಯ ಅಶೋಕ್ ಖೇಣಿ, ಬೆಂಗಳೂರಿನ ಸರ್ವನಾಶಕ್ಕೆ ಮೂಲಕರ್ತರಾದ ಮಂತ್ರಿ ಡೆವಲಪರ್ಸ್‌ನ ದೈತ್ಯ ಸುಶೀಲ್ ಮಂತ್ರಿ, ಪೂರ್ವಂಕರ ಬಿಲ್ಡರ್ಸ್‌ನ ಖದೀಮ ರವಿ ಪೂರ್ವಂಕರ, ಆದರ್ಶ ಬಿಲ್ಡರ್ಸ್‌ನ ಭೂಡಕಾಯಿತ ಜೈಶಂಕರ್, ಎಂಬೆಸ್ಸಿ ಬಿಲ್ಡರ್ಸ್‌ನ ಹರಾಮಿ ಮಾರ್ವಾಡಿ ಜೀತು ವೀರ್‍ವಾನಿ, ಮಹಾವೀರ್ ಡೆವಲಪರ್ಸ್‌ನ ಪಾಖಂಡಿ ತೇಜರಾಜ ಗುಲೇಚ, ರಂಕಾ ಬಿಲ್ಡರ್ಸ್‌ನ ಭೂಕಂಟಕ ದಿನೇಶ್ ರಂಕಾ, ಬೆಂಗಳೂರಿನ ನೆಲಗಳ್ಳರೆಲ್ಲರ ಪಿತಾಮಹ ದಯಾನಂದ ಪೈ, ಹವಾಲಾ ಕಿಂಗ್ ಶಾಂತಿಲಾಲ್ ಜೈನ್, ಸಿಂಗಲ್ ನಂಬರ್ ಲಾಟರಿ ದೊರೆ ರಿಕಬ್‌ಚಂದ್, ಸುರಾನಾ, ರಾಜ್‌ಕುಮಾರ್ ಪೈ, ರಹೇಜಾ ಗ್ರೂಪ್‌ನ ಅರ್ಜುನ್ ಮೆಂಡಾ, ಚಿಕ್ಕಪೇಟೆಯ ರೇಷ್ಮೆ ಸಗ್ಗರ್ ಪಟೇಲ್ ಅಂಗಾಡಿಯಾ, ಜೈಪುರಿಯಾ; ಹೀಗೆ ಬೆಂಗಳೂರಿನ ಘಟಿಂಗ ಭೂಡಕಾಯಿತರು, ಕನ್ನಡ ತಾಯಿಯ ಭೂಗರ್ಭವನ್ನೇ ಬಗೆದು ಗಣಿ ಸಂಪತ್ತನ್ನು ದೋಚಿದವರು, ಸಿಂಗಲ್ ನಂಬರ್ ಲಾಟರಿ ದೊರೆಗಳು, ಚಿಕ್ಕಪೇಟೆಯ ನಟೋರಿಯಸ್ ತೆರಿಗೆಗಳ್ಳರೆಲ್ಲರೂ ಒಗ್ಗಟ್ಟಾಗಿ ದೊಡ್ಡಮಟ್ಟದಲ್ಲಿ ಬಿಜೆಪಿಗೆ ಫಂಡು ಕೊಡುತ್ತಿದ್ದಾರೆ.

ಇಂಥ ದುಷ್ಟರ ಪೈಕಿ ಕೆಲವರು ಬಿಜೆಪಿಯ ಟಿಕೆಟ್ಟನ್ನೇ ಖರೀದಿಸಿ ಅಭ್ಯರ್ಥಿಗಳಾಗಿರುವುದು ಒತ್ತಟ್ಟಿಗಿರಲಿ, ಹಿಂದೆಂದೂ ಇಲ್ಲದಂತೆ ಈ ಬಾರಿ ಬಿಜೆಪಿಗೇಕೆ ಇವರೆಲ್ಲ ಈ ಪಾಟಿ ರೊಕ್ಕ ಸುರಿಯುತ್ತಿದ್ದಾರೆ?

ಶತಗತಾಯ ಇವರೆಲ್ಲರಿಗೂ ಕರ್ನಾಟಕದಲ್ಲಿ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರಲೇಬೇಕಿದೆ. ನಿನ್ನೆ ಮೊನ್ನೆಯತನಕ ಮಾರ್ವಾಡಿಗಳ ಪಕ್ಷವಾಗಿದ್ದ ಬಿಜೆಪಿ ಈ ಬಾರಿ ಭೂಡಕಾಯಿತರು ಮತ್ತು ಗಣಿ ಲೂಟಿಕೋರರ ಪಕ್ಷವಾಗಿ ಬದಲಾಗಿರುವುದೇ ಅದಕ್ಕೆ ಹರಿದು ಬರುತ್ತಿರುವ ಕಪ್ಪು ಹಣಕ್ಕೆ ಮೂಲ ಕಾರಣ.

ರಾಜ್ಯ ಬಿಜೆಪಿಯ ಖಜಾಂಚಿ ಲೆಹರ್‌ಸಿಂಗ್ ಕಳೆದೆರಡು ತಿಂಗಳಿನಿಂದ ಇಂಥ ಬಿಳಿಕಾಲರ್ ಕುಬೇರರಿಂದ ಎಲೆಕ್ಷನ್ ಫಂಡ್ ಸಂಗ್ರಹಿಸುತ್ತಲೇ ಇದ್ದದ್ದು ರಹಸ್ಯವೇನಲ್ಲ, ಸೆಂಟ್ರಲ್ ಐಬಿಯ ಉನ್ನತ ಮೂಲವೊಂದರ ಪ್ರಕಾರ ಸಹರಾ ಏರ್‌ಲೈನ್ಸ್‌ನ ಧಣಿ ಸುಬ್ರತೋರಾಯ್ ಒಬ್ಬನೇ ಕರ್ನಾಟಕದ ಎಲೆಕ್ಷನ್ನಿಗೆಂದು ಸಾಗಿಸಿದ ಮೊತ್ತ ನೂರು ಕೋಟಿ!

ಪ್ರಮೋದ್ ಮಹಾಜನ್ ಬದುಕಿದ್ದಷ್ಟೂ ದಿನ ಬಿಜೆಪಿಯ ಟಾಪ್‌ಪ್ರೊಸ್ಸ್ ಲೀಡರು ಪಾಲಿಗೆ ಈ ಸುಬ್ರತೋ ರಾಯ್‌ನೇ ಸ್ವಿಸ್ ಬ್ಯಾಂಕಿನಂತಿದ್ದ, ವೆಂಕಯ್ಯ ನಾಯ್ಡು, ಅನಂತ್‌ಕುಮಾರ್, ಸುಷ್ಮಾ ಸ್ವರಾಜ್, ಅರುಣ್ ಜೈಟ್ಲಿ ಮುಂತಾದವರೆಲ್ಲರ ಕೊಳ್ಳೆಯ ದುಡ್ಡು ಸಹರಾ ಗ್ರೂಪ್ ಮೂಲಕ ಚಲಾವಣೆಯಲ್ಲಿದೆ. ಸಂಡೂರು, ಬಳ್ಳಾರಿ, ಚಿಕ್ಕನಾಯಕನಹಳ್ಳಿಯ ಅರಣ್ಯ ಭೂಮಿಯಿಂದ ದೋಚಿದ ಕಬ್ಬಿಣದ ಅದಿರನ್ನು ಚೈನಾಕ್ಕೆ ಸಾಗಿಸುವಲ್ಲಿ ಸುಬ್ರತೋ ರಾಯ್‌ನ ಸಹರಾ ಕಂಪೆನಿಯೇ ಬಹುಮುಖ್ಯ ಪಾತ್ರಧಾರಿ. ಇಂಥವನು ಕೊಟ್ಟ ನೂರು ಕೋಟಿ ಈಗಾಗಲೇ ನಾಡನ್ನು ದೋಚಿದ್ದಾ ಅಥವಾ ಬಿಜೆಪಿಯನ್ನು ಅಧಿಕಾರಕ್ಕೆ ತಂದು ದೋಚುವ ಉದ್ದೇಶದಿಂದ ಕೊಟ್ಟಿ ಅದ್ದಾನ್ನಾ?


ಲೆಹರ್ ಸಿಂಗ್

ಈತನಿಗಿಂತಲೂ ದೊಡ್ಡ ಮೊತ್ತದ ಬ್ಲ್ಯಾಕ್‌ಮನಿ ಸುರಿಯುತ್ತಿರುವವನು ಬಳ್ಳಾರಿಯ ಸೈತಾನ್ ಜನಾರ್ದನ್ ರೆಡ್ಡಿ. ಸದ್ಯ ಈತನ ಒಬ್ಬ ಅಣ್ಣ ಸೋಮಶೇಖರ ರೆಡ್ಡಿ ಬಳ್ಳಾರಿ ನಗರಕ್ಕೆ ಬಿಜೆಪಿ ಅಭ್ಯರ್ಥಿಯಾದರೆ, ಮತ್ತೊಬ್ಬ ಅಣ್ಣ ಕರುಣಾಕರ ರೆಡ್ಡಿ ಹರಪನಹಳ್ಳಿಗೆ ನಿಂತಿದ್ದಾನೆ. ಇವರಿಬ್ಬರ ಎಲೆಕ್ಷನ್ ಬಜೆಟ್ಟೇ ಕಮ್ಮಿಯೆಂದರೂ ತಲಾ ಹತ್ತು ಕೋಟಿ. ಇನ್ನು ಜನಾರ್ದನ್ ರೆಡ್ಡಿ ಬಳ್ಳಾರಿ, ಕೊಪ್ಪಳ, ರಾಯಚೂರು, ಗುಲ್ಬರ್ಗಾ, ಗದಗ, ಹಾವೇರಿ, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳ ಒಟ್ಟು ನಲವತ್ತೆಂಟು ಮಂದಿ ಬಿಜೆಪಿ ಅಭ್ಯರ್ಥಿಗಳಿಗೆಂದು ತಲಾ ಒಂದು ಕೋಟಿಯಂತೆ ಬರೋಬ್ಬರಿ ನಲವತ್ತೆಂಟು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾನೆ.

ಇಷ್ಟಲ್ಲದೇ ಕೋಲಾರದ ಮುಳಬಾಗಿಲು, ಬಾಗೇಪಲ್ಲಿ; ತುಮಕೂರಿನ ಪಾವಗಡ, ಗುಬ್ಬಿ ಹೊಸದುರ್ಗದ ಬಿಜೆಪಿ ಅಭ್ಯರ್ಥಿಗಳ ಚುನಾವಣಾ ಖರ್ಚನ್ನೂ ತಾನೇ ವಹಿಸಿಕೊಂಡಿದ್ದಾನೆ. ಈ ಸಲದ ಎಲೆಕ್ಷನ್ನಿಗೆಂದೇ ಗಣಿ ರೆಡ್ಡಿ ಎತ್ತಿಟ್ಟ ಮೊತ್ತ ನೂರು ಕೋಟಿ!

ಆತನ ಮಟ್ಟಿಗದು ತುಂಬಾ ಸಣ್ಣ ಮೊತ್ತ ಕನ್ನಡ ತಾಯಿಯ ಭೂಗರ್ಭವನ್ನೇ ಬಗೆದು ದೋಚಿದ ದುಡ್ಡಲ್ಲೇ ಅಧಿಕಾರ ಹಿಡಿದು ಅಳಿದುಳಿದ ಭೂ ಸಂಪತ್ತನ್ನೂ ಚೈನಾಕ್ಕೆ ಹೊತ್ತೊಯ್ಯುವ ಈತನ ಹುನ್ನಾರಕ್ಕೆ ಪಾಪದ ರೊಕ್ಕಕ್ಕೆ ಬಿಜೆಪಿಯಂಥ ಪಕ್ಷವೇ ತನ್ನನ್ನು ತಾನೇ ಮಾರಿಕೊಳ್ಳುತ್ತಿದೆಯೆಂದರೆ ನಾಡಿಗಿನ್ನು ಯಾವ ಭವಿಷ್ಯವುಂಟು?

ನೈಸ್ ಕಂಪೆನಿಯ ಅಶೋಕ್ ಖೇಣಿ ಈತನ ತಮ್ಮ. ಇದೀ ಬಿಜೆಪಿ ವಲಯವೇ ಪಿಸುಗುಡುವ ಪ್ರಕಾರ ಖೇಣಿ ಒಬ್ಬನೇ ಮೂವತ್ತು ಕೋಟಿ ರೂಪಾಯಿಗಳ ಪಾರ್ಟಿ ಫಂಡ್ ಕೊಟ್ಟಿದ್ದಾನೆ. ಅದರಲ್ಲೂ ರಾಮನಗರದಲ್ಲಿ ಕುಮಾರಸ್ವಾಮಿಯನ್ನು ಸೋಲಿಸಲು ತನ್ನ ಸಾಕುನಾಯಿ ರುದ್ರೇಶನಿಗೆ ಬಿಜೆಪಿ ಟಿಕೆಟ್ ಕೊಡಿಸಿ ವೆಚ್ಚಕ್ಕೆಂದು ಐದು ಕೋಟಿ ಕೈಗಿತ್ತಿದ್ದಾನೆ. ತನ್ನ ಮತ್ತೊಬ್ಬ ಛೇಲಾ ರೇಣುಕಾಚಾರ್ಯನಿಗೆ ಹತ್ತುಕೋಟಿ, ತನ್ನ ಸೋದರ ಸಂಬಂಧಿ ಸಂಜಯ್ ಖೇಣಿಗೆ ಬೀದರ್ ದಕ್ಷಿಣದ ಬಿಜೆಪಿ ಟಿಕೆಟ್ಟು ಕೊಡಿಸಿ ಆತನಿಗೂ ಹತ್ತು ಕೋಟಿ ಕೊಟ್ಟ ಖೇಣಿ ಇದ್ಯಾವುದನ್ನೂ ತನ್ನ ತಾತನ ಸೊತ್ತಿನಿಂದ ಎತ್ತಿ ಕೊಟ್ಟಿಲ್ಲ, ಅದು ನೈಸ್ ಹೆಸರಲ್ಲಿ ಬಡರೈತರನ್ನು ಬೀದಿಗೆ ಹಾಕಿದ ಪಾಪದ ದುಡ್ಡು!

ಬಹುಶಃ ಕಾಂಗ್ರೆಸ್ ಕೂಡ ಇಷ್ಟೊಂದು ಬಹಿರಂಗವಾಗಿ ಪಾಪದ ದುಡ್ಡು ಮುಟ್ಟಿದ್ದಿಲ್ಲ!

ಇದೆಲ್ಲ ಬಿಜೆಪಿ ಎಲೆಕ್ಷನ್ ಫಂಡಿನ ಸಾರಾಸಗಟು ವಹಿವಾಟಾದರೆ ಬಿಡಿಬಿಡಿಯಾಗಿ ಕೋಟಿಯೆಣಿಸಿದ ದುರುಳರ ದೊಡ್ಡ ಹಿಂಡೇ ಬಿಜೆಪಿಯ ಬೆನ್ನಿಗೆ ನಿಂತಿದೆ. ಈ ಪೈಕಿ ಎಂಬೆಸ್ಸಿ ಬಿಲ್ಡರ್ಸ್‌ನ ನೆಲವಂಚಕ ಜೀತು ವೀರ್‍ವಾನಿ ಒಬ್ಬನೇ ಇಪ್ಪತ್ತೈದು ಕೋಟಿ ಕೊಟ್ಟಿದ್ದಾನೆ. ಅದು ಕೈಗಾರಿಕಾ ಮಂತ್ರಿಯಾಗಿದ್ದ ಕಟ್ಟಾ ನಾಯ್ಡುವನ್ನು ಮುಂದಿಟ್ಟುಕೊಂಡು ವೈಟ್‌ಫೀಲ್ಡ್‌ನಲ್ಲಿ ಆತ ದೋಚಿದ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನೂರು ಕೋಟಿ ಆಸ್ತಿಯ ಕಮೀಷನ್. ಜೀತು ವೀರ್‍ವಾನಿಯ ಜೊತೆ ಈತನ ಜೋಡಿದಾರ ತೇಜರಾಜ್ ಗುಲೇಚನನ್ನು ಹಿಡಿತಂದು ಬಿಜೆಪಿಗೆ ಒಪ್ಪಿಸಿದವನು ರಾಜ್ಯ ಬಿಜೆಪಿಯ ಖಜಾಂಚಿ ಲೆಹರ್ ಸಿಂಗ್.

ಈತ ಅದೆಂಥಾ ಪಾಖಂಡಿಯೆಂದರೆ, ಒಂದಾನೊಂದು ಕಾಲಕ್ಕೆ ಮುರುಕಲು ಟ್ರಂಕೆತ್ತಿಕೊಂಡು ರಾಜಸ್ತಾನದಿಂದ ಗುಳೇ ಬಂದ ಈತ ಮುಂಬಯಿ ಮೂಲದ ಬಿಲ್ಡರುಗಳ ಅನುಕೂಲಕ್ಕೆಂದೇ ದೇಶಪಾಂಡೆ ಮೂಲಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕಾಯ್ದೆಯನ್ನು ತಿದ್ದುಪಡಿ ಮಾಡಿದ.

ಆವತ್ತು ವಿರೋಧ ಪಕ್ಷವಾಗಿದ್ದ ಬಿಜೆಪಿಯ ಯಾವೊಬ್ಬ ಶಾಸಕನೂ ಬಿಲ್ಡರುಗಳ ಅನುಕೂಲಕ್ಕಾಗಿ KIADB ಯ ಕಾಯ್ದೆ ತಿದ್ದುಪಡಿಯ ವಿರುದ್ಧ ಸೊಲ್ಲೆತ್ತದೇ ಕೂತಿದ್ದೇ ಈ ಲೆಹರ್‌ಸಿಂಗ್ ಕಾರಣಕ್ಕೆ. ಈತನೇ ಕೊಟ್ಟಿರುವ ಲೆಕ್ಕದಂತೆ ನೂರಾರು ಕೋಟಿ ರೂಪಾಯಿಗಳು ಖದೀಮ ಬಿಲ್ಡರ್‌ಗಳಿಂದ ತೆರಿಗೆ ಕಳ್ಳರಿಂದ ಬಿಜೆಪಿಗೆ ಹರಿದು ಬಂದಿದೆ.

ನಾಡಿನ ಭೂಸಂಪತ್ತು ಮತ್ತು ಜನಸೊತ್ತನ್ನು ಕಾಯಬೇಕಿದ್ದ ಪಕ್ಷವೊಂದು ಅದನ್ನು ದೋಚಿದವರಿಗೇ ತನ್ನನ್ನು ಮಾರಿಕೊಂಡರೆ ನಾಡಿಗೆ ಉಳಿಗಾಲವುಂಟೆ? ಅಂಥ ಪಕ್ಷವೊಂದು ಅಧಿಕಾರಕ್ಕೆ ಬಂದರೆ ಇನ್ನೆಷ್ಟು ಕಬ್ಬಿಣದ ಅದಿರು ಸೂರೆಯಾಗಬೇಕು? ಅದೆಷ್ಟು ರೈತರ ಭೂಮಿ ದರೋಡೆಗೊಳ್ಳಬೇಕು?

ರಾಮಭಕ್ತಿ ಹಾಳಾಗಲಿ ದೇಶಭಕ್ತಿ ಕೂಡ ಇಲ್ಲದವರ ನಿಜ ಬಣ್ಣ ಬಯಲಾಗಿದೆ.

■ ರಾ. ಸೋಮನಾಥ್



ಚಿಕ್ಕಪೇಟೆ: ಸಾಗರ್‌ನ ಐದು ಕೋಟಿಯೆದುರು ಗರುಡನ ಮೂರು ಕೋಟಿ ಯಾವ ಲೆಕ್ಕ

ಬಿಜೆಪಿಯ ದುರಾಚಾರಕ್ಕೆ ಚಿಕ್ಕಪೇಟೆಗಿಂತ ಸೂಕ್ತ ದಾಹರಣೆ ಸಿಗಲಿಕ್ಕಿಲ್ಲ. ಆ ಕಾಲದಿಂದಲೂ ರ್ನಾಡಿಗಳ ಮಧ್ಯೆ ಬಿಜೆಪಿ ಕಟ್ಟಿದ ಎಲ್. ಸಿಮಾರ್, ಧನರಾಜ್, ಕೃಷ್ಣಾರೆಡ್ಡಿಯಂಥ ಸ್ ನಾಯಕರ ಹಿಂದೇ ಚಿಕ್ಕಪೇಟೆಯಲ್ಲಿತ್ತು. ವತ್ತು ಗರುಡಾಮಾಲ್ ಖದೀಮ ಉದಯ ಡಾಚಾರ್ ರೊಕ್ಕದ ಕಂತೆ ಹಿಡಿದು ಯಡ್ಡಿ ಯು ಬಾಗಿಲು ಬಡಿದನೋ ಬಿಜೆಪಿ ನಾಯಕರ ಯೇ ಬದಲಾಗಿತ್ತು, ಗರುಡಾ ಉದಯನಿಂದ ರು ಕೋಟಿ ಪೀಕಿದ ಯಡ್ಡಿ ನಿಷ್ಠಾವಂತ ರ್ಯಕರ್ತರನ್ನು ವಂಚಿಸಿಬಿಟ್ಟರು. ಪ್ರಾರಂಭದಲ್ಲಿ ನೇ ಚಿಕ್ಕಪೇಟೆಯ ಅಭ್ಯರ್ಥಿಯೆಂದು ಷಿಸಿದ್ದರು.

ಜನಿಷ್ಠ ಗರುಡಾ ಖದೀಮನಿಗಾದರೂ ಪಿ ನಿಯತ್ತಾಗಿರಬೇಕಿತ್ತು ತಾನೇ? ಆದರೆ ದೀಲೋ ಆಸ್ಪತ್ರೆ ಧಣಿ ಹೇಮಚಂದ್ರ ್ ಇದೇ ಚಿಕ್ಕಪೇಟೆಗೆ ಐದು ಕೋಟಿ ಡುತ್ತೇನೆಂದು ಹರಾಜಿಗೆ ನಿಂತ. ಯಡ್ಡಿಗೆ ತಿರುಗಿತು. ಸಾಗರ್ ಕೊಟ್ಟ ಐದು ಟಿಯನ್ನು ಕ್ಕೆ ವಿಸಿಕೊಂಡಿದ್ದೇ ಡಾ ಯನಿಗೆ ದ್ದನ್ನು ್ ಮಾಡಿ ್ರೋರಾತ್ರಿ ಚಂದ್ರ ್ಗೆ 'ಬಿ' ಫಾರ್ಮ್ ಕೊಟ್ಟುಬಿಟ್ಟರು.



ಸ್ವಾಗಂತ ಗರುಡಾಚಾರ್ ಸುಮ್ಮನಿರುತ್ತಾನಾ? ಮನೆ ಮುಂದೆ ನಿಂತು ಎದೆಬಡಕೊಂಡ ಯನಿಗೆ ನೀನೇ ಮುಂದಿನ ಎಂಪಿ ರಡೇಟು ಅಂತ ತಲೆ ತಿಕ್ಕಿದ್ದಾರೆ. ಟಿಕೆಟ್ ದಿಸಿದ ಸಾಗರ್ ಸದ್ಯ ಚಿಕ್ಕಪೇಟೆಯಲ್ಲಿ ರೊಕ್ಕದ ಹೊಯನ್ನೇ ಹರಿಸಿದ್ದಾರೆ. ಜಮೀರ್ ತಮ್ಮ ಮ್ಮಿಲ್ ಇಲ್ಲಿನ ಜೆಡಿಎಸ್ ಅಭ್ಯರ್ಥಿಯಾದರೂ ವುದು ಕಷ್ಟ. ಹೇಗಿದ್ದರೂ ಸೋಲುತ್ತಾನೆ. ಇಲ್ಲಿನ ಮುಸ್ಲಿಮರೆಲ್ಲ ಕೊನೇ ಗಳಿಗೆಯಲ್ಲಿ ಪ್ರೆಸ ಆರ್.ವಿ. ದೇವರಾಜ್ ಬೆಂಬಲಿಸಲು ರ್ಧರಿಸಿದ್ದಾರೆ. ದೇವಿಗೂ ಬುದ್ಧಿ ಬಂದಿದೆ. ತನ್ನ ಚಾಳಿಯನ್ನು ಬಿಟ್ಟು ಸಜ್ಜನರನ್ನು ಕಟ್ಟಿಕೊಂಡು ಹೊಂಟಿದ್ದಾರೆ.

ಐದು ಕೋಟಿ ಕೊಟ್ಟು ಬಿಜೆಪಿ ಟಿಕೆಟ್ ದಿಸಿ ಮತ್ತೆ ಕೋಟಿಗಟ್ಟಲೇ ಸುರಿದು ಗೆಲ್ಲಲು ಸುತ್ತಿರುವ ಹೇಮಚಂದ್ರಸಾಗರ್ ಎಷ್ಟೆಂದರೂ ಲಿಗೆ ಹೊರಗಿನ ವ್ಯಕ್ತಿಯೇ. ಗೆಲ್ಲಿಸಿದ ತಪ್ಪಿಗೆ ನಿಜ ದುರ್ಬೀನು ಹಿಡಿದು ಹುಡುಕಾಡಬೇಕು. ಥ ದೇವಿಯೇ ವಾಸಿಯಲ್ಲವೇ?

ಇದು ಚಿಕ್ಕಪೇಟೆಯ ಮತದಾರರ ಸದ್ಯದ ಸ್ಥಿತಿ. ಯಡ್ಡಿಗೆ ಟಿಕೆಟ್ ಮಾರಿಕೊಂಡರೆ ಡುತ್ತದೆ ಎಂಬ ಪಾಠವನ್ನೂ ಚಿಕ್ಕಪೇಟೆಯ ಬಿಜೆಪಿಗೆ ಕಲಿಸಲಿದ್ದಾರೆ.

ಕರ್ನಾಟಕ ಗಡಿ ಬದಲಿಸಿದ ವಂಚಕ ರೆಡ್ಡಿ

ಬಿಜೆಪಿಯ ಗಣಿ ಧಣಿ ಜನಾರ್ದನ್ ರೆಡ್ಡಿ ಕರ್ನಾಟಕಕ್ಕೆ ಅನ್ಯಾಯ ಮಾಡಿದ್ದಾನೆ. ತನ್ನ ಲೋಭ-ಲಾಭಕ್ಕಾಗಿ ಬಳ್ಳಾರಿ ಜಿಲ್ಲೆಯ ಗಡಿ ಗ್ರಾಮಗಳಾದ ಹೊನ್ನಳ್ಳಿ, ಬೆಳಗಲ್, ತುಮಟಿ ಹಾಗೂ ವಿಠಲಾಪುರ ಗ್ರಾಮದ ಕೆಲ ಪ್ರದೇಶವು ನೆರೆಯ ಆಂಧ್ರ ಪ್ರದೇಶದ ರಾಯದುರ್ಗ ತಾಲ್ಲೂಕಿಗೆ ಸೇರಿದೆ ಎಂಬುದಾಗಿ ರಾಜ್ಯದ ಗಡಿರೇಖೆಯನ್ನೇ ಬದಲಿಸಲು ಹೊರಟಿದ್ದಾನೆ.

ಅಷ್ಟೇ ಅಲ್ಲ; ಈ ವಿವಾದಿತ ಅರಣ್ಯ ಪ್ರದೇಶದಲ್ಲಿ ನೆಡಲಾಗಿದ್ದ ಕರ್ನಾಟಕ-ಆಂಧ್ರದ ಗಡಿ ಕಲ್ಲುಗಳನ್ನೇ ಕಿತ್ತು ಸ್ಥಾನಬದಲು ಮಾಡಿದ್ದಾನೆ. ಇದರಿಂದ ಕರ್ನಾಟಕ ರಾಜ್ಯಕ್ಕೆ ಸೇರಿರುವ ನೂರಾರು ಎಕರೆ ಜಾಗ ಈಗ ಆಂಧ್ರಕ್ಕೆ ಸೇರಿದೆ ಎಂಬುದಾಗಿ ಬಿಂಬಿತವಾಗುತ್ತಿದೆ.

ಜನಾರ್ದನ್ ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪನಿಯ ಗಣಿಗಾರಿಕೆ ಚಟುವಟಿಕೆಗಳಿಂದ ನಡೆಯುತ್ತಿರುವ ವಂಚನೆ ಇದು.

ಈ ಜನಾರ್ದನ್ ರೆಡ್ಡಿ ಇವತ್ತು ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುತ್ತಿದ್ದಾನೆ.

ಇವನ ಬಂಟರು ಸಿ. ಚೆನ್ನಿಗಪ್ಪನನ್ನು ಬೆನ್ನಟ್ಟಿ 300 ಗಾಡಿಗಳಲ್ಲಿ ಮಧುಗಿರಿವರೆಗೂ ಬಂದು 'ಶೋ' ಕೊಟ್ಟು ಹೋಗಿದ್ದರು. ಅತ್ತ ಹರಪನಹಳ್ಳಿಯಲ್ಲೂ ಎಂ.ಪಿ. ಪ್ರಕಾಶ್ ವಿರುದ್ಧ ಗಾಲಿ ಕರುಣಾಕರ ರೆಡ್ಡಿಯನ್ನೇ ಕಣಕ್ಕಿಳಿಸಿದಾಗ. ಸಾವಿರಾರು ಜನರನ್ನು ದಂಡಯಾತ್ರೆಗೆ ಕರೆದೊಯ್ಯುಂತೆ ಹೋಗಿ ಧಮಕಿ ಹಾಕಿ ಬಂದಿದ್ದಾರೆ. ಇಂತಹ ಗೂಂಡಾಗಿರಿ, ಧನಮದಗಳ ರೆಡ್ಡಿಗಳು ತಮ್ಮ ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ಪ್ರತಿದಿನ ಎಷ್ಟು ಟನ್ ಅದಿರು ತೆಗೆದು ಸಾಗಿಸುತ್ತಿದ್ದಾರೆ ಗೊತ್ತೆ?

25-30 ಸಾವಿರ ಟನ್‌ಗಳು, ಅಂದರೆ ಹತ್ತಿರತ್ತಿರ ದಿನಕ್ಕೆ 6 ಕೋಟಿ ರೂಪಾಯಿಗಳ ಲಾಭದ ದಂಧೆ ಇದು.

ಕರ್ನಾಟಕದ ಬಳ್ಳಾರಿಯನ್ನೇ ತನ್ನ ಹೆಡ್ ಕ್ವಾರ್ಟರ್ಸ್ ಮಾಡಿಕೊಂಡಿರುವ ಜನಾರ್ದನ್ ರೆಡ್ಡಿ ಮೈನಿಂಗ್ ಮಾಡುತ್ತಿರುವುದೆಲ್ಲಾ ನೆರೆಯ ಆಂಧ್ರ ಬಾರ್ಡರಿನಲ್ಲಿ. ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪನಿಗೆ ಆಂಧ್ರ ಸರ್ಕಾರ ಲೀಸ್ ಆಧಾರದ ಮೇಲೆ 10.11.2005 ರಲ್ಲಿ 68-52 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡಿದೆ. ಆ ಆದೇಶದ ಪ್ರಕಾರ ಈ ರೆಡ್ಡಿ ಆಂಧ್ರದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿನ ಎಚ್. ಸಿದ್ಧಾಪುರ, ಓಬಳಾಪುರ, ಮಲಕನಗುಡಿ ಗ್ರಾಮಗಳಲ್ಲಿ ಗಣಿಗಾರಿಕೆ ನಡೆಸಬೇಕಿತ್ತು, ಈ ಲೀಸ್ ಪ್ರದೇಶವು ಬಳ್ಳಾರಿ ಜಿಲ್ಲೆಯ ಹಾಗೂ ಸಂಡೂರು ತಾಲ್ಲೂಕಿನ ಗಡಿಗೆ ಹೊಂದಿಕೊಂಡಿದೆ. ಬಹಳ ಮುಖ್ಯವಾಗಿ ರೆಡ್ಡಿಗೆ ಲೀಸ್ ಆಗಿರುವ ಈ ಪ್ರದೇಶಕ್ಕೆ ಅಂಟಿಕೊಂಡಂತಿರುವ ಹೊನ್ನಳ್ಳಿ, ಬೆಳಗಲ್, ತುಮಟಿ ಹಾಗೂ ವಿಠಲಾಪುರಗಳಲ್ಲಿ ಅಪಾರ ಪ್ರಮಾಣದ ಖನಿಜ ನಿಕ್ಷೇಪವಿದೆ. ಈ ನಾಲ್ಕು ಗ್ರಾಮಗಳು ಕರ್ನಾಟಕ ರಾಜ್ಯಕ್ಕೆ ಸೇರಿದವು ಗಳು. ಅಷ್ಟು ಮಾತ್ರವಲ್ಲ; ಈ ಪ್ರದೇಶದಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಸಲು ರಾಜ್ಯ ಸರ್ಕಾರವು Tumti Iron Ore Mines ಎಂಬ ಕಂಪನಿಗೆ ಗುತ್ತಿಗೆ ನೀಡಿದೆ.



ಗಡಿಗುರುತಿನ ಕಲ್ಲು

ಇದು ವಾಸ್ತವ ಪರಿಸ್ಥಿತಿ.

ಆದರೆ ಆಂಧ್ರ ಸರ್ಕಾರದಿಂದ ಲೀಸ್ ಪಡೆದಿರುವ ಜನಾರ್ದನ್ ರೆಡ್ಡಿ ಭೂಮಿ ಬಗೆಯುತ್ತಾ ಬಗೆಯುತ್ತಾ ಈಗ ಕರ್ನಾಟಕ ಗಡಿಯೊಳಕ್ಕೂ ಪ್ರವೇಶಿಸಿ ಅದಿರು ದೋಚುತ್ತಿದ್ದಾನೆ. ಅದು ತುಮಟಿ ಕಂಪನಿಗೆ ಲೀಸ್ ಆಗಿರುವ ಜಾಗ. ಮುಖ್ಯವಾಗಿ ಕರ್ನಾಟಕದ್ದು. ರೆಡ್ಡಿಯ ಅತಿಕ್ರಮ ಪ್ರವೇಶವನ್ನು ತುಮಟಿ ಕಂಪನಿಯ ದಿಗಂಬರಂ ವಿರೋಧಿಸಿ ಗಲಾಟೆ ಮಾಡಿದಾಗ ರೆಡ್ಡಿಯ ಗೂಂಡಾಗಳು ಬಂದು ಧಮಕಿ ಕೊಟ್ಟು ಹೋಗಿದ್ದಾರೆ. ಈ ಗಲಾಟೆ ವಿವಾದಗಳನ್ನೆಲ್ಲಾ ನೋಡಿದ ರೆಡ್ಡಿ ಕೊನೆಗೆ ಈ ತಾಪತ್ರಯಗಳೇ ಬೇಡವೆಂದು ಸೀದಾ ಜನ ಕರೆದುಕೊಂಡು ಹೋಗಿ ಈಗ ಆಂಧ್ರ-ಕರ್ನಾಟಕ ಗಡಿ ಗುರುತಿಟ್ಟಿದ್ದ ಕಲ್ಲುಗಳನ್ನೇ ಕಿತ್ತು ಕರ್ನಾಟಕದೊಳಕ್ಕೆ ಇನ್ನಷ್ಟು ದೂರ ನಡೆಸಿದ್ದಾನೆ. ಇದರಿಂದ ತುಮಟಿ ಪ್ರದೇಶದ ನೂರಾರು ಎಕರೆ ಜಾಗ ಈಗ ಆಂಧ್ರಕ್ಕೆ ಸೇರಿಕೊಂಡಂತಾಗಿ ಹೋಗಿದೆ. ಆಂಧ್ರದ ಗಡಿ ರೇಖೆ ಕರ್ನಾಟಕದೊಳಕ್ಕೆ ಒತ್ತರಿಸಿಕೊಂಡು ಬಂದಿದೆ.



> ● ಜುಜುಬಿ ಗಣಿ ಮಾಲೀಕ ಜನಾರ್ದನ ರೆಡ್ಡಿ ಈಗ ಕರ್ನಾಟಕದ ಗಡಿ ಯಾವುದೆಂದು ತಾನೇ ತೀರ್ಮಾನಿಸಿಬಿಟ್ಟಿದ್ದಾನೆ. ಇದರಿಂದ ಕರ್ನಾಟಕದ ನೂರಾರು ಕೋಟಿ ಅದಿರು ಸಂಪತ್ತು ಲೂಟಿಯಾಗುತ್ತಿದೆ. ●

ಇದೇ ಜನಾರ್ದನ್ ರೆಡ್ಡಿ ಈ ಗಡಿ ಪ್ರದೇಶದಲ್ಲಿದ್ದ ಪುರಾತನ ಸುಗ್ಗಲಮ್ಮ ದೇವಸ್ಥಾನವನ್ನು 2006 ರ ಸೆಪ್ಟೆಂಬರ್ ಮೊದಲ ವಾರದಲ್ಲಿ ಡೈನಾಮೆಟ್ ಇಡಿಸಿ ಉಡಾಯಿಸಿದ್ದ. ಇದನ್ನು ವಿರೋಧಿಸಿ ಆಂಧ್ರದ ರಾಯದುರ್ಗ ತೆಲುಗು ದೇಶಂ ಶಾಸಕ ಗೋವಿಂದ ರೆಡ್ಡಿ ಸ್ಥಳಕ್ಕೆ ಬಂದು ಪ್ರತಿಭಟಿಸಿದಾಗ ಬಂಧನ-ಕೇಸುಗಳೂ ಆಗಿವೆ. ಅದೇರೀತಿ ಬಕಾಸುರ ಜನಾರ್ದನ ರೆಡ್ಡಿ ವಿರುದ್ಧವೂ ಬಳ್ಳಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಹಳ ಮುಖ್ಯವಾಗಿ ಜನಾರ್ದನ್ ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪನಿಗೆ ಮಂಜೂರಾಗಿರುವ ಜಾಗವೂ ಈಗ ವಿವಾದಕ್ಕೊಳಗಾಗಿ ಆಂಧ್ರ ಹೈಕೋರ್ಟ್ ಮೆಟ್ಟಿಲೇರಿದೆ. ಈ ಜಾಗ 1951 ರಲ್ಲೇ ಟಪಾಲ್ ತಿಮ್ಮಪ್ಪ ಎಂಬುವರಿಗೆ 20 ವರ್ಷಗಳಿಗೆ ಲೀಸ್ ಆಗಿತ್ತು, ನಂತರ ರಿನೀವಲ್ ಮಾಡಿಕೊಳ್ಳಲು ಅವಕಾಶ ನಿರಾಕರಿಸಿ ಕೊನೆಗೆ 2004 ರಲ್ಲಿ ಅದೇ ಏರಿಯಾದ 231 ಎಕರೆ ಜಾಗ ರೆಡ್ಡಿಯ ಓಬಳಾಪುರಂ ಕಂಪನಿಗೆ ಲೀಸ್ ಆಗಿದೆ.

ಈ ಕೇಸಿನ ವಿಚಾರ ಒಂದೆಡೆ ಇರಲಿ. ಆದರೆ ಜನಾರ್ದನ್ ರೆಡ್ಡಿ ಕರ್ನಾಟಕ-ಆಂಧ್ರ ಗಡಿ ಪ್ರದೇಶದಲ್ಲಿರುವ ಕರ್ನಾಟಕಕ್ಕೇ ಸೇರಿರುವ ಹೊನ್ನಳ್ಳಿ, ಬೆಳಗಲ್, ತುಮಟಿ ಹಾಗೂ ವಿಠಲಾಪುರ ಗ್ರಾಮಗಳ ನೂರಾರು ಎಕರೆ ವಿಸ್ತೀರ್ಣದ ಜಾಗವನ್ನು ಒತ್ತರಿಸಿ ಗಣಿಗಾರಿಕೆ ನಡೆಸುತ್ತಿದ್ದಾನೆ.


ಅವನಿಗೆ ಲೀಸ್ ನೀಡಿರುವುದು ಆಂಧ್ರ ಸರ್ಕಾರ ಹಾಗೂ ರೆಡ್ಡಿ ಗಣಿ ಕೆಲಸ ಮಾಡಬೇಕಾಗಿರುವುದು ಆಂಧ್ರದ ಪ್ರದೇಶದಲ್ಲಿ ಮಾತ್ರ.

ವಸ್ತುಸ್ಥಿತಿ ಹೀಗಿದ್ದಾಗಲೂ ಜನಾರ್ದನ್ ರೆಡ್ಡಿ ರೆವಿನ್ಯೂ ದಾಖಲೆಗಳನ್ನೇ ತಿದ್ದಿ, ಗಡಿ ನಕ್ಷೆಗಳನ್ನೇ ಬದಲಿಸಿ ಕರ್ನಾಟಕಕ್ಕೆ ಸೇರಿರುವ ಭಾಗಗಳನ್ನು ಈಗ ಆಂಧ್ರದ ಆಸ್ತಿ ಎಂಬಂತೆ ತಿರುಚಿಬಿಟ್ಟಿದ್ದಾನೆ.

ಈ ಭಾಗದ ಗಡಿ ಯಾವುದೆಂಬ ಬಗ್ಗೆ ವಿವಾದವಿದ್ದು ಅದಿನ್ನು ಬಗೆಹರಿಯಬೇಕಾಗಿದೆ. ಎರಡೂ ರಾಜ್ಯ ಸರ್ಕಾರಗಳು ಕಂದಾಯ-ಅರಣ್ಯಾಧಿಕಾರಿಗಳು ಹಾಗೂ ಕೇಂದ್ರ ಸರ್ಕಾರ ಕೂತು ಬಗೆಹರಿಸಬೇಕಾದ ವಿಚಾರ ಇದು.



ಕಣ್ಮರೆಯಾದ ಗಡಿಕಲ್ಲು



ಬದಲಾಗಿರುವ ಗಡಿ ನಕ್ಷೆ

ಆದರೆ ಜುಜುಬಿ ಗಣಿ ಮಾಲೀಕ ಜನಾರ್ದನ ರೆಡ್ಡಿ ಈಗ ಕರ್ನಾಟಕದ ಗಡಿ ಯಾವುದೆಂದು ತಾನೇ ತೀರ್ಮಾನಿಸಿಬಿಟ್ಟಿದ್ದಾನೆ. ಇದರಿಂದ ಕರ್ನಾಟಕದ ನೂರಾರು ಕೋಟಿ ಅದಿರು ಸಂಪತ್ತು ಲೂಟಿಯಾಗುತ್ತಿದೆ. ಅಷ್ಟು ಮಾತ್ರವಲ್ಲ, ಜನಾರ್ದನ್ ರೆಡ್ಡಿ ಕರ್ನಾಟಕದ ಭೂಭಾಗವನ್ನೇ ಆಂಧ್ರಕ್ಕೆ ಸೇರಿಸಿಬಿಟ್ಟಿದ್ದಾನೆ.

ರಾಜ್ಯ ಬಿಜೆಪಿಗಳು ಈ ಬಗ್ಗೆ ಚಕಾರ ಎತ್ತುತ್ತಿಲ್ಲ ಯಾಕೆ?

■ ಬಿಳಿದಾಳೆ ಪಾರ್ವತೀಶ



ಶ್ರೀರಾಮುಲುನ ಗೂಂಡಾಗಿರಿ

ಕಳೆದ ಸೆಪ್ಟೆಂಬರ್ ಮೊದಲನೇ ವಾರದಲ್ಲಿ ಆಗ ಸಚಿವನಾಗಿದ್ದ ಶ್ರೀರಾಮುಲು ಬಳ್ಳಾರಿ ಅರಣ್ಯಾಧಿಕಾರಿ ಡಾ. ರಾಜಶೇಖರ ಆಫೀಸಿಗೇ ನುಗ್ಗಿ ಕಟ್ಟಾ ರೋಫ್ ಹಾಕುತ್ತಿದ್ದ ದೃಶ್ಯಗಳು ಟಿವಿ ನ್ಯೂಸ್‌ಗಳಲ್ಲಿ ಬಂತಲ್ಲ,

ಅದು ಇದೇ ಗಡಿ ವಿಚಾರಕ್ಕೆ ಸಂಬಂಧಿಸಿತ್ತು.

ಜನಾರ್ದನ್ ರೆಡ್ಡಿ ಕರ್ನಾಟಕ ಗಡಿ ಬದಲಿಸಿದ್ದಾನೆಂದು ತುಮಟಿ ಕಂಪನಿಯ ದಿಗಂಬರಂ ಬಳ್ಳಾರಿ ಡಿಸಿಎಫ್‌ಗೆ ದಾಖಲೆ ಸಹಿತ ದೂರು ನೀಡಿದ್ದರು. ಆಗ ಡಾ. ರಾಜಶೇಖರ್ ಸ್ಥಳ ಪರಿಶೀಲನೆಗೆಂದು ಈ ವಿವಾದಿತ ಗಡಿ ಪ್ರದೇಶಕ್ಕೆ ಭೇಟಿ ನೀಡಿದ್ದರು. ಜೊತೆಗೆ ನಿಖರ ಗಡಿ ತೀರ್ಮಾನಿಸಲು ಎರಡೂ ರಾಜ್ಯಗಳ ಅಧಿಕಾರಿಗಳ ಸಭೆ ನಡೆಯಬೇಕೆಂದು ಪತ್ರಗಳನ್ನು ಬರೆದಿದ್ದರು. ಇದರಿಂದ ತಮ್ಮ ವಂಚನೆ ಎಲ್ಲಿ ಹೊರಬೀಳುತ್ತದೊ ಎಂದು ಹೆದರಿದ ರೆಡ್ಡಿ ಗ್ಯಾಂಗ್ ರಾಮುಲುವನ್ನು ಛೂಬಿಟ್ಟು ರಾಜಶೇಖರ್‌ಗೆ ಧಮಕಿ ಹಾಕಿಸಿತ್ತು.

ಈಗಲೂ ಈ ಗಡಿ ಯಾವುದೆಂಬ ವಿಚಾರ ಬಗೆಹರಿದಿಲ್ಲ. ಕರ್ನಾಟಕ ಸರ್ಕಾರ ಇದನ್ನು ನಿರ್ಲಕ್ಷಿಸದೆ ಜನಾರ್ದನ ರೆಡ್ಡಿ ರಾಜ್ಯದ ಭೂಭಾಗವನ್ನು ಆಂಧ್ರದ್ದೆಂದು ಹಕ್ಕು ಪ್ರತಿಪಾದಿಸುತ್ತಿರುವ ಹುನ್ನಾರಕ್ಕೆ ತಡೆಯೊಡ್ಡಬೇಕಿದೆ.

ಇದು ಕನ್ನಡ ಸಂಘಟನೆಗಳ ಜವಾಬ್ದಾರಿಯೂ ಹೌದು.

ಯಡ್ಡಿ ಸ್ಥಳ ಪರಿಶೀಲನೆ ಮಾಡಲಿ

[illegible]

ದಾವಣಗೆರೆ ಜಿಲ್ಲೆ: 'ಕೈ' ಎತ್ತಲಿರುವ ಕಾಂಗ್ರೆಸ್


ಚುನಾವಣೆ 2008

ದಾವಣಗೆರೆ ಜಿಲ್ಲೆಯೀಗ ಕ್ಷೇತ್ರ ಪುನರ್‌ವಿಂಗಡಣೆಯ ನಂತರ ಎಂಟು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಈ ಹಿಂದೆ ಏಳು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದ್ದ ಈ ಜಿಲ್ಲೆಯಿಂದ ಮೂವರು ಕಾಂಗ್ರೆಸ್ ಅಭ್ಯರ್ಥಿಗಳು, ಮೂವರು ಬಿಜೆಪಿ ಅಭ್ಯರ್ಥಿಗಳು ಮತ್ತು ಒಬ್ಬ ಜನತಾದಳದ ಅಭ್ಯರ್ಥಿ ಶಾಸಕರಾಗಿ ಆಯ್ಕೆಯಾಗಿದ್ದರು. ಚುನಾವಣಾ ನೀತಿ ಸಂಹಿತೆಯ ಕಟ್ಟುನಿಟ್ಟಿನ ಜಾರಿಯಿಂದಾಗಿ ಮೇಲ್ನೋಟಕ್ಕೆ ಬಹಳ ಶಾಂತರೀತಿಯಿಂದ ಮತ್ತು ನೀರಸವಾಗಿ ಚುನಾವಣಾ ಪ್ರಚಾರ ನಡೆಯುತ್ತಿದೆ ಎಂದು ಕಾಣಿಸಿದರೂ ರಂಗೋಲಿಯಡಿ 'ಹಂಚಿಕೆ' ನಡೆದೇ ಇದೆ.

ಚಂದ್ರಶೇಖರ್ ತೋರಣಘಟ್ಟ


ಚನ್ನಗಿರಿ

ಈ ಕ್ಷೇತ್ರದಲ್ಲಿ ಒಟ್ಟು 1,54,450 ಮತದಾರರಿದ್ದಾರೆ. ಒಂದು ಅಂದಾಜಿನ ಪ್ರಕಾರ ಎಲ್ಲ ಪಂಗಡದ ಲಿಂಗಾಯತ ಜನಾಂಗದ ಮತದಾರರ ಸಂಖ್ಯೆಯೇ 58 ಸಾವಿರ ಇದ್ದು ಇವರಲ್ಲಿ 35 ಸಾವಿರ ಸಾದ ಲಿಂಗಾಯತರು ಮತ್ತು 10-12 ಸಾವಿರ ಬಣಜಿಗ ಲಿಂಗಾಯತರಿದ್ದಾರೆ. ಈ ಕ್ಷೇತ್ರದಲ್ಲಿ 22 ಸಾವಿರ ಮುಸ್ಲಿಂ ಮತದಾರರು, 18 ಸಾವಿರ ನಾಯಕ ಸಮುದಾಯದವರು ಮತ್ತು ಇತರೆ ಪರಿಶಿಷ್ಟ ಜನಾಂಗದವರು ಸೇರಿ 30 ಸಾವಿರ ಮತದಾರರಿದ್ದಾರೆ.


ಮಹಿಮಾ ಪಟೇಲ್

ಕಾಂಗ್ರೆಸ್‌ನಿಂದ ವಡ್ನಾಳ್ ರಾಜಣ್ಣ, ಬಿಜೆಪಿಯಿಂದ ಮಾಡಾಳು ವಿರುಪಾಕ್ಷಪ್ಪ, ಜೆಡಿಎಸ್‌ನಿಂದ ಹೊದಿಗೆರೆ ರಮೇಶ್, ಸುವರ್ಣಯುಗ ಪಕ್ಷದಿಂದ ಜೆ.ಹೆಚ್.ಪಟೇಲ್‌ರ ಪುತ್ರ ಮಹಿಮಾ ಪಟೇಲ್ ಸ್ಪರ್ಧಿಸಿದ್ದಾರೆ. ವಡ್ನಾಳ್ ರಾಜಣ್ಣ ಮತ್ತು ಮಾಡಾಳು ವಿರುಪಾಕ್ಷಪ್ಪ, ಇವರಿಬ್ಬರೂ ಸಾದ ಲಿಂಗಾಯತರಾಗಿರುವುದರಿಂದ ಈ ಜನಾಂಗದ ಓಟುಗಳು ಛಿದ್ರಗೊಳ್ಳಲಿವೆ. ಸ್ಪರ್ಧೆಯಲ್ಲಿರುವ ನಾಲ್ಕು ಮಂದಿಯೂ ಕನಿಷ್ಠ 20 ಸಾವಿರ ಮತಗಳನ್ನು ಪಡೆಯುವ ನಿರೀಕ್ಷೆಯಿದ್ದು ಬಹಳ ಕಡಿಮೆ ಅಂತರದಲ್ಲಿ ಇವರಲ್ಲಿ ಯಾರಾದರೊಬ್ಬರು ಗೆಲ್ಲಬಹುದು. ಕಾಂಗ್ರೆಸ್ ಪಕ್ಷವು ಜಿಲ್ಲೆಯಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡದಿರುವುದರಿಂದ ಜಿಲ್ಲೆಯ ಎಲ್ಲ ಕ್ಷೇತ್ರಗಳಲ್ಲಿನ ಹಾಗೆ ಚನ್ನಗಿರಿ ಕ್ಷೇತ್ರದಲ್ಲೂ ಮುಸ್ಲಿಂ ಮತದಾರರು ಕಾಂಗ್ರೆಸ್ ವಿರೋಧಿ ನಿಲುವು ತೆಗೆದುಕೊಳ್ಳುವ ಸಾಧ್ಯತೆ ಇದೆ. ಬಿಜೆಪಿಗೆ ಇಲ್ಲಿ ಗೆಲುವಿನ ಸಾಧ್ಯತೆಗಳಿಲ್ಲ, ಕಾಂಗ್ರೆಸ್ ಅಥವಾ ಜೆಡಿಎಸ್ ಪಕ್ಷಗಳ ಅಭ್ಯರ್ಥಿಗಳಲ್ಲಿ ಒಬ್ಬರು ಗೆಲ್ಲಬಹುದು. ಕಲ್ಕಿ ಭಗವಾನನ ಪವಾಡವೇನಾದರೂ ನಡೆದರೆ ಕಲ್ಕಿಯ ಪರಮಭಕ್ತ ಮಹಿಮಾ ಪಾಟೀಲ್ ಗೆಲ್ಲಬಹುದೇನೋ? ಆದರೆ ಈತ ಪ್ರಚಾರಕ್ಕೂ ಹೋಗದೆ, ಜನಸಾಮಾನ್ಯರೊಂದಿಗೆ ಬೆರೆತು ಅವರ ಸಮಸ್ಯೆಗಳಿಗೆ ಸ್ಪಂದಿಸದೆ ಮೇ 28ರವರೆಗೆ ಉಪವಾಸ ಕೂರುತ್ತೇನೆಂದು ಸೂಳೆಕೆರೆ ಗುಡ್ಡದ ಮೇಲೆ ಪಾನಕ ಕುಡಿಯುತ್ತಾ ಕುಂತುಬಿಟ್ಟಿದ್ದಾರೆ. ವಾಸ್ತವವಾಗಿ ಏನೆಲ್ಲಿ ಕಸರತ್ತುಗಳನ್ನು ಮಾಡಿದರೂ ಗೆಲ್ಲುವುದು ಕಷ್ಟವಾಗುತ್ತಿರುವಾಗ ವಾಸ್ತವ ಸಮಸ್ಯೆಗಳಿಂದಲೇ ದೂರವಾಗಿ ಅವಾಸ್ತವ ಬೆನ್ನು ಹತ್ತಿರುವ ಮಹಿಮಾ ಗೆಲ್ಲುವ ಸಾಧ್ಯತೆ ಬಹಳ ಕಡಿಮೆ ಇದೆ.

ಹರಪನಹಳ್ಳಿ



ಎಂ.ಪಿ. ಪ್ರಕಾಶ್

ಈ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ಪ್ರಬಲ ಸ್ಪರ್ಧೆ ಏರ್ಪಟ್ಟಿದೆ. ಕಾಂಗ್ರೆಸ್ ಪಕ್ಷದಿಂದ ಮಾಜಿ ಉಪ ಮುಖ್ಯಮಂತ್ರಿ ಎಂ.ಪಿ. ಪ್ರಕಾಶ್, ಬಿಜೆಪಿಯಿಂದ ಗಣಿಧಣಿ ಕರುಣಾಕರ ರೆಡ್ಡಿ ಸ್ಪರ್ಧೆಗಿಳಿದಿದ್ದಾರೆ. ಈ ಕ್ಷೇತ್ರದ ಮತದಾರರು ಮಾತ್ರ ಈ ಇಬ್ಬರೂ ಸ್ಥಳೀಯರಲ್ಲ ಎಂದು ಗುಮಾನಿಯಿಂದ ನೋಡುತ್ತಿದ್ದಾರೆ.

ಗಣಿಹಣದ ಮತ್ತಿನಲ್ಲಿರುವ ಕರುಣಾಕರರೆಡ್ಡಿಯ ಕಡೆಯವರು ಪಕ್ಷದ ಬಾವುಟ, ಬ್ಯಾನರುಗಳಿಲ್ಲದ ಹಿಂದು ಹಿಂದು ವಾಹನಗಳಲ್ಲಿ ಓಡಾಡುತ್ತಾ ವಿವಿಧ ಜನಾಂಗದ ನಾಯಕರ ಹಾಗೂ ಸಂಘಟನೆಗಳ ಖರೀದಿಗೆ ನಿಂತಿದ್ದಾರೆ. ಇದುವರೆಗೂ ದಲಿತ ಸಂಘಟನೆಗಳೊಂದಿಗೆ ಗುರುತಿಸಿಕೊಂಡಿದ್ದ ಹಲವರನ್ನು ಈಗಾಗಲೇ ಕರುಣಾಕರರೆಡ್ಡಿ ತನ್ನ ಬುಟ್ಟಿಯಲ್ಲಿ ಕೆಡವಿಕೊಂಡಿದ್ದಾನೆ. ಪಂಚಮಸಾಲಿ ಜನಾಂಗದ ನಾಯಕರೆಂದು ಘೋಷಿಸಿಕೊಂಡಿರುವ ಬಾವಿ ಬೆಟ್ಟಪ್ಪ ಮತ್ತು ನಂದಿಹಳ್ಳಿ ಹಾಲಪ್ಪ ಎಂಬಿಬ್ಬರು ಕರುಣಾಕರ ರೆಡ್ಡಿಯ ಹಣದ ಥೈಲಿಗೆ ಜೋತುಬಿದ್ದಿದ್ದಾರೆ. ಈ ಕ್ಷೇತ್ರದ ಚಿಗಟೇರಿ ಹೋಬಳಿಯ 42 ಸ್ವಸಹಾಯ ಸಂಘಗಳಿಗೂ ತಲಾ 50 ಸಾವಿರ ರೂ.ಗಳನ್ನು ಕರುಣಾಕರ ರೆಡ್ಡಿ ಹಂಚಿದ್ದಾನೆಂಬ ವದಂತಿಗಳು ಸಂಪೂರ್ಣ ಸುಳ್ಳೇನಲ್ಲ.


ಕರುಣಾಕರ ರೆಡ್ಡಿ ನಂಬಿಕೊಂಡಿರುವುದು ಖರೀದಿಯನ್ನು ಮಾತ್ರ! ಮತದಾರರನ್ನೊಳಗೊಂಡು ಎಲ್ಲವನ್ನೂ ಖರೀದಿಸಬಲ್ಲನೆಂದು ಈತ ಅಂದುಕೊಂಡಿದ್ದಾನೆ. ಆದರೆ ಇವನ ಮತ್ತು ಇವನ ಬೆಂಬಲಿಗರ ಹಣದ ಆರ್ಭಟದಿಂದಲೇ ಈ ಕ್ಷೇತ್ರದ ಮತದಾರರು ಬೆದರಿಹೋದಂತಿದೆ.

ಮಾಜಿ ಉಪ ಮುಖ್ಯಮಂತ್ರಿ ಎಂ.ಪಿ. ಪ್ರಕಾಶ್ ತಮ್ಮ ಪರವಾದ ಪ್ರಚಾರಕ್ಕೆ ಹೂವಿನಹಡಗಲಿಯ ತನ್ನ ಬೆಂಬಲಿಗರನ್ನೆ ಅವಲಂಬಿಸುತ್ತಿದ್ದಾರೆ. ಈ ಹಿಂದೆ ಎರಡು ಬಾರಿ ಹರಪನಹಳ್ಳಿ ಕ್ಷೇತ್ರದಿಂದ ಗೆದ್ದುಬಂದಿದ್ದ ಪಿ.ಟಿ. ಪರಮೇಶ್ವರ ನಾಯ್ಕ ತನ್ನ ಕುಯುಕ್ತಿಗಳನ್ನು ಬಿಟ್ಟು ಪ್ರಾಮಾಣಿಕವಾಗಿ ಎಂ.ಪಿ. ಪ್ರಕಾಶ್‌ಗೆ ಸಹಕರಿಸಿದರೆ ಬಣಜಿಗರ ಜನಾಂಗದ ಬಹಳಷ್ಟು ಮತಗಳು ಎಂ.ಪಿ.ಪ್ರಕಾಶ್‌ರ ಪಾಲಾಗುತ್ತವೆ. ಇತ್ತೀಚೆಗೆ ಎಂ.ಪಿ. ಪ್ರಕಾಶ್ ಕೊಮಾರನಹಳ್ಳಿ ತಾಂಡದ ಹತ್ತಿರ ಅಡವಿಯಲ್ಲಿರುವ ಬೆಟ್ಟದ ಮಲ್ಲೇಶ್ವರ ದೇವಸ್ಥಾನದಲ್ಲಿ ಪಂಚಮಸಾಲಿ ಜನಾಂಗದವರ ಸಭೆ ನಡೆಸಿ ಅವರನ್ನು ತಮ್ಮ ಪರವಾಗಿರಲು ವಿನಂತಿಸಿಕೊಂಡಿದ್ದಾರೆ. ಇದಕ್ಕೆ ಪಂಚಮಸಾಲಿ ಜನಾಂಗದವರು ಸಮ್ಮತಿಸಿದ್ದಾರೆ. ಬಿಜೆಪಿಯ ಕರುಣಾಕರ ರೆಡ್ಡಿಗೆ ಹೋಲಿಸಿದರೆ ಬಹಳಷ್ಟು ಸಭ್ಯತೆ ಮತ್ತು ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಎಂ.ಪಿ.ಪ್ರಕಾಶ್‌ರವರು ಜನಸಾಮಾನ್ಯರೊಂದಿಗೆ ಬೆರೆತು ಹೇಳಿದ ಹಾಗೂ ನೀಡಿದ ಆಶ್ವಾಸನೆಗಳನ್ನು ಈಡೇರಿಸುವ ಗಟ್ಟಿ ಭರವಸೆಯನ್ನು ನೀಡಿದರೆ ಹರಪನಹಳ್ಳಿಯ ಜನ ಪ್ರಕಾಶ್‌ರನ್ನು ಖಂಡಿತ ತಿರಸ್ಕರಿಸುವುದಿಲ್ಲ.


ಕರುಣಾಕರ ರೆಡ್ಡಿ

ಸಿಪಿಐ ಪಕ್ಷದಿಂದ ಸ್ಪರ್ಧಿಸಿರುವ ಹೊಸಳ್ಳಿ ಮಲ್ಲೇಶ್ ಹದಿನೈದಿಪ್ಪತ್ತು ವರ್ಷಗಳಿಂದ ಜನರ ಮಧ್ಯೆ ಇದ್ದು ಕೆಲಸ ಮಾಡಿದವರಾದ್ದರಿಂದ ಕೆಲವು ಸಾವಿರ ಮತಗಳನ್ನು ಪಡೆಯಬಹುದು. ಈ ಹಿಂದಿನಿಂದಲೂ ಜನತಾದಳದಲ್ಲಿದ್ದು ಈಗ ಕೂಡ ಜನತಾದಳದಿಂದಲೆ ಸ್ಪರ್ಧಿಸಿರುವ ರಾಮನಗೌಡರು ಸಹ ಸಾಕಷ್ಟು ಮತಗಳನ್ನು ಪಡೆಯಬಹುದು. ಆದರೆ ಇವರಿಬ್ಬರು ಗೆಲ್ಲುವ ಅಭ್ಯರ್ಥಿಗಳೇನಲ್ಲ.

ಹರಿಹರ



ಕಾಂಗ್ರೆಸ್ ಪಕ್ಷದಿಂದ ವೈ.ನಾಗಪ್ಪ ಜೆಡಿಎಸ್‌ನಿಂದ ತೇಜಸ್ವಿ ಪಟೇಲ್ ಸ್ಪರ್ಧಿಸಿದ್ದಾರೆ. ಈ ಕ್ಷೇತ್ರದಲ್ಲಿ ಮಾಜಿ ಮಂತ್ರಿಗಳಾದ ವೈ. ನಾಗಪ್ಪ ಎಚ್.ಶಿವಪ್ಪ ಮತ್ತು ಬಿಜೆಪಿ ಪಕ್ಷದ ಅಭ್ಯರ್ಥಿ ಹರೀಶ್ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಹರಿಹರ ಕ್ಷೇತ್ರದಲ್ಲಿ ಕುರುಬರು ಮತ್ತು ಮುಸ್ಲಿಂ ಮತಗಳೇ ನಿರ್ಣಾಯಕವಾಗಿರುವುದರಿಂದ ಈ ಎರಡು ಜನಾಂಗದ ಮತದಾರರು ಯಾರಿಗೆ ಒಲಿಯುತ್ತಾರೊ ಅವರ ಗೆಲುವು ಗ್ಯಾರಂಟಿ. ಸತತವಾಗಿ ಮೂರು ಬಾರಿ ಗೆದ್ದು ಬಂದಿರುವ ಕಾಂಗ್ರೆಸ್ ಪಕ್ಷದ ವೈ. ನಾಗಪ್ಪ ವ್ಯಕ್ತಿಗತವಾಗಿ ಒಳ್ಳೆಯ ವ್ಯಕ್ತಿಯಾಗಿರುವುದರಿಂದ ಮುಸ್ಲಿಂ ಮತದಾರರು ಇವರಿಗೆ ಸಹಕರಿಸಿದರೆ ಇವರ ಕೈ ಮೇಲಾಗಲಿದೆ.


ಹೊನ್ನಾಳಿ

ಮಾಜಿ ಶಾಸಕ ರೇಣುಕಾಚಾರ್ಯನ ಹಲವಾರು ಹಗರಣಗಳಿಂದ ಪ್ರಸಿದ್ಧಿ ಪಡೆದ ಕ್ಷೇತ್ರ ಹೊನ್ನಾಳಿ. ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ನೇರ ಸ್ಪರ್ಧೆ ಇಲ್ಲಿ ನಡೆಯುತ್ತದೆ. 40-45 ಸಾವಿರ ಸಾಧು ಲಿಂಗಾಯತರ ಮತಗಳು, 38-40 ಸಾವಿರ ಕುರುಬರ ಮತಗಳು ಸ್ಪರ್ಧಿಗಳ ಗೆಲುವನ್ನು ನಿರ್ಣಯಿಸಲಿವೆ.

ನರ್ಸ್ ಜಯಲಕ್ಷ್ಮಿಯೊಂದಿಗಿನ ರೇಣುಕಾಚಾರ್ಯನ ಹಗರಣ, ಇತ್ತೀಚೆಗೆ ಕುರುಬ ಸಮಾಜದ ಧಾರ್ಮಿಕ ಭಾವನೆಗಳನ್ನು ಕೆಣಕಲು ಹೋಗಿ ಈತ ಒದೆ ತಿಂದದ್ದು, ತೀರಾ ಇತ್ತೀಚೆಗೆ ಸೀರೆ ಹಂಚಲು ಹೋಗಿ ಸಿಕ್ಕಿಹಾಕಿಕೊಂಡದ್ದು – ಇವೆಲ್ಲವೂ ಮತದಾರರು ಈತನನ್ನು ಬಫೂನ್ ರೀತಿಯಲ್ಲಿ ನೋಡುವುದಕ್ಕೆ ಕಾರಣವಾಗಿವೆ. ಅಲ್ಲದೆ ಈತನ ಬೇಕಾಬಿಟ್ಟಿ ವರ್ತನೆಗಳಿಂದಾಗಿ ಬಿಜೆಪಿಯಲ್ಲಿ ಕೆಲಸ ಮಾಡುತ್ತಿದ್ದ ಬಹಳಷ್ಟು ಮಂದಿ ಕಾರ್ಯಕರ್ತರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷವನ್ನು ಸೇರಿಕೊಂಡಿರುವುದೂ ಅವನಿಗೆ ನೆಗೆಟಿವ್ ಪಾಯಿಂಟ್ ಆಗಲಿದೆ.

ಕುರುಬ ಜನಾಂಗದ ನಾಯಕರೆನಿಸಿಕೊಂಡಿರುವ ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಎಚ್.ಬಿ. ಮಂಜಪ್ಪ ಈ ಜನಾಂಗದ ಮತಗಳನ್ನು ಕಾಂಗ್ರೆಸ್ ಪಕ್ಷಕ್ಕೆ ಸೆಳೆಯುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿರುವ ಶಾಂತನಗೌಡ ಸಾದ ಲಿಂಗಾಯತನಾಗಿದ್ದು ಈ ಸಮಾಜದ ಬಹುತೇಕ ಮತಗಳನ್ನು ತಮ್ಮ ಕಡೆ ಸೆಳೆಯುವ ಸಾಧ್ಯತೆ ಇದೆ.

ರೇಣುಕಾಚಾರ್ಯ ಕೆಲವೇ ಸಾವಿರದಷ್ಟು ಸ್ವಜಾತಿ ಮತಗಳನ್ನು ಹೊಂದಿದ್ದರೂ ಈ ಹಿಂದೆ ಆತ ಗೆದ್ದಿದ್ದು ಬಿಜೆಪಿ ಅಲೆ ಇದ್ದುದ್ದರಿಂದ ಮತ್ತು ಮಾಜಿ ಶಾಸಕ ಶಾಂತನಗೌಡನ ಹೊಣೆಗೇಡಿತನಗಳಿಂದ ಮಾತ್ರ. ಆದರೆ ಈಗ ಇಲ್ಲಿ ಬಿಜೆಪಿ ಅಲೆಯೂ ಇಲ್ಲ, ರೇಣುಕಾಚಾರ್ಯ ಕನಿಷ್ಠ ಮರ್ಯಾದೆಯನ್ನೂ ಉಳಿಸಿಕೊಂಡಿಲ್ಲ, ಹೀಗಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದು ಬರುವ ಸಾಧ್ಯತೆಗಳು ಹೆಚ್ಚಾಗಿವೆ. ಶಾಂತನಗೌಡರಿಗೆ ಟಿಕೆಟ್ ನೀಡದೆ ಹೆಚ್.ಬಿ. ಮಂಜಪ್ಪನವರಿಗೇನಾದರೂ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದ್ದರೆ ಗೆಲುವಿನ ಸಾಧ್ಯತೆಗಳು ಇನ್ನೂ ಹೆಚ್ಚಿರುತ್ತಿದ್ದವು.


ನರ್ಸ್ ರೇಣುಕಾಚಾರ್ಯ

ಜಗಳೂರು: ಮಾಜಿ ಮಂತ್ರಿ ಜೆ.ಹೆಚ್. ಅಶ್ವತ್ಥರೆಡ್ಡಿ ದಶಕಗಳ ಕಾಲ ಆಳಿದ ವಿಧಾನಸಭಾ ಕ್ಷೇತ್ರ ಇದು. ಅಂದಂಡಿ ಮಂಚವಾಡು ಆಗಿದ್ದ ಈತ ಈ ಕ್ಷೇತ್ರದ ಅಭಿವೃದ್ಧಿಗೆ ಮಾತ್ರ ಹೆಚ್ಚಿನ ಒತ್ತು ನೀಡಲಿಲ್ಲ, ಜೊತೆಗೆ ಜನರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ, ನಂತರ ಶಾಸಕರಾಗಿ ಆಯ್ಕೆಯಾದ ಬಸಪ್ಪನಾಗಲಿ, ಈ ಹಿಂದೆ ಶಾಸಕನಾಗಿದ್ದ ಬಿಜೆಪಿಯ ಗುರುಸಿದ್ದಪ್ಪನಗೌಡನಾಗಲೀ ಈ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿರಲಿಲ್ಲ, ಆ ಕಾರಣದಿಂದ ಜಗಳೂರು ಕ್ಷೇತ್ರ ಭೀಕರ ಬರ ಮತ್ತು ಸೌಲಭ್ಯಗಳ ಅಭಾವವನ್ನು ಎದುರಿಸುತ್ತಿದೆ.

1 ಲಕ್ಷ 60 ಸಾವಿರದಷ್ಟು ಮತದಾರರನ್ನು ಹೊಂದಿರುವ ಈ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಎಸ್.ವಿ. ರಾಮಚಂದ್ರ, ಬಿಜೆಪಿಯ ರಾಜೇಶ್, ಬಿಜೆಪಿ ಪಕ್ಷದ ಭಿನ್ನಮತೀಯನಾಗಿ ಮಾಜಿ ಶಾಸಕ ಬಸಪ್ಪನವರ ಅಳಿಯ ವಿಶ್ವನಾಥ್ ಸ್ಪರ್ಧಿಸುತ್ತಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ತೀವ್ರ ಸ್ಪರ್ಧೆ ಏರ್ಪಡುವ ಎಲ್ಲಾ ಸಾಧ್ಯತೆಗಳೂ ಇಲ್ಲಿವೆ. ಎಸ್.ವಿ. ರಾಮಚಂದ್ರ ಮತ್ತು ವಿಶ್ವನಾಥ್ ರಾಜಕೀಯದಲ್ಲಿ ಪಳಗಿದವರಾಗಿದ್ದರೆ, ಬಿಜೆಪಿಯಿಂದ ಸ್ಪರ್ಧಿಸಿರುವ ರಾಜೇಶ್ ಈಗಷ್ಟೇ ತನ್ನ ಸರ್ಕಾರಿ ನೌಕರರಿಗೆ ಇತಿಶ್ರೀ ಹಾಕಿ ಬಂದಿರುವ ಎಳಸು. 25-30 ಸಾವಿರ ಸಾದ ಲಿಂಗಾಯತರ ಮತಗಳು, 30 ಸಾವಿರ ನಾಯಕ (ಬೇಡ) ಮತಗಳು, 16 ಸಾವಿರ ಗೊಲ್ಲರ ಮತಗಳು ಈ ಕ್ಷೇತ್ರದ ಅಭ್ಯರ್ಥಿಯ ಗೆಲುವನ್ನು ನಿರ್ಧರಿಸಲಿವೆ.


ಬಿಜೆಪಿಯ ಅಭ್ಯರ್ಥಿ ರಾಜೇಶ್ ಅರಣ್ಯ ಇಲಾಖೆಯಲ್ಲಿ ಡಿಎಫ್‌ಒ ಆಗಿರುವ ತನ್ನ ಮಾವ ಮುತ್ತಯ್ಯನ ಹಣದಿಂದಲೇ ಚುನಾವಣೆ ನಡೆಸುವಷ್ಟು ಶಕ್ತಿ ಹೊಂದಿದ್ದಾನೆ. ಆದರೆ ಈ ಕ್ಷೇತ್ರದ ಜನತೆಗೆ ಈತನ ಮುಖಪರಿಚಯವೇ ಇಲ್ಲದಿರುವುದು ಈತನ ಹಿನ್ನಡೆಗೆ ಕಾರಣವಾಗಿದೆ. ಕಾಂಗ್ರೆಸ್‌ನ ಎಸ್.ವಿ. ರಾಮಚಂದ್ರ ಒಳ್ಳೆಯ ವ್ಯಕ್ತಿಯಾಗಿದ್ದು 15 ವರ್ಷಗಳಿಂದ ಈ ಕ್ಷೇತ್ರದಲ್ಲಿ ತಿರುಗಿದ್ದಾರೆ. ಬಿಜೆಪಿ ಭಿನ್ನಮತೀಯ ಅಭ್ಯರ್ಥಿ ವಿಶ್ವನಾಥ್, ಬಿಜೆಪಿಯ ಹೆಚ್ಚು ಮತಗಳೇನಾದರೂ ಕಸಿದರೆ ಗೆಲುವಿನ ಸಾಧ್ಯತೆ ಕಾಂಗ್ರೆಸ್ ಅಭ್ಯರ್ಥಿ ಎಸ್.ವಿ. ರಾಮಚಂದ್ರ ಅವರಿಗಿದೆ.

ದಾವಣಗೆರೆ ಉತ್ತರ, ದಕ್ಷಿಣ ಮತ್ತು ಮಾಯಕೊಂಡ

ಒಂದೇ ಕುಟುಂಬದ ಇಬ್ಬರಿಗೆ ಟಿಕೆಟ್ ಕೊಡಬಾರದೆಂಬ ಕಾಂಗ್ರೆಸ್ ಹೈಕಮಾಂಡಿನ ನಿಲುವು ಮೆಚ್ಚತಕ್ಕದಾದರೂ 52 ಸಾವಿರ ಮುಸ್ಲಿಂ ಮತದಾರರಿರುವ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಶಾಮನೂರು ಶಿವಶಂಕರಪ್ಪನಿಗೆ ಟಿಕೆಟ್ ನೀಡಿ, 25 ಸಾವಿರ ಮುಸ್ಲಿಂ ಮತದಾರರಿದ್ದರೂ ಉತ್ತರ ಕ್ಷೇತ್ರದ ಮೇಲೆ ಹಿಡಿತವಿಲ್ಲದ ಸೈಯದ್ ಸೈಫುಲ್ಲರಿಗೆ ಬಿಜೆಪಿಯ ಮಾಜಿ ಮಂತ್ರಿ ರವೀಂದ್ರನಾಥ್ ವಿರುದ್ಧ ಸ್ಪರ್ಧಿಸಲು ಟಿಕೆಟ್ ನೀಡಿದ್ದು ಕಾಂಗ್ರೆಸ್ ಪಕ್ಷದ ಕುರುಡುತನವ್ರೋ ಅಥವಾ ಪೆದ್ದುತನವ್ರೋ ಅರ್ಥವಾಗುತ್ತಿಲ್ಲ. ಹಲವರ ಪ್ರಕಾರ ಬಿಜೆಪಿ ಪಕ್ಷದ ಬಾಲಬಡುಕನಂತೆ ವರ್ತಿಸುವ ಈ ಜಿಲ್ಲೆಯ ಫ್ಯೂಡಲ್ ಮಠಾಧೀಶನೊಬ್ಬ ಎಸ್.ವಿ ರವೀಂದ್ರನಾಥನನ್ನು ಗೆಲ್ಲಿಸುವ ಉದ್ದೇಶದಿಂದಲೇ ಕಾಂಗ್ರೆಸ್ ಪಕ್ಷದಿಂದ 'ವೀಕ್ ಕ್ಯಾಂಡಿಡೇಟ್' ಹಾಕಿಸಿದ್ದನಂತೆ.


ರವೀಂದ್ರನಾಥ್

ಅದೇನೆ ಇರಲಿ, ಕಾಂಗ್ರೆಸ್ ಪಕ್ಷವು ಕೊಟ್ಟ ಟಿಕೆಟ್ ಕೂಡ ಸೈಫುಲ್ಲರಿಗೆ ಸಿಗದಂತೆ ಮಾಡಿದ ಶಾಮನೂರು ಶಿವಶಂಕರಪ್ಪ ಮತ್ತು ಅವರ ಮಕ್ಕಳ ಬಗೆಗೆ ಹಾಗೂ ಕಾಂಗ್ರೆಸ್ ಪಕ್ಷದ ಬಗ್ಗೆ ಮುಸ್ಲಿಂ ಸಮುದಾಯವು ಅಸಹನೆ ತೋರಿಸುವಂತಾಗಿದೆ. ಇದಕ್ಕೆ ಪೂರಕವಾಗಿ ಅಲ್ಪಸಂಖ್ಯಾತರಲ್ಲಿ ಪ್ರಭಾವಿಯಾಗಿದ್ದ ಚನ್ನಗಿರಿಯ ಸಿರಾಜ್ ಅಹಮದ್ ಮತ್ತು ಹರಿಹರದ ರಫೀಕ್ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಇತರೆ ಪಕ್ಷಗಳನ್ನು ಬೆಂಬಲಿಸುತ್ತಿದ್ದಾರೆ. ಇದೇ ಮನಸ್ಥಿತಿಯನ್ನು ಚುನಾವಣೆಯ ಅಂತ್ಯದವರೆಗೂ ಮುಸ್ಲಿಂ ಸಮುದಾಯವು ಮುಂದುವರೆಸಿಕೊಂಡು ಹೋದರೆ ಪಕ್ಷಕ್ಕೆ ಭಾರೀ ಪೆಟ್ಟಾಗುತ್ತದೆ.


ಶಾಮನೂರು

ಶಾಮನೂರು ಮಲ್ಲಿಕಾರ್ಜುನ್ ಮತ್ತು ಬೆಂಬಲಿಗರು ಸೈಯದ್ ಸೈಫುಲ್ಲರಿಗೆ ಟಿಕೆಟ್ ವಂಚಿಸಿದ್ದನ್ನು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ನಿರ್ಣಾಯಕ ಬಲವನ್ನು ಹೊಂದಿರುವ ಮುಸ್ಲಿಂ ಮತದಾರರು ಈ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ಶಾಮನೂರು ಶಿವಶಂಕರಪ್ಪನನ್ನು ಅಷ್ಟು ಸುಲಭವಾಗಿ ಕ್ಷಮಿಸುವುದಿಲ್ಲ, ಹೀಗಾಗಿ, ಇಲ್ಲಿನ ಬಿಜೆಪಿ ಅಭ್ಯರ್ಥಿ ನಿರ್ಣಾಯಕ ಮತಗಳನ್ನು ಪಡೆಯುವ ಸಾಧ್ಯತೆ ಇದೆ. ಆ ಕಾರಣದಿಂದಾಗಿಯೇ "ನಾನಾಗಲೇ ಗೆದ್ದಿದ್ದೇನೆ, ಮುಂದೆ ಆಡುವುದು ಫ್ರೆಂಡ್ಲಿ ಮ್ಯಾಚ್ ಅಷ್ಟೇ" ಎಂದು ಬಿಜೆಪಿಯ ರವೀಂದ್ರನಾಥ್ ಅಹಂಕಾರದ ಮಾತುಗಳನ್ನಾಡುತ್ತಿದ್ದಾರೆ. ಒಂದು ವೇಳೆ ಕಾಂಗ್ರೆಸ್ ಪಕ್ಷದಿಂದ ದಕ್ಷಿಣ ಕ್ಷೇತ್ರಕ್ಕೆ ಸೈಯದ್ ಸೈಫುಲ್ಲರಿಗೆ, ಉತ್ತರದಿಂದ ಶಾಮನೂರು ಶಿವಶಂಕರಪ್ಪ ಅಥವಾ ಎಸ್.ಎಸ್. ಮಲ್ಲಿಕಾರ್ಜುನ್‌ಗೆ ಟಿಕೆಟ್ ಸಿಕ್ಕಿದ್ದರೆ ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗುಡಿಸಿಕೊಂಡು ಹೋಗುತ್ತಿತ್ತೆಂಬ ಸತ್ಯ ಸ್ವತಃ ಎಸ್.ಎ. ರವೀಂದ್ರನಾಥ್‌ಗೂ ಗೊತ್ತಿದೆ!


ಮಾಯಕೊಂಡ: ಈ ಹಿಂದೆ ಶಿವಮೂರ್ತಿನಾಯ್ಕಗೆ ಕಾಂಗ್ರೆಸ್ ಟಿಕೆಟ್ ಸಿಕ್ಕೇ ಬಿಟ್ಟಿತ್ತೆನ್ನುವಷ್ಟು ಪ್ರಚಾರ ಸಿಕ್ಕಿತ್ತು, ಕೊನೆ ಕ್ಷಣದಲ್ಲಿ ಹಾಲಿ ದಾವಣಗೆರೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವೈ.ರಾಮಪ್ಪನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದೆ. ಬಿಜೆಪಿಯಿಂದ ಬಸವರಾಜ್ ನಾಯ್ಕ, ಬಿ.ಎಸ್.ಪಿ. ಪಕ್ಷದಿಂದ ಈ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಆಲೂರು ಲಿಂಗರಾಜ್, ಜೆಡಿಎಸ್‌ನಿಂದ ಕೊಟ್ರಪ್ಪ ಸ್ಪರ್ಧೆಯಲ್ಲಿದ್ದಾರೆ.

ಈ ಹಿಂದೆ ಬಿಜೆಪಿಯ ಎಸ್.ಎ.ರವೀಂದ್ರನಾಥ್ ಎರಡು ಬಾರಿ ಗೆದ್ದು ಬಂದಿರುವ ಕ್ಷೇತ್ರ ಇದಾಗಿರುವುದರಿಂದ ಇಲ್ಲಿ ಬಿಜೆಪಿ ಅಲೆ ಇದ್ದರೂ ಸಹ ಕಾಂಗ್ರೆಸ್‌ನ ವೈ. ರಾಮಪ್ಪ ಗಂಭೀರವಾದ ಸ್ಪರ್ಧೆ ನೀಡುವ ಸಾಧ್ಯತೆ ಇದೆ. ಬಿಎಸ್‌ಪಿ ಅಭ್ಯರ್ಥಿ ಆಲೂರು ಲಿಂಗರಾಜ್, ಕಾಂಗ್ರೆಸ್ ಅಭ್ಯರ್ಥಿ ವೈ. ರಾಮಪ್ಪನಿಗೆ ಸ್ವಲ್ಪ ಮಟ್ಟದ ಹೊಡೆತ ಕೊಡಬಹುದಾದರೂ ಈ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವ ಸಾಧ್ಯತೆಗಳು ಕಡಿಮೆ ಎನ್ನಬಹುದು. ■

ಹಾಸನ

ದಳ-ಕಾಂಗ್ರೆ ಜಿದ್ದಾಜಿದ್ದಿ

ದಳದ ಭದ್ರಕೋಟೆಯಾಗಿರುವ ಹಾಸನದಲ್ಲಿ ಈ ಬಾರಿ ಕಾಂಗ್ರೆಸ್ ಬಿರುಕು ತರುವ ಸೂಚನೆಗಳಿವೆ. ಭಿನ್ನಮತೀಯರ ಕಾಟ ಒಂದಿಲ್ಲದೇ ಹೋಗಿದ್ದರೆ, ಕಾಂಗ್ರೆಸ್‌ನಿಂದ ಜೆಡಿಎಸ್‌ಗೆ ಇನ್ನೂ ಹಾನಿಯಾಗುತ್ತಿತ್ತೇನೋ. 7 ಕ್ಷೇತ್ರಗಳಿರುವ ಹಾಸನದಲ್ಲಿ ಬಿಜೆಪಿ ಒಂದು ಕ್ಷೇತ್ರ ಗೆದ್ದರೆ ಅದೇ ದೊಡ್ಡ ಸಾಧನೆ.



ಹಾಸನ:ಬಿ.ಶಿವರಾಂ ಮೇಲುಗೈ

ಜಿಲ್ಲೆಯ ಹೃದಯಭಾಗವಾದ ಹಾಸನ ಕ್ಷೇತ್ರ ರಾಜಕೀಯವಾಗಿ ಈ ಬಾರಿ ಜಿದ್ದಾಜಿದ್ದಿಯ ಕಣವಾಗಿದೆ. ರೇವಣ್ಣನ ಕಡುವೈರಿ ಬಿ.ಶಿವರಾಂ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರೆ, ದಳದಿಂದ ಮಾಜಿ ಶಾಸಕ ಎಚ್.ಎಸ್. ಪ್ರಕಾಶ್ ಕಣದಲ್ಲಿದ್ದಾರೆ. ಬಿಜೆಪಿಗೆ ಸ್ಥಳೀಯ ಅಭ್ಯರ್ಥಿ ಸಿಗದೆ ಬೆಂಗಳೂರಿನ ರಿಯಲ್ ಎಸ್ಟೇಟ್ ಕುಳ ಎಂ.ಕೆ. ಸುರೇಶ್‌ಗೆ ಟಿಕೆಟ್ ಮಾರಿಕೊಂಡಿದ್ದಾರೆ.

ಬಿಜೆಪಿ ಕಾರ್ಯಕರ್ತರಂತೂ ಗೆಲ್ಲುವ ಭರವಸೆ ಇರದಿದ್ದಾಗಲೂ ಸುರೇಶ್ ಜೇಬನ್ನು ಮಿಂಚಿನ ವೇಗದಲ್ಲಿ ಖಾಲಿಮಾಡಿಸುತ್ತಿದ್ದಾರೆ. ಬಿಜೆಪಿ ಟಿಕೆಟ್ ವಂಚಿತ ಕೆ.ಎಚ್. ಹನುಮೇಗೌಡ ಬಿಎಸ್‌ಪಿ ಟಿಕೆಟ್ ಪಡೆದು ಅಖಾಡಕ್ಕಿಳಿದಿದ್ದಾರೆ.

ದಳ ಸರ್ಕಾರದ ಭೂಸ್ವಾಧೀನ ಹಗರಣಗಳ ಬಗ್ಗೆ ಜನ ಸಿಟ್ಟಿಗೆದ್ದಿದ್ದರೆ. ಬಿಜೆಪಿ ಪಾಲಿಗೆ ಸುರೇಶ್ ಸ್ಥಳೀಯನಲ್ಲದ್ದೇ ಶಾಪವಾಗಿದೆ. ಕಾಂಗ್ರೆಸ್ ಶಿವರಾಂಗೆ ಇವೆಲ್ಲಾ ಅನುಕೂಲಕರ ಅಂಶಗಳಾಗಿವೆ.

ಅರಸೀಕೆರೆ: ದಳದ ಶಿವಲಿಂಗೇಗೌಡ ಪ್ರಬಲ

ಲಿಂಗಾಯತರ ಪ್ರಾಬಲ್ಯವಿರುವ ಅರಸೀಕೆರೆಯಲ್ಲಿ ಕಾಂಗ್ರೆಸ್‌ನ ಸಿದ್ದಣ್ಣ ಜೆಡಿಎಸ್‌ನಿಂದ ಶಿವಲಿಂಗೇಗೌಡ ಹಾಗೂ ಬಿಜೆಪಿಯ ಎನ್.ರವಿ ನಡುವೆ ಸ್ಪರ್ಧೆಯಿದೆ.

ಕಳೆದ ಬಾರಿ ಇಲ್ಲಿ ಬಿಜೆಪಿ ಗೆದ್ದಿತು. ಆಗ ದಳದ ಶಿವಲಿಂಗೇಗೌಡ ಕೇವಲ 15 ಓಟನಿಂದ ಸೋತಿದ್ದರು. ಆ ಸಹಾನುಭೂತಿ ಹಾಗೂ ಸೋತಿದ್ದಾಗಲೂ ಕ್ಷೇತ್ರದ ಕೆಲಸ ಮಾಡುತ್ತಾ ಬಂದಿದ್ದ ಶಿವಲಿಂಗೇಗೌಡರ ಬಗ್ಗೆ ಜನ ವಿಶ್ವಾಸ ತೋರುತ್ತಿದ್ದಾರೆ.

ಸಕಲೇಶಪುರ: ದಳ-ಕಾಂಗ್ರೆಸ್ ಕದನ

ಇದು ಮೀಸಲು ಕ್ಷೇತ್ರ. ದಳದ ಮಾಜಿ ಶಾಸಕ ಎಚ್.ಕೆ. ಕುಮಾರಸ್ವಾಮಿ ಮತ್ತೆ ಸ್ಪರ್ಧಿಸಿದ್ದು, ಕಾಂಗ್ರೆಸ್‌ನ ಸಣ್ಣಸ್ವಾಮಿ ಮತ್ತು ಬಿಜೆಪಿಯ ನಿರ್ವಾಣಯ್ಯ ಪ್ರತಿಸ್ಪರ್ಧಿಗಳಾಗಿದ್ದಾರೆ. ಕ್ಷೇತ್ರ ಪುನರ್‌ವಿಂಗಡಣೆಯಲ್ಲಿ ಕಟ್ಟಾಯ ಹೋಬಳಿ ಸಕಲೇಶಪುರಕ್ಕೆ ಸೇರ್ಪಡೆಯಾದ ಕಾರಣ ಲಿಂಗಾಯತ, ಒಕ್ಕಲಿಗ ಮತದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಲಿಂಗಾಯತರು ಬಿಜೆಪಿ ಪರ ಇದ್ದರೆ ಒಕ್ಕಲಿಗ, ದಲಿತ ಹಿಂದುಳಿದ ವರ್ಗದವರು ಕಾಂಗ್ರೆಸ್ ಪರ ಇದ್ದಾರೆ. ಒಂದಷ್ಟು ಒಕ್ಕಲಿಗರ ಓಟುಗಳು ದಳಕ್ಕೂ ಸಿಗಲಿವೆ. ದಳ-ಕಾಂಗ್ರೆಸ್ ನಡುವೆ ನೇರ ಸ್ಪರ್ಧೆಯಿದ್ದು, ದಳದ ಕುಮಾರಸ್ವಾಮಿ ಕೈ ಮೇಲಾಗಿದೆ. ಕಾಂಗ್ರೆಸ್‌ನ ಸಣ್ಣಸ್ವಾಮಿ ಹೋರಾಟವೂ ಬೆಳೆಯುತ್ತಿದೆ.

ಶ್ರವಣಬೆಳಗೊಳ: ಬಿಜೆಪಿ ಲೆಕ್ಕಕ್ಕಿಲ್ಲ



ಕಾಂಗ್ರೆಸ್‌ನ ರಂಗೀಲಾ ನಾಯಕ ಎಚ್.ಸಿ. ಶ್ರೀಕಂಠಯ್ಯ ಮತ್ತು ದಳದ ಪುಟ್ಟೇಗೌಡರ ಕದನ ಕಣ ಶ್ರವಣಬೆಳಗೊಳದಲ್ಲಿ ಬಿಜೆಪಿ ಆಟಕ್ಕುಂಟು ಲೆಕ್ಕಕ್ಕಿಲ್ಲ. ದಳ-ಕಾಂಗ್ರೆಸ್ ನಡುವೆ ಭಾರಿ ಪೈಪೋಟಿಯಿದ್ದು ಸ್ಥಳೀಯ ಸಕ್ಕರೆ ಕಾರ್ಖಾನೆ ಖಾಸಗೀಕರಣ ಮಾಡಿದ ದಳ ಸರ್ಕಾರದ ವಿರುದ್ಧ ಜನರಿಗೆ ಅಸಮಾಧಾನವಿದೆ. ಕಾಂಗ್ರೆಸ್‌ಗೆ ಇದೇ ವರದಾನ.

ಬೇಲೂರು: ರುದ್ರೇಶ್‌ಗೌಡ ಮೇಲುಗೈ

ಹಿಂದೆ ಮೀಸಲು ಕ್ಷೇತ್ರವಾಗಿದ್ದ ಬೇಲೂರು ಈಗ ಸಾಮಾನ್ಯಕ್ಷೇತ್ರ. ಕಾಂಗ್ರೆಸ್‌ನ ರುದ್ರೇಶ್‌ಗೌಡ, ಜನಾನುರಾಗಿ ದಳದ ಅಪ್ಪಣ್ಣಯ್ಯ, ಬಿಜೆಪಿಯ ಶಿವರುದ್ರಪ್ಪ ಕಣದಲ್ಲಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನ ರುದ್ರೇಶ್‌ಗೌಡರದೇ ಮೇಲುಗೈ.

ಹೊಳೇನರಸಿಪುರ: ರೇವಣ್ಣಂಗೆ ಸ್ವಲ್ಪ ಗಾಬರಿ

ದಳದ ಅಭ್ಯರ್ಥಿ ರೇವಣ್ಣ ಯಾಮಾರಿ ಬಿಟ್ಟರೆ ಸ್ವಲ್ಪ ಕಷ್ಟ ಎಂಬ ವಾತಾವರಣವನ್ನು ಕಾಂಗ್ರೆಸ್‌ನ ಅನುಪಮಾ ಸೃಷ್ಟಿಸಿದ್ದಾರೆ. ಮಾಜಿ ಸಂಸದ ಪುಟ್ಟಸ್ವಾಮಿಗೌಡರ ಸೊಸೆ ಅನುಪಮಾಗೆ 'ಕ್ಷೇತ್ರ ಅಭಿವೃದ್ಧಿಯಾಗಲಿ' ಎಂಬ ಆರೋಪ ಮಾಡಲು ಅವಕಾಶವೇ ಸಿಗದಷ್ಟು ಅಭಿವೃದ್ಧಿಯನ್ನು ರೇವಣ್ಣ ಮಾಡಿ ಮುಗಿಸಿದ್ದಾರೆ. ದೇವೇಗೌಡರ ಕುಟುಂಬ ಹೊಳೇನರಸಿಪುರವನ್ನು ತಮ್ಮ ಕಾಯಂ ಸುರಕ್ಷಿತ ಕ್ಷೇತ್ರ ಮಾಡಿಕೊಳ್ಳಲು ಹೀಗೆ ಮಾಡಿದ್ದಾರೆ.



ಅರಕಲಗೂಡು: ಯಾರಿಗೂ ಸುಲಭ ಅಲ್ಲ

ಜನ ಬೇಡಿಕೊಂಡರೆಂದು ಅಳುತ್ತಳುತ್ತಲೇ ಜೆಡಿಎಸ್‌ನಿಂದ ಕಣಕ್ಕಿಳಿದಿ[illegible] ಎ.ಟಿ.ರಾಮಸ್ವಾಮಿಗೆ ಕಾಂಗ್ರೆಸ್‌ನ ಎ.ಮಂಜು ಪ್ರತಿಸ್ಪರ್ಧಿ. ಬಿಜೆಪಿಯ [illegible]ದೇಗೌಡ ಅಂತಾ ಪೈಪೋಟಿ ನೀಡಲಾರರು. ಹಿಂದುಳಿದವರು [illegible] ಹಾಗೂ ಒಕ್ಕಲಿಗರ ಬೆಂಬಲ ಕಾಂಗ್ರೆಸ್ ಕಡೆಗಿದೆ. ರಾಮಸ್ವಾಮಿ [illegible] ಕಾಂಗ್ರೆಸ್‌ನ ಮಂಜು ಮುಂದೆ ಸಾಗಿಹೋಗಲಿದ್ದಾರೆ.

ಕೊಪ್ಪಳ: ಹುರುಪಿನಲ್ಲಿ ಕಾಂಗ್ರೆಸ್

ಚುನಾವಣೆ 2008

ಕೊಪ್ಪಳ ಎಲ್ಲರ ಕಣ್ಣು ಸಂಗಟಿಯತ್ತ!

ಕೊಪ್ಪಳದಲ್ಲೀಗ ಕಾಂಗ್ರೆಸ್-ಜೆಡಿಎಸ್‌ಗಳದ್ದೇ ಜಟಾಪಟಿ. ಬಿಜೆಪಿಯದೇನಿದ್ದರೂ ಮೂರನೇ ಸ್ಥಾನ. ಆದರೂ ಪಕ್ಷೇತರ ಅಭ್ಯರ್ಥಿ ಕರಿಯಣ್ಣ ಸಂಗಟಿ ಕೀಳುವ ಮತಗಳ ಮೇಲೆ ಈ ಮೂರೂ ಪಾರ್ಟಿಗಳ ಭವಿಷ್ಯ ನಿರ್ಧಾರವಾಗಲಿದೆ.

ಕಾಂಗ್ರೆಸ್‌ನ ಭಿನ್ನಮತೀಯರ ನಡುವೆ ನುಗ್ಗಿ, ಹಿಂದುಳಿದ, ಅಲ್ಪಸಂಖ್ಯಾತ, ದಲಿತರ ಪಾಲಿಗೆ ಡಾರ್ಲಿಂಗ್ ಆಗುತ್ತಿರುವ ಬಸವರಾಜ್ ಹಿಟ್ನಾಳ್ ಒಂದೆಡೆಗಿದ್ದರೆ, ಎರಡು ಅವಧಿಗೆ ಶಾಸಕನಾಗಿ ಬಡವರಿಗೆ ಆಶ್ರಯ ಮನೆ ವಿತರಿಸುವ ನೆಪದಲ್ಲಿ ಕೋಟ್ಯಂತರ ರೂಪಾಯಿ ಲೂಟಿ ಹೊಡೆದು ಮೈಕೈ ಹೊಲಸು ಮಾಡಿಕೊಂಡಿರುವ ಜೆಡಿಎಸ್‌ನ ಸಂಗಣ್ಣ ಕರಡಿ ಇನ್ನೊಂದೆಡೆಗಿದ್ದಾರೆ.

ಕುಮಾರಸ್ವಾಮಿಯ ಸಾಧನೆ ನೋಡಿ (ತನ್ನ ಸಾಧನೆ ನೋಡಿ ಅಲ್ಲ) ಮತ ಕೊಡಿ ಎಂದು ಸಂಗಣ್ಣ ಕರಡಿ ಮತ ಯಾಚಿಸುತ್ತಿದ್ದಾನೆ. ಕೊಪ್ಪಳದ ಚುನಾವಣಾ ಇತಿಹಾಸ ನೋಡಿದರೆ ದಿವಟರ್ ಹೊರತುಪಡಿಸಿ ಎಲ್ಲರದ್ದೂ ಒಂದೇ ಕತೆ: 'ಜೋ ಹಾರ್ ಗಯಾ, ಓ ಮರ್ ಗಯಾ'. ಅಂದರೆ, ಒಮ್ಮೆ ಸೋತರೆ ಅವರ ಕತೆ ಮುಗೀತು ಎಂದರ್ಥ. ಹಾಗಾಗಿ, ಸಂಗಣ್ಣನಿಗಿದು ತನ್ನ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಅಗ್ನಿ ಪರೀಕ್ಷೆ. ಈತ ನೆಚ್ಚಿಕೊಂಡಿರುವುದು ಲಿಂಗಾಯತ ಮತಗಳನ್ನು. ಆದರೆ ಆ ಓಟ್‌ಬ್ಯಾಂಕಿಗೆ ಬಿಜೆಪಿಯ ಅಂದಪ್ಪ ಕೂಡ ಕೈ ಹಾಕಿ ತನ್ನ ಪಾಲು ಪಡೆಯುತ್ತಾನೆ. ಕುರುಬರು ಮತ್ತು ಮುಸ್ಲಿಮರು ಸಾಲಿಡ್ಡಾಗಿ ಹಾಗೂ ಅರ್ಧದಷ್ಟು ದಲಿತರು ಕಾಂಗ್ರೆಸ್ ತೆಕ್ಕೆಗೆ ಬಂದರೆ ಹಿಟ್ನಾಳ್ ಹಾದಿ ಸುಗಮವಾಗುತ್ತದೆ.

ಕಳೆದ ಚುನಾವಣೆಯಲ್ಲಿ ಎರಡು ಕೋಟಿ ಕ್ಯಾಶ್ ಮತ್ತು ಪೆಟ್ರೋಲ್ ಬಂಕ್ ಆಮಿಷಕ್ಕೆ ಬಿಜೆಪಿ ಸೇರಿದ್ದ ಸಂಗಣ್ಣ ಈ ಬಾರಿ ಗೆದ್ದುಬಿಟ್ಟರೆ ತಮ್ಮ ಮೇಲೆ ಸೇಡು ತೀರಿಸಿಕೊಳ್ಳಬಹುದೆಂಬ ಭಯ ಮುಸ್ಲಿಮರಿಗೆ ಇದ್ದೇ ಇದೆ. ಅಲ್ಲದೆ, ನಗರಸಭೆ ಅಧ್ಯಕ್ಷಗಿರಿಗೆ ಬಿಸಿಎಂ ಕೆಟಗರಿ ಬಂದಾಗ ಮೆಹಬೂಬ್ ನಾಲಬಂದ್‌ನ ಹೆಸರನ್ನು ಇದೇ ಸಂಗಣ್ಣ ಕೊನೆಗಳಿಗೆಯಲ್ಲಿ ಕೈಬಿಟ್ಟಿದ್ದ. ಇಷ್ಟೆಲ್ಲಾ ಸಾಲದೆಂಬಂತೆ, ತಾನು ಬಿಜೆಪಿ ಬಿಟ್ಟಿದ್ದರೂ ನಗರಸಭೆಯಲ್ಲಿ ಕೆಲ ಚೆಡ್ಡಿಗಳಿಗೆ ಜೆಡಿಎಸ್ ಟಿಕೆಟ್ ಕೊಡಿಸಿ ಗೆಲ್ಲಿಸಿದ್ದ. ಈ ಎಲ್ಲ ಕಾರಣಗಳಿಂದಾಗಿ ಮುಸ್ಲಿಮರಂತೂ ಸಂಗಣ್ಣನಿಗೆ ಒಲಿಯುವುದಿಲ್ಲ.

ಗಂಗಾವತಿ ಅನ್ಸಾರಿಯ ಅಬ್ಬರ

ಕಳೆದ ಇಪ್ಪತ್ತು ವರ್ಷಗಳಿಂದ ಕಾಂಗ್ರೆಸ್‌ನ ಭದ್ರ ಕೋಟೆಯಂತಿದ್ದ ಗಂಗಾವತಿಯನ್ನು ಜೆಡಿಎಸ್‌ನ ಇಕ್ಬಾಲ್ ಅನ್ಸಾರಿ ಭೇದಿಸಿ ಮಂತ್ರಿಯಾದದ್ದು ಹಳೆಯ ಕತೆ. ಮೊನ್ನೆ ಚುನಾವಣೆಗಳು ಘೋಷಣೆಯಾಗುವವರೆಗೂ ಗಂಗಾವತಿಯ ಕಂಪ್ಲಿ ರೋಡಿನಲ್ಲಿರುವ ಇಂದಿರಾಗಾಂಧಿ ಪ್ರತಿಮೆಯನ್ನು ವರ್ಷಕ್ಕೊಮ್ಮೆ ಧೂಳು ಹೊಡೆಯುವವರೂ ಇರಲಿಲ್ಲ ಅಂದಮೇಲೆ ಇಲ್ಲಿ ಕಾಂಗ್ರೆಸ್ ಸ್ಥಿತಿ ಹೇಗಿರಬೇಕು ಊಹಿಸಿಕೊಳ್ಳಿ.




ವಿಚಿತ್ರದ ಸಂಗತಿಯೆಂದರೆ ಜೆಡಿಎಸ್‌ನ ಅನ್ಸಾರಿಯನ್ನು ವಿರೋಧಿಸುವ ನೆಪದಲ್ಲಿ ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ಬಿಜೆಪಿ ಗಟ್ಟಿಯಾಗುವಂತೆ ಮಾಡಿದ್ದ ಪರಣ್ಣ ಮುನವಳ್ಳಿ ಇಲ್ಲೀಗ ಬಿಜೆಪಿ ಅಭ್ಯರ್ಥಿ! ಕಳೆದ ಬಾರಿ ಗಿರಿಗೌಡನ ಮೂಲಕ ಎರಡನೇ ಸ್ಥಾನಕ್ಕೇರಿದ್ದ ಬಿಜೆಪಿ ಈಗಲೂ ಲಿಂಗಾಯತ ಮತಗಳನ್ನೇ ನೆಚ್ಚಿಕೊಂಡು ಅಭ್ಯರ್ಥಿಯನ್ನು ಬದಲಿಸಿರುವುದು ಹಾಗೂ ಲಲಿತರಾಣಿಗೆ ಕೈಕೊಟ್ಟಿರುವುದು ಬಿಜೆಪಿಗೆ ಕುತ್ತಾಗಲಿದೆ. ಮೊದಲ ಬಾರಿಗೆ ಗಂಗಾವತಿಯಲ್ಲಿ ಹೊಸ ಬಸ್ ನಿಲ್ದಾಣ, ತಾಲ್ಲೂಕು ಕಚೇರಿ ಹಾಗೂ ಉತ್ತಮ ರಸ್ತೆಗಳನ್ನು ಅನ್ಸಾರಿ ಮಾಡಿಸಿ ಜನರ ಬೆಂಬಲ ಗಳಿಸಿಕೊಂಡಿದ್ದಾರೆ. ಅದೂಅಲ್ಲದೇ, ಅಲ್ಪಸಂಖ್ಯಾತ ಮತಗಳಂತೂ ಈತನಿಗೆ ಗ್ಯಾರಂಟಿ. ಜೊತೆಗೆ ಹಿಂದುಳಿದ ವರ್ಗದವರು, ದಲಿತರು ಒಂದಿಷ್ಟು ಬೆಂಬಲಿಸಿದರೆ ಈತನ ಗೆಲುವು ಖಚಿತವಾಗಲಿದೆ. ಹಿಂದುಳಿದ ವರ್ಗದ ಸಾವೇಣಿ ನಾಗಪ್ಪನನ್ನು ಕಣಕ್ಕಿಳಿಸಿರುವ ಕಾಂಗ್ರೆಸ್‌ಗೆ ಬಿಜೆಪಿಯನ್ನು ಗೆಲ್ಲಿಸುವ ಇರಾದೆ ಇದ್ದಂತಿದೆ.

ಅನ್ಸಾರಿ ಗೆದ್ದರೆ ಗಂಗಾವತಿ ಒಂದಿಷ್ಟು ಶಾಂತವಾಗಿರುತ್ತದೆ. ಬೇರೆಯವರು ಸೋತರೆ ಕ್ಷೇತ್ರಕ್ಕೆ ನಷ್ಟವೇನೂ ಇಲ್ಲ.

ಕನಕಗಿರಿ: ಬಿಜೆಪಿ ಪ್ಯಾಕಪ್!

ಕ್ಷೇತ್ರ ಪುನರ್ವಿಂಗಡನೆಯಿಂದ ಕನಕಗಿರಿ ಮೀಸಲು ಕ್ಷೇತ್ರವಾಗಿದೆ. ನಾಗಪ್ಪ ಸಾಲೋಣಿ, ಮಲ್ಲಿಕಾರ್ಜುನ ನಾಗಪ್ಪರಂತಹ ಕೆಲಸಕ್ಕೆ ಬಾರದ ಮಂತ್ರಿಗಳನ್ನು ಮತ್ತು ಜಿ.ವೀರಪ್ಪನಂತಹ ನಿಷ್ಕ್ರಿಯರನ್ನು ಗೆಲ್ಲಿಸಿರುವ ಕನಕಗಿರಿ ಮುಂದೆ ಈ ಬಾರಿ ದೊಡ್ಡ ಸವಾಲೇ ಇದೆ.

ಕಾಂಗ್ರೆಸ್ಸಿನಲ್ಲಿ ಅಷ್ಟೋ ಇಷ್ಟೋ ಅಸಮಾಧಾನ, ಒಳಜಗಳ ಇರುವುದು ಸತ್ಯವಾದರೂ ಬಿಜೆಪಿಯಷ್ಟಿಲ್ಲ. ಬಿಜೆಪಿಯಲ್ಲಿ ಟಿಕೆಟ್ ಹಂಚಿಕೆ ಸಂಬಂಧಿಸಿದ ಕಚ್ಚಾಟ ತಾರಕಕ್ಕೇರಿ ಪೊಲೀಸ್ ಠಾಣೆಯ ಮೆಟ್ಟಿಲನ್ನೂ ಹತ್ತಿದೆ. ಕಾಂಗ್ರೆಸ್‌ನಿಂದ ಷಣ್ಮುಖಪ್ಪ ಪ್ರಬಲ ಆಕಾಂಕ್ಷಿಯಾಗಿದ್ದರೂ ಮಾಜಿ ಜಿ.ಪಂ ಅಧ್ಯಕ್ಷ ಮುಕುಂದರಾವ್‌ಗೆ ಟಿಕೆಟ್ ಸಿಕ್ಕಿದೆ. ಹಾಗೆಯೇ, ವಿಪರೀತ ರೊಕ್ಕ ಖರ್ಚು ಮಾಡಿಕೊಂಡಿರುವ ಶಿವರಾಜ್ ಬದಲು ಶ್ಯಾಮಣ್ಣ ನಾರಿನಾಳ್‌ಗೆ ಬಿಜೆಪಿ ಟಿಕೆಟ್ ಸಿಕ್ಕಿದೆ. ಇಲ್ಲಿ ವೀಕ್ ಇರುವ ಜೆಡಿಎಸ್ ಯಮನೂರಪ್ಪ ನಡುಮನಿಯನ್ನು ಕಣಕ್ಕಿಳಿಸಿದೆ.



ಬಿಜೆಪಿಯ ಶಿವರಾಜ್‌ನ ಬಂಡಾಯ ಹಾಗೂ ಹಿಂದಿನ ಚೆಡ್ಡಿ ಶಾಸಕ ವೀರಪ್ಪನ ನಿಷ್ಕ್ರಿಯತೆ ಬಿಜೆಪಿಯನ್ನು ಮೆತ್ತಗಾಗಿಸಿದೆ. ಹಾಗಾಗಿ, ಇಲ್ಲಿ ಮುಕುಂದರಾವ್, ಶ್ಯಾಮಣ್ಣ ಹಾಗೂ ಶಿವರಾಜ್ ನಡುವೆ ನೇರ ಪೈಪೋಟಿ ನಡೆಯಲಿದೆ. 16 ಸಾವಿರದಷ್ಟಿರುವ ಮುಸ್ಲಿಮರು ನಿರ್ಣಾಯಕವಾಗಿದ್ದು ಅವರು ಯಾರ ಕಡೆ ವಾಲಲಿದ್ದಾರೆ ಎಂಬುದಿನ್ನೂ ಸ್ಪಷ್ಟವಾಗಿಲ್ಲ. ಹೊಸದಾಗಿ ಸೇರಿರುವ ಮರಳಿ ವಿಭಾಗದಲ್ಲಿ ದಲಿತರದ್ದೇ ಮೇಲುಗೈ. ಪ್ರತೀ ಬಾರಿ ಕ್ಷೇತ್ರದ ಹಣೇಬರಹ ಬರೆಯುತ್ತಿದ್ದ ಕುರುಬರ ಮತಗಳು ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಹಂಚಿಹೋಗಿ ಕೇವಲ 12 ಸಾವಿರಕ್ಕಿಳಿದಿವೆ.

ಸದ್ಯ ಕ್ಷೇತ್ರದಾದ್ಯಂತ ಕಾಂಗ್ರೆಸ್‌ಗೆ ಪೂರಕ ವಾತಾವರಣ ಸೃಷ್ಟಿಯಾಗಿದೆ.

ಕುಷ್ಟಗಿ: ದೊಡ್ಡಗೌಡನ ವಿರೋಧಿ ಅಲೆ



ಪ್ರತಿ ಬಾರಿ ಹೊಸಬರನ್ನು ಆರಿಸಿ ಕಳಿಸುತ್ತಿರುವ ಕುಷ್ಟಗಿ ಕ್ಷೇತ್ರಕ್ಕೀಗ ಅಮರಗೌಡ ಬಯ್ಯಾಪುರ ಹೊಸ ಅತಿಥಿ. ಜಾತಿ ಬಲದ ದೊಡ್ಡನಗೌಡ ಮತ್ತೆ ಬಿಜೆಪಿಯಿಂದ ಆಯ್ಕೆ ಬಯಸಿದ್ದಾನಾದರೂ ಅದು ಕೈಗೂಡುವುದು ತುಸು ಕಷ್ಟವೇ. ತನ್ನ ಅಧಿಕಾರಾವಧಿಯಲ್ಲಿ ಆತ ನಡೆಸಿದ ದುರಾಡಳಿತ, ರೇಪಿಷ್ಟರಿಗೆ ಆತ ನೀಡಿದ ಬೆಂಬಲ, ಮಾಡಿಸಿದ ಗಲಭೆಗಳು ಮುಂತಾದವುಗಳು ಹಳ್ಳಿ ಹಳ್ಳಿಯಲ್ಲಿ ಆತನ ವಿರೋಧಿ ಅಲೆಯನ್ನು ಹುಟ್ಟುಹಾಕಿದೆ. ತನ್ನ ಸ್ವಜಾತಿ ಕುರುಬರ ಒಲವನ್ನು ಗಳಿಸಿಕೊಂಡಿದ್ದಾನಾದರೂ ಅವಿಷ್ಟೇ ಮತಗಳಿಂದ ಗೆಲ್ಲುವುದು ಕಷ್ಟ. ಇನ್ನು ಜೆಡಿಎಸ್‌ನಿಂದ ಕೆ.ಶರಣಪ್ಪ 1994ರಲ್ಲಿ ಮಾಡಿದ್ದ ಕೆಲಸಗಳ ಆಧಾರದಲ್ಲಿ ಕಣಕ್ಕಿಳಿದಿದ್ದಾರೆ. ಅಷ್ಟೊಂದು ಧನಬಲವಿಲ್ಲದ ಈತನಿಗೆ ಲಿಂಗಾಯತರೂ ಸೇರಿದಂತೆ ಒಂದಿಷ್ಟು ಜನಬೆಂಬಲ ಇದೆ. 15 ಸಾವಿರದಷ್ಟಿರುವ ಮುಸ್ಲಿಮರು ಜೆಡಿಎಸ್‌ನತ್ತ ವಾಲುತ್ತಿರುವುದು ಶರಣಪ್ಪನಿಗೆ ಆಶಾಭಾವನೆಯನ್ನು ಮೂಡಿಸಿದೆ. ಅದೂಅಲ್ಲದೇ ಕಾಂಗ್ರೆಸ್ ಟಿಕೆಟ್ ಸಿಗದಿದ್ದುದಕ್ಕೆ ಕೊಪ್ಪಳದಲ್ಲಿ ಬಿಜೆಪಿ ಕ್ಯಾಂಡಿಡೇಟ್ ಆಗಲು ಪ್ರಯತ್ನಿಸಿ ವಿಫಲವಾಗಿರುವ ಹಸನ್‌ಸಾಬ್ ಕುಷ್ಟಗಿಯಲ್ಲಿ ಜೆಡಿಎಸ್ ಬೆಂಬಲಕ್ಕೆ ನಿಲ್ಲುತ್ತಿರುವ ಲಕ್ಷಣಗಳು ಕಾಣುತ್ತಿವೆ. ಹಾಗೇನಾದರೂ ಆದರೆ ಜೆಡಿಎಸ್ ದಾರಿ ಮತ್ತಷ್ಟು ಸುಗಮವಾಗಲಿದೆ.



ಯಲಬುರ್ಗಿ: ಒಡೆಯಲಿರುವ ಕಾಂಗ್ರೆಸ್ ಓಟು

ಕಳೆದ ಆರು ತಿಂಗಳಿನಿಂದ ಜಿಲ್ಲೆಯಲ್ಲಿ ರೆಡ್ಡಿ-ಚೆಡ್ಡಿಗಳ ಜಗಳದಲ್ಲಿ ಸುದ್ದಿಯಲ್ಲಿದ್ದದ್ದು ಯಲಬುರ್ಗಾ. ನಾಲ್ಕು ಬಾರಿ ಅಧಿಕಾರಕ್ಕೇರಿ ಲೂಟಿ ಹೊಡೆದ ಬಸವರಾಜ್ ರಾಯರೆಡ್ಡಿ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ. ಅಧಿಕಾರವಿಲ್ಲದೇ ಎನ್‌ಜಿಓಗಳ ಮೂಲಕ ಲೂಟಿ ಹೊಡೆದ ಈಶಣ್ಣ ಬಿಜೆಪಿ ಅಭ್ಯರ್ಥಿ. ತಾಲ್ಲೂಕಿನಲ್ಲಿರುವ ಬಹುಸಂಖ್ಯಾತ ಗಾಣಿಗೇರ ಸಮುದಾಯದ ಅಮರಗುಂಡಪ್ಪ ಮೇಟಿಯನ್ನು ಕಣಕ್ಕಿಳಿಸಿರುವ ದೇವೇಗೌಡರ ನಿರ್ಧಾರವೇ ಇಲ್ಲಿ ಕೆಲಸ ಮಾಡಬಹುದೆನಿಸುತ್ತದೆ.

ತನಗೆ ಓಟ್ ಬ್ಯಾಂಕ್ ಇದೆ ಎಂದು ನಂಬಿಕೊಂಡಿರುವ ರಾಯರೆಡ್ಡಿ ಹಾಗೂ ಮೂರು ಬಾರಿ ಮುಗ್ಗರಿಸಿದರೂ ಅನುಕಂಪವಿದೆ ಎನ್ನುವ ಈಶಣ್ಣರ ನಡುವೆ ಜಾತಿ ಮತ್ತು ಹಣ ಬಲವಿರುವ ಅಮರಗುಂಡಪ್ಪನೇ ಎದ್ದುನಿಂತರೂ ಆಶ್ಚರ್ಯವಿಲ್ಲ. ಈ ಮೂವರೂ ಲಿಂಗಾಯತರೇ ಆಗಿರುವುದು ಇನ್ನೊಂದು ವಿಶೇಷ. ಆದರೆ ಲಿಂಗಾಯತರ ಒಳಪಂಗಡವಾದ ಗಾಣಿಗರೇ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಅಮರಗುಂಡಪ್ಪನಿಗೆ ಲಾಭವಾಗಲಿದೆ. ಇನ್ನು ಬಿಜೆಪಿಯು ಕುರುಬ ಸಮುದಾಯದ [illegible] ಕಣಕ್ಕಿಳಿಸಿರುವುದು ಆತನಿಗೆ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡಕ್ಕೂ ಭಯ ಹುಟ್ಟಿಸಿದೆ. "ಸಿದ್ಧರಾಮಯ್ಯನ ಫೋಟೋ ತೋರಿಸಿದರೆ ಸಾಕು ಕುರುಬರ ಓಟು ನನಗೆ" ಎನ್ನುತ್ತಿದ್ದ ರಾಯರೆಡ್ಡಿಗೆ ಇದರಿಂದ ಹಿನ್ನಡೆಯಾಗಲಿದೆ.


ರಾಯರೆಡ್ಡಿ ಶಾಸಕನಾಗಿದ್ದಾಗ ನಡೆಸಿದ ಅವ್ಯವಹಾರಗಳಿಂದಾಗಿ ಈ ಚುನಾವಣೆಯಲ್ಲಿ ಆತ ಬೆಲೆ ತೆರಬೇಕಾಗಿ ಬರಬಹುದು. ಕಳೆದ ಬಾರಿ ಕೇವಲ ಮೂರು ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದ ಈತನನ್ನು ಬಿಜೆಪಿ ತನ್ನ ಟಾರ್ಗೆಟ್ ಮಾಡಿಕೊಂಡಿದೆ. ಸುಮಾರು [illegible] ಸಾವಿರದಷ್ಟಿರುವ ಪಂಚಮಸಾಲಿ ಮತಗಳು ಮೂರೂ ಪಕ್ಷಗಳ ನಡುವೆ ಹಂಚಿಹೋಗಲಿವೆ. ಗಾಣಿಗೇರ, ಮುಸ್ಲಿಂ, ಉಪ್ಪಾರ, ಬ್ರಾಹ್ಮಣ ಮತಗಳಲ್ಲಿ ಒಂದಿಷ್ಟನ್ನು ಬಾಚಿಕೊಂಡು ರಾಯರೆಡ್ಡಿ ವಿರೋಧಿ ಅಲೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಜೆಡಿಎಸ್ ಹಾದಿ ಸುಲಭವಾಗಬಹುದು.

ಕಾಂಗ್ರೆಸ್ ಮತಗಳು ಬಿಜೆಪಿ, ಜೆಡಿಎಸ್ ನಡುವೆ ಒಡೆಯುವುದು ಒಂದೆಡೆಯಾದರೆ, ಇನ್ನೊಂದೆಡೆಗೆ ಬಿಎಸ್‌ಪಿ ಕೂಡ ಕಾಂಗ್ರೆಸ್ ಓಟ್ ಬ್ಯಾಂಕನ್ನ[illegible] ತನ್ನ ಪಾಲು [illegible] ರಾಯರೆಡ್ಡಿಗೆ [illegible] [illegible] ಹೆಚ್ಚಿಸಿದೆ.

ಧಾರವಾಡ: ಜೆಡಿಎಸ್ ಖಾತೆ ತೆರೆಯಲು ಕಾಂಗ್ರೆಸ್-ಬಿಜೆಪಿ ಸಹಾಯ!

ಧಾರವಾಡ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಪೈಕಿ ಒಂದರಲ್ಲಿಯೂ ಗೆಲ್ಲಲು ಸಮರ್ಥವಾಗಿಲ್ಲದ ಜೆಡಿಎಸ್‌ಗೆ ವಿರೋಧಿ ಕಾಂಗ್ರೆಸ್ ಮತ್ತು ಬಿಜೆಪಿಗಳೇ ಖಾತೆ ತೆರೆಯಲು ಅನುವು ಮಾಡಿಕೊಡುತ್ತಿರುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಈ ಎರಡೂ ಪಕ್ಷಗಳ ಒಳಗಿನ ಭಿನ್ನಮತ, ಬಂಡಾಯಗಳು ಅಸಲಿಗೆ ಜೆಡಿಎಸ್‌ಗೆ ಸಹಾಯವಾಗುತ್ತಿರುವುದು ಇತ್ತೀಚಿನ ಬೆಳವಣಿಗೆ. ಕಾಂಗ್ರೆಸ್ ಈವರೆಗೆ ತನ್ನ ಅಧಿಕೃತ ಅಭ್ಯರ್ಥಿಗಳನ್ನು ಪ್ರಕಟಿಸದಿರುವುದರಿಂದ ಬೇಸತ್ತ ಹಲವರು ಗುಳೇ ಹೋಗುವುದಕ್ಕೆ ಸಜ್ಜಾಗಿದ್ದರೆ ಅಂಥವರನ್ನು ಬಾಚಿಕೊಳ್ಳಲು ದೊಡ್ಡ ಗೌಡರು ಹೊಂಚುಹಾಕಿ ಕುಳಿತಿದ್ದಾರೆ.

ಹುಬ್ಬಳ್ಳಿ-ಧಾರವಾಡ ಪೂರ್ವ (ಮೀಸಲು) ಕ್ಷೇತ್ರ



ಬಿಜೆಪಿ ಇಲ್ಲಿ ಈಗಾಗಲೇ ವೀರಭದ್ರಪ್ಪ ಹಾಲರವಿಯನ್ನು ತನ್ನ ಅಭ್ಯರ್ಥಿಯೆಂದು ಘೋಷಿಸಿದೆ. ಪಕ್ಷದೊಳಗೆ ಪ್ರಾರಂಭದಲ್ಲಿದ್ದ ಅಪಸ್ವರವೂ ಕೊಂಚ ಕಡಿಮೆಯಾಗಿದ್ದು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ಕಾಂಗ್ರೆಸ್‌ನಲ್ಲಿ ಹೊನ್ನಳ್ಳಿ ಹಾಗೂ ಹಿಂಡಸಗೇರಿ ಮಾತ್ರವಲ್ಲದೇ ಎಚ್ಕೆ ಕೂಡ ಮೂಗು ತೂರಿಸಿದ್ದರಿಂದ ಎಫ್.ಎಚ್.ಜಕ್ಕಪ್ಪನವರನ್ನು ಅಧಿಕೃತ ಅಭ್ಯರ್ಥಿ ಎಂದು ಘೋಷಿಸಲಾಗಿದೆ. ಇದರಿಂದ ಸಿಟ್ಟಿಗೆದ್ದಿರುವ ಎಪಿಎಂಸಿ ಮಾಜಿ ಅಧ್ಯಕ್ಷ ಶಂಕ್ರಣ್ಣ ಬಿಜವಾಡರವರ ಸೋದರ ಮಾಜಿ ಪಾಲಿಕೆ ಸದಸ್ಯ ದುರ್ಗಪ್ಪ ಬಿಜವಾಡ ಬಂಡಾಯವೆದ್ದು ಜೆಡಿಎಸ್‌ಗೆ ಹಾರಿ ಟಿಕೆಟ್ ಪಡೆಯುವ ಯತ್ನದಲ್ಲಿದ್ದಾನೆ. ಹಾಗೆಯೇ, ಹೊನ್ನಳ್ಳಿ ಗುಂಪಿನ ಗಣೇಶ್ ಟಗರಗುಂಟಿ, ಸುಧಾ ಮತ್ತು ಮಣಿಕುಂಟಲ್ ಈಗಾಗಲೇ ಬಂಡಾಯದ ಕಹಳೆ ಊದಿ ಕಾಂಗ್ರೆಸ್‌ಗೆ ಹಾನಿ ಮಾಡಲು ಸಜ್ಜಾಗಿದ್ದಾರೆ.

ಈ ನಡುವೆ ಬಿಜೆಪಿಯಿಂದ ಹೊರಬಂದು ಹಿಂದೂ ರಾಷ್ಟ್ರೀಯ ಸೇನಾ ಕಟ್ಟಿಕೊಂಡಿರುವ ಪ್ರಮೋದ್ ಮುತಾಲಿಕ್ ಬಿಜೆಪಿಯನ್ನು ಹಿಗ್ಗಾಮುಗ್ಗಾ ಝಾಡಿಸುತ್ತಾ ಬಿಜೆಪಿಗೆ ತನ್ನ ಕೈಲಾದಷ್ಟು ಹಾನಿ ಮಾಡಲು ಪ್ರಯತ್ನಿಸುತ್ತಿದ್ದಾನೆ. ಪಟ್ಟೆಗಾರ, ಬ್ರಾಹ್ಮಣ ಹಾಗೂ ಲಿಂಗಾಯತ ಮತಗಳನ್ನೇ ನಂಬಿಕೊಂಡಿರುವ ಬಿಜೆಪಿಗೆ ಮುತಾಲಿಕನ ಬಂಡಾಯದಿಂದ ಬೆವರಿಳಿಯುತ್ತಿದೆ.

ಕ್ಷೇತ್ರದಲ್ಲಿ ಮೊದಮೊದಲು ಕಾಂಗ್ರೆಸ್-ಬಿಜೆಪಿ ನಡುವೆ ಹಣಾಹಣಿ ಎಂಬ ಚಿತ್ರಣವಿತ್ತು, ಆದರೆ ಈಗ ಜೆಡಿಎಸ್‌ನ ಶಿವುಹಿರೇಕರೂರು ಕೂಡ ರಂಗ ಪ್ರವೇಶಿಸಿರುವುದರಿಂದ ತ್ರಿಕೋನ ಸ್ಪರ್ಧೆ ಏರ್ಪಡಲಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳಲ್ಲಿನ ಬಂಡಾಯಗಳು ಅಸಲಿಗೆ ಜೆಡಿಎಸ್‌ಗೆ ಒಂದಿಷ್ಟು ಅನುಕೂಲ ಮಾಡಿಕೊಟ್ಟರೂ ಆಶ್ಚರ್ಯವಿಲ್ಲ.

ಧಾರವಾಡ ಗ್ರಾಮೀಣ ಕ್ಷೇತ್ರ



ವಿನಯ್ ಕುಲಕರ್ಣಿ

ಇಲ್ಲಿ ಸೀಮಾ ಮಸೂತಿ ಎಂಬ ಮಹಿಳಾ ಅಭ್ಯರ್ಥಿಗೆ ಬಿಜೆಪಿ ಟಿಕೆಟ್ ನೀಡಿದ್ದಕ್ಕೆ ಚೆಡ್ಡಿಗಳೇ ಅಪಸ್ವರವೆತ್ತಿದ್ದಾರೆ. ಇನ್ನೊಂದೆಡೆ ಕಾಂಗ್ರೆಸ್ ಟಿಕೆಟ್‌ಗಾಗಿ ಮೋರೆ ಮತ್ತು ವಿನಯ್ ಕುಲಕರ್ಣಿ ಕಿತ್ತಾಡಿಕೊಂಡು ಕೊನೆಗೆ ಅದು ವಿನಯ ಕುಲಕರ್ಣಿಯ ಪಾಲಾಗಿದೆ. ಈ ಕ್ಷೇತ್ರದಿಂದ ಪಕ್ಷೇತರನಾಗಿ ಸ್ಪರ್ಧಿಸಿ ಗೆದ್ದಿದ್ದ ವಿನಯ್ ಕುಲಕರ್ಣಿಗೆ ಮೋರೆಯ ಬಂಡಾಯದ ಬಿಸಿ ತಟ್ಟಲಿದೆ. ಏನೇ ಆದರೂ ಇಲ್ಲಿ ವಿನಯ್ ಕುಲಕರ್ಣಿಯ ಪರ ವಾತಾವರಣವೇ ಇದೆ.

ಕಲಘಟಗಿ ಕ್ಷೇತ್ರ



ಕಳೆದೆರಡು ತಿಂಗಳಿನಿಂದ ಕ್ಷೇತ್ರದಲ್ಲಿ ಠಿಕಾಣಿ ಹೂಡಿ, ಕ್ಷೇತ್ರದ ಜನರ ಮದುವೆ, ಸಭೆಸಮಾರಂಭಗಳಿಗೆ ಹಣ ಸುರಿಯುತ್ತಿರುವ ಗಣಿಧಣಿ ಸಂತೋಷ್ ಲಾಡ್‌ಗೆ ಕೊನೆಗೂ ಕಾಂಗ್ರೆಸ್ 'ಕೈ' ಹಿಡಿದಿದೆ ಇದರಿಂದ ಜೆಡಿಎಸ್‌ನ ಕೇಶವ ಯಾದವ್, ಗೋಕುಲ ಐ.ಸಿ ಪಿಳಿಪಿಳಿ ಕಣ್ಣುಬಿಡುತ್ತಿದ್ದಾರೆ. ಬಿಜೆಪಿಯಿಂದ ಸಿ.ಎಂ. ನಿಂಬಣ್ಣನವರ್, ಬಿಎಸ್‌ಪಿಯಿಂದ ಬಾಬುನಾಬ್ ಕಾಶಿಮನವರ್ ಸ್ಪರ್ಧೆಯಲ್ಲಿದ್ದರಾದರೂ ಹವಾ ಲಾಡ್ ಪರವಾಗಿದೆ. ಇಲ್ಲಿಯತನಕ ಕ್ಷೇತ್ರವನ್ನು ಸುಲಿದು ಹಾಕಿದ ಸಿದ್ದನಗೌಡ್ರ ಮತ್ತು ಚಿಕ್ಕನಗೌಡ್ರ ಇಲ್ಲಿಂದ ವಲಸೆ ಹೋಗಿರುವುದು ಕ್ಷೇತ್ರದ ಜನರಿಗೆ ಒಂದಿಷ್ಟು ನೆಮ್ಮದಿಯನ್ನು ತಂದಿದೆ.

ಸಂತೋಷ್ ಲಾಡ್ ಹೊರಗಿನವನಾದರೂ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯಬಲ್ಲ ಎಂಬ ವಿಶ್ವಾಸ ಕ್ಷೇತ್ರದ ಜನರಿಗಿರುವುದೇ ಆತನ ಪ್ಲಸ್ ಪಾಯಿಂಟ್. ಚುನಾವಣೆಯಲ್ಲಿ ಈತನಿಗಿರುವ ಬೆಂಬಲದ ಅಲೆ, ಹರಿಯಲಿರುವ ಹಣದ ಹೊಳೆಯನ್ನು ಲೆಕ್ಕಾಚಾರ ಹಾಕಿದರೆ ಲಾಡ್ ಕೈ ಮೇಲಾಗುವುದು ಸ್ಪಷ್ಟ.

ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರ



ಜಬ್ಬರ್‌ಖಾನ್ ಹೊನ್ನಳ್ಳಿ

ಈ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಯಾರಿಗೆ ಎಂಬ ವಿಚಾರದಲ್ಲಿ ಧಾರವಾಡದ ಏಳು ಪಾಲಿಕೆ ಸದಸ್ಯರು ಜಬ್ಬರ್‌ಖಾನ್ ಹೊನ್ನಳ್ಳಿಯ ವಿರುದ್ಧ ಕಿಡಿಕಾರಿದರೆ ಹುಬ್ಬಳ್ಳಿಯ 11 ಪಾಲಿಕೆ ಸದಸ್ಯರು ಮೋರೆ ವಿರುದ್ಧ ಬಂಡಾಯವೆದ್ದಿದ್ದರು. ಕೊನೆಗೂ ಹೈಕಮಾಂಡ್ ಒಲಿದದ್ದು ಹೊನ್ನಳ್ಳಿಗೇನೆ. ಇದರಿಂದ ಮುನಿಸಿಕೊಂಡಿರುವ ಮೋರೆ ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿದ್ದಾನೆ. ಇನ್ನೊಂದೆಡೆ ಧಾರವಾಡದ ಮುಸ್ಲಿಮರು "ಬೇರೆ ಊರಿನ ಹೊನ್ನಳ್ಳಿ ನಮಗೆ ಬೇಡ ನಮ್ಮದೇ ಊರಿನ ಇಸ್ಮಾಯಿಲ್ ತಮಟಗಾರನನ್ನೇ ನಿಲ್ಲಿಸಿ'' ಎಂದು ತಗಾದೆ ತೆಗೆದಿದ್ದಾರೆ.

ಯಡ್ಡಿಯ ಭಂಟ ಚಂದ್ರಕಾಂತ್ ಬೆಲ್ಲದ್‌ಗೆ ಬಿಜೆಪಿಯ ಟಿಕೆಟ್ ಸಿಕ್ಕಿದ್ದಕ್ಕೆ ಆತನ ಖಾಸಾ ಸಹೋದರ ಶಿವಣ್ಣ ಬೆಲ್ಲದ್ ರೊಚ್ಚಿಗೆದ್ದು ಬೀದಿಗಿಳಿದಿದ್ದಾನೆ. ಕಾಂಗ್ರೆಸ್, ಬಿಜೆಪಿಗಳ ಒಳಜಗಳವೇ ಈ ಬಾರಿ ಅವೆರಡೂ ಪಕ್ಷಗಳನ್ನು ಹೈರಾಣ ಮಾಡಲಿದೆ. ಇಸ್ಮಾಯಿಲ್ ತಮಟಗಾರ್ ಕೂಡ ಈ ಬಾರಿ ಭಾರಿ ಪೈಪೋಟಿ ನಡೆಸುವ ನಿರೀಕ್ಷೆಯಿದೆ.

ಚುನಾವಣೆ 2008

ಉತ್ತರ ಕನ್ನಡ ಬೆವರುತ್ತಿರುವ ಬಿಜೆಪಿ!


ಉತ್ತರ ಕನ್ನಡ ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಬಹುತೇಕ ಸ್ಥಾನಗಳು ಈ ಬಾರಿ ಕಾಂಗ್ರೆಸ್ ಮಡಿಲಿಗೆ ಸೇರುವ ಸಾಧ್ಯತೆ ಇದ್ದು ಬಿಜೆಪಿ ಈಗಾಗಲೇ ಬೆವರುತ್ತಿದೆ. ಕಳೆದ ಬಾರಿ ನಾಲ್ಕು ಬಿಜೆಪಿ ಶಾಸಕರನ್ನು ಹಾಗೂ ಓರ್ವ ಸಂಸದನನ್ನು ಗೆಲ್ಲಿಸಿದ್ದ ಈ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಗಂಟುಮೂಟೆ ಕಟ್ಟಿ ಮನೆದಾರಿ ಹಿಡಿಯುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ.

ಕಾರವಾರ-ಅಂಕೋಲಾ

ಈ ಕ್ಷೇತ್ರದಿಂದ ದಿವಂಗತ ಮಾಜಿ ಶಾಸಕ ವಸಂತ ಅಸ್ನೋಟಿಕರ ಪುತ್ರ 27ರ ಹರೆಯದ ಆನಂದ್ ಅಸ್ನೋಟಿಕರ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದು ಗೆಲುವು ಇವರ ಕಡೆಗೇ ವಾಲುವ ಲಕ್ಷಣಗಳಿವೆ. ಈತನ ತಂದೆ ಮಾಡಿದ ಅಭಿವೃದ್ಧಿ ಕೆಲಸಗಳು ಹಾಗೂ ಅವರು ಶಾಸಕರಿರುವಾಗಲೇ ಭೂಗತ ಪಾತಕಿಗಳ ಗುಂಡೇಟಿಗೆ ಬಲಿಯಾದದ್ದು ಕ್ಷೇತ್ರದಲ್ಲಿ ಆನಂದ್ ಪರ ವಾತಾವರಣವನ್ನು ಸೃಷ್ಟಿಸಿದೆ. ಇದೆಲ್ಲದರ ಜೊತೆಗೆ ಕಾಂಗ್ರೆಸ್‌ಗೆ ಕ್ಷೇತ್ರದಲ್ಲಿ ತನ್ನದೇ ಆದ ಓಟ್‌ಬ್ಯಾಂಕಿದೆ.



ಆನಂದ್ ಅಸ್ನೋಟಿಕರ್



ದಿವಂಗತ ವಸಂತ ಅವರ ಸಹೋದರನಂತಿದ್ದ ಮೀನುಗಾರ ಧುರೀಣ ಗಣಪತಿ ಉಳ್ವೇಕರ್ ಕಾಂಗ್ರೆಸ್ ಟಿಕೆಟ್ ಸಿಗದಿದ್ದುದಕ್ಕಾಗಿ ಮುನಿಸಿಕೊಂಡು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಆದರೆ ಅದು ಆನಂದ್ ಅಸ್ನೋಟಿಕರ್ ಗೆಲುವಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಷ್ಟು ಮಟ್ಟಕ್ಕಿಲ್ಲ. ಅಂಕೋಲಾದಲ್ಲಿ ಕಾಂಗ್ರೆಸ್‌ನ ಮೂರು ಜಿಲ್ಲಾ ಪಂಚಾಯಿತಿ ಸದಸ್ಯರಿದ್ದಾರಲ್ಲದೇ, ತಾಲ್ಲೂಕು ಪಂಚಾಯಿತಿ ಹಾಗೂ ಬಹುತೇಕ ಗ್ರಾಮಪಂಚಾಯತಿಗಳಲ್ಲಿ ಕಾಂಗ್ರೆಸ್ಸೇ ಆಡಳಿತ ನಡೆಸುತ್ತಿದೆ. ಇದೂ ಕೂಡ ಆನಂದ್ ಗೆಲುವಿಗೆ ಸಹಕಾರಿಯಾಗಲಿದೆ.

ಗಣಪತಿ ಉಳ್ವೇಕರ್ ಈಗಾಗಲೇ ಕಾರವಾರ ನಗರಸಭಾ ಅಧ್ಯಕ್ಷರಾಗಿದ್ದು ಕಾಂಗ್ರೆಸ್ ಪಕ್ಷದ ಪ್ರಮುಖರೇನೋ ಹೌದು. ಅವರಿಗೆ ಮೀನುಗಾರರ ನಡುವೆ ಒಂದಿಷ್ಟು ನೆಲೆಯೂ ಇರುವುದರಿಂದ ಆ ಸಮುದಾಯದ ಮತಗಳು ಲಭಿಸಲಿವೆ. ಬಿಜೆಪಿಯಿಂದ ಸ್ಪರ್ಧಿಸಿರುವ ಪ್ರಸಾದ್ ಕಾರವಾರಕರ್ ಕೂಡ ಮೀನುಗಾರರ ನಡುವೆ ಸ್ವಲ್ಪ ಪ್ರಭಾವ ಉಳಿಸಿಕೊಂಡಿದ್ದಾರಾದರೂ ಅದು ಓಟುಗಳಾಗಿ ಪರಿವರ್ತನೆಯಾಗುವಂಥದ್ದೇನಲ್ಲ. ಅದೂ ಅಲ್ಲದೇ, ಗಣಪತಿ ಉಳ್ವೇಕರ್ ಸ್ವತಂತ್ರ ಅಭ್ಯರ್ಥಿಯಾಗಿರುವುದರಿಂದ, ದೊಡ್ಡ ಸಮುದಾಯವಾದ ಮೀನುಗಾರರ ಮತಗಳು ಒಡೆದುಹೋಗುತ್ತವೆ. ಅದರೊಂದಿಗೆ ಬಿಜೆಪಿಯ ಜಿಲ್ಲಾ ಕಾರ್ಯದರ್ಶಿಯಾಗಿದ್ದ ಭಾಸ್ಕರ ನಾರ್ವೇಕರ್ ಬಿಜೆಪಿಯ ವಿರುದ್ಧವೇ ತಿರುಗಿಬಿದ್ದಿದ್ದಾನೆ. ವಾಸ್ತವದಲ್ಲಿ ಇದೆಲ್ಲದರ ಲಾಭವನ್ನು ಆನಂದ್ ಅಸ್ನೋಟಿಕರ್ ಪಡೆಯಲಿದ್ದಾರೆ.

ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿರುವ ಕೊಮಾರಪಂತ ಸಮಾಜದ ಆರ್.ಜಿ.ನಾಯ್ಕ ಅವರನ್ನು ಅದೇ ಸಮುದಾಯದವರೇ ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ. ಜೆಡಿಎಸ್ ಅಭ್ಯರ್ಥಿ ಅಂತಹ ಪ್ರಬಲ ಸ್ಪರ್ಧೆಯೊಡ್ಡಲಾರರು. ಜೆಡಿಎಸ್‌ನ ಟಿಕೆಟ್ ವಂಚಿತರು ಆನಂದ್ ಅವರನ್ನು ಬೆಂಬಲಿಸಿರುವುದೂ ಆನಂದ್ ಪಾಲಿಗೆ ಪಾಸಿಟಿವ್ ಪಾಯಿಂಟ್. ಸಾರಾಂಶೀಕರಿಸಿ ಹೇಳುವುದಾದರೆ, ಈ ಕ್ಷೇತ್ರದಲ್ಲಿ ಆನಂದ ಅಸ್ನೋಟಿಕರ್ ಮತ್ತು ಗಣಪತಿ ಉಳ್ವೇಕರ್ ನಡುವೆ ನೇರ ಸ್ಪರ್ಧೆ ಇದ್ದು ಗೆಲುವು ಆನಂದ್ ಪಾಲಾಗುವ ನಿರೀಕ್ಷೆಗಳೇ ಹೆಚ್ಚಿವೆ.

ಯಲ್ಲಾಪುರ-ಮುಂಡಗೋಡ

ಈ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ಶಿವರಾಮ ಹೆಬ್ಬಾರಿ ಬಿಜೆಪಿಯ ಅಭ್ಯರ್ಥಿ ವಿ.ಎಸ್.ಪಾಟೀಲ ಹಾಗೂ ಜೆಡಿಎಸ್ ಅಭ್ಯರ್ಥಿ ಪ್ರಮೋದ ಹೆಗಡೆಯವರಿಗೆ ಪ್ರಬಲ ಸ್ಪರ್ಧೆ ನೀಡುವ ಲಕ್ಷಣಗಳಿವೆ.



ಶಿವರಾಮ ಹೆಬ್ಬಾರ್


ಅಸಲಿಗೆ ಶಿವರಾಮ ಹೆಬ್ಬಾರ್ ಬಿಜೆಪಿಯಿಂದ ಬಂಡಾಯ ಎದ್ದು ತಮ್ಮ ಹಿಂಬಾಲಕರೊಂದಿಗೆ ಕಾಂಗ್ರೆಸ್ಸಿಗೆ ಸೇರಿದವರು. ತನ್ನ ವರ್ಚಸ್ಸಿನಿಂದ ಜನಪ್ರಿಯವಾಗಿರುವ ಇವರಿಗೆ ಸ್ವಂತ ನೆಲೆಯೂ ಇದೆ. ಜಾತಿಯಲ್ಲಿ ಬ್ರಾಹ್ಮಣನಾಗಿರುವ ಇವರಿಗೆ ಆ ಸಮುದಾಯದ ಮತಗಳೂ ಸಿಗಲಿವೆ. ಜೊತೆಗೆ ಕಾಂಗ್ರೆಸ್‌ನ ಓಟ್‌ಬ್ಯಾಂಕ್ ಕೂಡ ಇವರ ಸಹಾಯಕ್ಕೆ ಬರುತ್ತದೆ. ಯಲ್ಲಾಪುರ ಎಪಿಎಂಸಿ, ವಿವಿಧ ಸಹಕಾರಿ ಸಂಘಗಳು, ರೈತ ಸೇವಾ ಸಂಘಗಳು ಮತ್ತು ಕಾರ್ಮಿಕ ಸಂಘಟನೆಗಳು ಈಗಾಗಲೇ ಹೆಬ್ಬಾರರವರಿಗೆ ಬೆಂಬಲವಾಗಿ ನಿಂತಿವೆ. ಇದೆಲ್ಲದರ ಜೊತೆಗೆ ಹೇಳಿಕೇಳಿ ಗಣಿಧಣಿಯಾಗಿರುವ ಇವರು ಚುನಾವಣೆಯಲ್ಲಿ ಹರಿಸಲಿರುವ ಹಣದ ಹೊಳೆಯನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಗೆಲ್ಲುವುದರಲ್ಲಿ ಅನುಮಾನವಿಲ್ಲ.

ಬಿಜೆಪಿಯಿಂದ ಸ್ಪರ್ಧಿಸಿರುವ ವಿ.ಎಸ್.ಪಾಟೀಲ ಹಾಗೂ ಜೆಡಿಎಸ್ ಅಭ್ಯರ್ಥಿ ಪ್ರಮೋದ ಹೆಗಡೆ ಹೆಬ್ಬಾರ ಅವರಿಗೆ ಪ್ರಬಲ ಸ್ಪರ್ಧೆಯೊಡ್ಡಲಾರರು.

ದಾವಣಗೆರೆ : ಶ್ಯಾಮನೂರು ಫ್ಯಾಮಿಲಿಯ ಗೂಂಡಾಗಿರಿ !

ಈ ಹಿಂದೆ ಒಂದು ಬಾರಿ ಮಂತ್ರಿಯೂ ಆಗಿದ್ದ ಮಲ್ಲಿಕಾರ್ಜುನ್‌ನ ದುರಹಂಕಾರ ಮತ್ತು ಈತನೊಂದಿಗಿರುವ ದುಷ್ಟಕೂಟದ ಉಮೇದು ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನೇ ರದ್ದುಗೊಳಿಸುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ. ಕಾಂಗ್ರೆಸ್ ಪಕ್ಷವು ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಬಹುದೆಂದು ನಿರೀಕ್ಷಿಸಬಹುದೇ?

ಬಹುಶಃ ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಇಂತಹ ನಾಚಿಕೆಗೇಡಿನ ಘಟನೆ ನಡೆದಿರಲಿಕ್ಕಿಲ್ಲ! ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷದ ಬಿ-ಫಾರಂಗಾಗಿ ಶಾಮನೂರು ಶಿವಶಂಕರಪ್ಪನ ಮಕ್ಕಳು ಮತ್ತವರ ಚೇಲಾಗಳು ಪ್ರದರ್ಶಿಸಿದ ದುರಹಂಕಾರ, ಎಸ್ಸೆಸ್ ಮಲ್ಲಿಕಾರ್ಜುನನ ಬೆಂಬಲಕ್ಕೆ ನಿಂತ ಸ್ಥಳೀಯ ಕಾಂಗ್ರೆಸ್ ನಾಯಕರ ದಾಂಧಲೆಗಳಿಂದಾಗಿ ಈ ಪ್ರತಿಷ್ಠಿತ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯೇ ಇಲ್ಲದಂತಾಗಿದೆ! ಅದಕ್ಕಿಂತಲೂ ಮುಖ್ಯವಾಗಿ ಇವರೆಲ್ಲರಿಂದಾಗಿ ಕೋಮುವಾದಿ ಬಿಜೆಪಿ ಪಕ್ಷಕ್ಕೆ ಹಾಸಿಗೆ ಹಾಸಿಕೊಟ್ಟಂತಾಗಿದೆ.


ಎಸ್.ಎಸ್.ಮಲ್ಲಿಕಾರ್ಜುನ

ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಶಾಮನೂರು ಶಿವಶಂಕರಪ್ಪ ನಿಗದಿಯಾದ ಬೆನ್ನಲ್ಲೇ ದಾವಣಗೆರೆ ಉತ್ತರಕ್ಕೆ ಎಸ್.ಎಸ್.ಮಲ್ಲಿಕಾರ್ಜುನನಿಗೆ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ನೀಡಬೇಕೆಂಬ ಕೂಗಾಟ ಚೀರಾಟಗಳು ಪ್ರಾರಂಭವಾಗಿದ್ದವು. ಏಪ್ರಿಲ್ 28ರ ಸಂಜೆಯ ಹೊತ್ತಿಗೆ ಮಲ್ಲಿಕಾರ್ಜುನ್‌ಗೆ ಪಕ್ಷದ ಬಿ-ಫಾರಂ ದೊರೆಯದೆ ಸೈಯದ್ ಸೈಫುಲ್ಲಾಗೆ ಸಿಕ್ಕಿದೆ ಎಂಬ ಸುದ್ದಿ ಟಿವಿ ಚಾನೆಲ್‌ಗಳಲ್ಲಿ ಬಿತ್ತರಗೊಂಡದ್ದೇ ತಡ, ಮಲ್ಲಿಕಾರ್ಜುನನ ಹಿಂಬಾಲಕ-ಮುಂಬಾಲಕರೆಲ್ಲಾ ಎಂ.ಸಿ.ಸಿ. ಬಿ-ಬ್ಲಾಕ್‌ನಲ್ಲಿನ ಆತನ ಮನೆಯ ಮುಂದೆ ಮತ್ತು ಕಾಂಗ್ರೆಸ್ ಪಕ್ಷದ ಸಂಪರ್ಕ ಕಚೇರಿಯ ಮುಂದೆ ಜಮಾವಣೆಗೊಂಡು, ಕಾಂಗ್ರೆಸ್ ಹೈಕಮಾಂಡಿನ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು. ಆನಂತರ ಆ ಗುಂಪಿನಲ್ಲಿದ್ದವರು ಬಸ್ ಶೆಲ್ಟರ್‌ನ್ನು ಜಖಂಗೊಳಿಸಿದರಲ್ಲದೆ, ಬಸ್ಸುಗಳನ್ನು ತಡೆದು ಕಲ್ಲುಗಳನ್ನು ಬೀರಿ ಗಾಜುಗಳನ್ನು ಒಡೆದು ಹಾಕಿದರು. ಬಸ್ಸುಗಳಲ್ಲಿದ್ದ ಪ್ರಯಾಣಿಕರು ತಮ್ಮ ಜೀವಕ್ಕೆ ಹೆದರಿ ತಮ್ಮ ಲಗೇಜುಗಳನ್ನೇ ಬಿಟ್ಟು ದಿಕ್ಕಾಪಾಲಾಗಿ ಓಡಿದರು. ಈ ಮಟ್ಟದ ಭೀತಿ ಸೃಷ್ಟಿಸುವ ಜನರಿಗೆ ತಾವು ಜನ ನಾಯಕರೆಂದುಕೊಳ್ಳುವ ಪ್ರಾಥಮಿಕ ಹಕ್ಕಿರುತ್ತದೆಯೇ?



ಮರುದಿನ ಶಾಮನೂರು ಶಿವಶಂಕರಪ್ಪ ದೊಡ್ಡ ಮನಸ್ಸು ಮಾಡಿ ಗಲಾಟೆಯ ಕುರಿತು ವಿಷಾದ ವ್ಯಕ್ತಪಡಿಸಿದರು. ಆದರೆ ಮಾಯಕೊಂಡ, ಹೊನ್ನಾಳಿ ಮತ್ತು ಜಗಳೂರು ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳಾದ ವೈ.ರಾಮಪ್ಪ, ಶಾಂತನಗೌಡ ಮತ್ತು ಎಸ್.ವಿ.ರಾಮಚಂದ್ರ ಮಲ್ಲಿಕಾರ್ಜುನ್‌ಗೆ ಟಿಕೆಟ್ ಕೊಡದಿದ್ದರೆ ತಾವು ಸಲ್ಲಿಸಿರುವ ಬಿ-ಫಾರಂಗಳನ್ನು ಹಿಂಪಡೆಯುತ್ತೇವೆಂದು ಘೋಷಿಸಿದ್ದಲ್ಲದೆ ಹೈಕಮಾಂಡನ್ನು ವಿರೋಧಿಸಿ ಬೀದಿ ಹೋರಾಟಕ್ಕಿಳಿಯುತ್ತೇವೆಂದು ಎಗರಾಡಿದರು. ಇವರ ಹೇಳಿಕೆಯ ಬೆನ್ನಲ್ಲೇ ಮಹಾನಗರ ಪಾಲಿಕೆಯ ಕಾಂಗ್ರೆಸ್ ಕಾರ್ಪೋರೇಟರ್‌ಗಳು, ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ಮತ್ತು ಎ.ಪಿ.ಎಂ.ಸಿ. ನಿರ್ದೇಶಕರುಗಳು ಸಾಮೂಹಿಕ ರಾಜೀನಾಮೆ ನೀಡುವ ಬೆದರಿಕೆಗಳನ್ನು ಹಾಕಿದರು. ಇವೆಲ್ಲದರಿಂದ ಮಲ್ಲಿಕಾರ್ಜುನನ ತಿಮಿರಿಗೆ ಮತ್ತಷ್ಟು ಪುಷ್ಟಿ ಸಿಕ್ಕಿತು.

ನಗರಪಾಲಿಕೆಯಲ್ಲಿ ನಡೆದ ರಾದ್ಧಾಂತ


ಏಪ್ರಿಲ್ 29 ರಂದು ಸುಮಾರು 1.00 ಗಂಟೆಗೆ ಹೆಲಿಕಾಪ್ಟರಿನಲ್ಲಿ ಬಿ-ಫಾರಂ ತಂದ ಮಂಜುನಾಥ್ ಭಂಡಾರಿ ಮತ್ತು ಹರೀಂದ್ರ ಮಿರ್ಜಾ ಮಹಾನಗರಪಾಲಿಕೆ ಪ್ರವೇಶಿಸಿದ ಸ್ವಲ್ಪ ಹೊತ್ತಿನಲ್ಲೇ ಸೈಯದ್ ಸೈಫುಲ್ಲಾರವರಿಗೆ ಟಿಕೆಟ್ ಘೋಷಿಸಿದರು. ಹಿಂದಿನ ರಾತ್ರಿಯ ದಾಂಧಲೆಯ ನಂತರ ಮತ್ತು ಬಿ-ಫಾರಂಗಾಗಿ ಹೆಲಿಕಾಪ್ಟರ್ ವ್ಯವಸ್ಥೆ ಮಾಡಿದ್ದರಿಂದ ಮಲ್ಲಿಕಾರ್ಜುನ್‌ಗೇ ಬಿ-ಫಾರಂ ಸಿಗುತ್ತದೆಂದು ನಂಬಿಕೊಂಡಿದ್ದ ಆತನ ಬೆಂಬಲಿಗರು ಇದನ್ನು ಕೇಳಿದ್ದೇ ತಡ, ಅಲ್ಲೋಲಕಲ್ಲೋಲ ಸೃಷ್ಟಿಸಿದರು. ಅಲ್ಲಿಯೇ ಇದ್ದ ಮಲ್ಲಿಕಾರ್ಜುನನ ಬೆಂಬಲಿಗ ಅರವಿಂದ ಎನ್ನುವವನು ಬಿ-ಫಾರಂ ತಂದವರನ್ನು ಮತ್ತು ಸೈಫುಲ್ಲಾರವರನ್ನು ನೀಚವಾಗಿ ಬೈಯುತ್ತಾ ಮಲ್ಲಿಕಾರ್ಜುನ್ ಹಾಗೂ ಇತರರಿಗೆ ಫೋನಾಯಿಸಿದ.

ಸ್ವಲ್ಪ ಹೊತ್ತಿನಲ್ಲಿ ನಗರಪಾಲಿಕೆಗೆ ಬಂದ ಮಲ್ಲಿಕಾರ್ಜುನ ಹಾಗೂ ಬೆಂಬಲಿಗರು ಭೀಭತ್ಸವನ್ನೇ ಸೃಷ್ಟಿಸಿದರು. ಮಲ್ಲಿಕಾರ್ಜುನನ ಪರವಾದ ಘೋಷಣೆ, ಕಿರುಚಾಟ ಹಾಗೂ ದಾಂಧಲೆಗಳ ನಡುವೆಯೇ ಸೈಯದ್ ಸೈಫುಲ್ಲಾ ನಾಮಿನೇಷನ್ ಮಾಡಲು ಮುಂದಾಗುವಷ್ಟರಲ್ಲಿ ಮಂಜುನಾಥ್ ಭಂಡಾರಿ ಮತ್ತು ಸೈಯದ್ ಸೈಫುಲ್ಲಾರವರನ್ನು ಮಲ್ಲಿಕಾರ್ಜುನ್ ಏಕವಚನದಿಂದಲೇ ಬೈಯುತ್ತಾ ನಾಮಿನೇಷನ್ ಮಾಡದಂತೆ ತಡೆದು ನಿಲ್ಲಿಸಿದ.

ಇಷ್ಟೆಲ್ಲಾ ಗೊಂದಲ ಗಲಾಟೆಗಳಾಗುತ್ತಿದ್ದ ಸಂದರ್ಭದಲ್ಲಿ ಶಿವಶಂಕರಪ್ಪನವರ ಇನ್ನೊಬ್ಬ ಪುತ್ರ ಎಸ್.ಎಸ್. ಗಣೇಶ್ ಬಂದು "ಸಾವುಕಾರು ಕರೀತಿದ್ದಾರೆ" ಎಂದು ಸೈಯದ್ ಸೈಫುಲ್ಲಾರನ್ನು ಕರೆದುಕೊಂಡು ಹೋಗಲು ಮುಂದಾದ. "ಹೋಗಬೇಡಿ, ಏನಿದ್ದರೂ ಇಲ್ಲೇ ತೀರ್ಮಾನವಾಗಲಿ" ಎಂದು ಸೈಫುಲ್ಲಾರನ್ನು ಅವರ ವಕೀಲ ವಿನಂತಿಸಿಕೊಂಡರು. ಅದಕ್ಕೆ ಮಾನ್ಯತೆ ಸಿಗಲಿಲ್ಲ -ಸೈಫುಲ್ಲಾರನ್ನು ಅಕ್ಷರಶಃ ಹರಕೆಯ ಕುರಿಯಂತೆ ನೇರ ಶಾಮನೂರು ಶಿವಶಂಕರಪ್ಪನ ಬಳಿ ಕರೆದೊಯ್ಯಲಾಯಿತು.

ಸೈಫುಲ್ಲಾರನ್ನು ವಾಪಾಸು ಕರೆದುಕೊಂಡು ಬಂದಿದ್ದು ಮಧ್ಯಾಹ್ನ 2.45ಕ್ಕೆ! ಬಿ-ಫಾರಂನಲ್ಲಿ ತಮ್ಮ ಹೆಸರೇ ಬರೆಯುವಂತೆ ಮಲ್ಲಿಕಾರ್ಜುನ್ ಒತ್ತಾಯಿಸಿದಾಗ ಅದಕ್ಕೆ ಬಗ್ಗದ ಮಂಜುನಾಥ್ ಭಂಡಾರಿ ನೇರವಾಗಿ ಕರ್ನಾಟಕದ ಕಾಂಗ್ರೆಸ್ ಉಸ್ತುವಾರಿ ವಹಿಸಿರುವ ಪೃಥ್ವಿರಾಜ್ ಚೌಹಾಣ್‌ಗೆ ಫೋನ್ ಮಾಡಿದರು. ಆಗಲೂ "ಸೈಯದ್ ಸೈಫುಲ್ಲಾಗೆ ಬಿ-ಫಾರಂ ಕೊಡಿ" ಎಂದು ಉತ್ತರ ಬಂತು. ಅದನ್ನು ಕಡೆಗಣಿಸಿದ ಮಲ್ಲಿಕಾರ್ಜುನನ ಕಡೆಯವರು ಸೈಫುಲ್ಲಾರ ಮೇಲೆ ಮತ್ತಷ್ಟು ಒತ್ತಡ ಹೇರಿ "ನಾವು ರಾಜಿಯಾಗಿದ್ದೇವೆ, ಮಲ್ಲಿಕಾರ್ಜುನ್‌ಗೆ ಬಿ-ಫಾರಂ ಕೊಡಿ" ಎಂದು ಪೃಥ್ವಿರಾಜ್ ಚೌಹಾಣ್‌ರಿಗೆ ಹೇಳಿದಂತೆ ಮಾಡಿದರು. ಚೌಹಾಣ್ ಆ ಪ್ರಸ್ತಾಪವನ್ನು ತಿರಸ್ಕರಿಸಿದರಲ್ಲದೆ, ಅವರೊಂದಿಗೆ ಮಲ್ಲಿಕಾರ್ಜುನ್ ಮಾತನಾಡುತ್ತೇನೆಂದು ಸೈಫುಲ್ಲಾರಿಂದ ಮೊಬೈಲ್ ತೆಗೆದುಕೊಂಡು ಮಾತನಾಡಲು ಪ್ರಯತ್ನಿಸಿದಾಗ ಚೌಹಾಣ್ ಮಾತನಾಡಲಿಲ್ಲ.

ಇಷ್ಟೆಲ್ಲಾ ನಡೆದ ಮೇಲಾದರೂ ಮಲ್ಲಿಕಾರ್ಜುನ್‌ಗೆ ರಾಜಕೀಯ ಜ್ಞಾನವೇನಾದರೂ ಇದ್ದಿದ್ದರೆ "ಸೈಫುಲ್ಲಾರವರೇ ಇರಲಿ, ಅವರನ್ನು ಬೆಂಬಲಿಸುತ್ತೇನೆ" ಎಂದುಬಿಟ್ಟಿದ್ದರೆ ಇಡೀ ಜಿಲ್ಲೆಯ ಮುಸ್ಲಿಂ ಅಲ್ಪಸಂಖ್ಯಾತರ ಮನಸ್ಸಿನಲ್ಲಿ ಮಲ್ಲಿಕಾರ್ಜುನ್‌ಗೆ ಒಳ್ಳೆಯ ಸ್ಥಾನ ಸಿಗುತ್ತಿತ್ತು. ಆದರೆ ಹಣಬಲ, ದುರಹಂಕಾರಗಳನ್ನು ಮೈತುಂಬ ತುಂಬಿಕೊಂಡಿರುವ ಮಲ್ಲಿಕಾರ್ಜುನನಿಗೆ ಪಕ್ಷಕ್ಕಿಂತಲೂ ತನ್ನ ಸ್ವಪ್ರತಿಷ್ಠೆಯೇ ಮುಖ್ಯವಾದವು. ಆದ್ದರಿಂದ ಸೈಫುಲ್ಲಾ ಹೆಸರಿನ ಪಕ್ಕದಲ್ಲಿ ತನ್ನ ಹೆಸರನ್ನು ಬರೆಯಿಸಿ, ಸೈಫುಲ್ಲಾರ ಹೆಸರನ್ನು ಒಡೆದುಹಾಕಿಸಿ ತಾನೇ ನಾಮಪತ್ರ ಸಲ್ಲಿಸಿದ.



ಶ್ಯಾಮನೂರು ಶಿವಶಂಕರಪ್ಪ

ನಾಮಪತ್ರದಲ್ಲಿ ಸೈಯದ್ ಸೈಫುಲ್ಲಾರ ಹೆಸರನ್ನು ಹೊಡೆದುಹಾಕಿದ್ದರೂ ಸೈಫುಲ್ಲಾರ ತಂದೆಯ ಹೆಸರು ಹಾಗೂ ವಿಳಾಸ ಹಾಗೇ ಉಳಿದಿತ್ತು. ಹೀಗಾಗಿ ಚುನಾವಣಾಧಿಕಾರಿಗಳು ಆ ನಾಮಪತ್ರವನ್ನು ತಿರಸ್ಕರಿಸಿದರು. ಪರಿಣಾಮವಾಗಿ ದಾವಣಗೆರೆ ಉತ್ತರ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿಯೇ ಇಲ್ಲದಂತಾಯಿತು.

ಈ ಹಿಂದೆ ಒಂದು ಬಾರಿ ಮಂತ್ರಿಯೂ ಆಗಿದ್ದ ಮಲ್ಲಿಕಾರ್ಜುನ್‌ಗೆ ಇಂತಹ ತಾಂತ್ರಿಕ ದೋಷಗಳ ಕುರಿತು ಅರಿವೇ ಇಲ್ಲದಿರುವಂತಹ ಬೌದ್ಧಿಕ ಕೊರತೆಯೇನಿಲ್ಲ. ಆದರೆ ಈತನ ದುರಹಂಕಾರ ಮತ್ತು ಈತನೊಂದಿಗಿರುವ ದುಷ್ಟಕೂಟದ ಉಮೇದು ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನೇ ರದ್ದುಗೊಳಿಸುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ. ಕಾಂಗ್ರೆಸ್ ಪಕ್ಷವು ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಬಹುದೆಂದು ನಿರೀಕ್ಷಿಸಬಹುದೇ?

■ ಚಂದ್ರಶೇಖರ ತೋರಣಘಟ್ಟ

...ನವಲಗುಂದ ಕ್ಷೇತ್ರ


ಶಂಕರ ಪಾಟೀಲ್

...ಇತ್ತೀಚೆಗೆ ಬಿಜೆಪಿ ಸೇರಿದ ಬಸವ...ಜ್ ಬೊಮ್ಮಾಯಿಯ ಶಿಷ್ಯ ಶಂಕರ ...ಟೀಲ್ ಮುನೇಕೊಪ್ಪನಿಗೆ ಈ ಕ್ಷೇತ್ರದ ...ಜೆಪಿ ಟಿಕೆಟ್ ನೀಡುವ ಮೂಲಕ ...ಜಿ ಶಾಸಕ ಡಾ. ಶಿರಿಯಣ್ಣನವರ್ ...ವರನ್ನು ಮೂಲೆಗುಂಪು ಮಾಡಲಾಗಿದೆ. ...ನೇಕೊಪ್ಪನ ವಿರುದ್ಧ ಕಾಂಗ್ರೆಸ್‌ನಿಂದ ...ರುಬ ಸಮಾಜದ ಮಾಜಿ ಸಚಿವ ...ನ್ ಗಡ್ಡಿ ಹಾಗೂ ಜೆಡಿಎಸ್‌ನಿಂದ ...ವರಾಜ್ ಹೊರಟ್ಟಿ ಭಂಟ ರೆಡ್ಡಿ ಜನಾಂಗದ ಎನ್.ಎಚ್.ಕೋನರೆಡ್ಡಿ ...ಕ್ಕಿಳಿದಿದ್ದಾರೆ.

...ಕಳಸಾ ಬಂಡೂರಿ ನಾಲಾ ಹೋರಾಟದಲ್ಲಿ ಭಾಗಿಯಾಗಿದ್ದುದರಿಂದ ...ಕರ ಪಾಟೀಲ್ ಮುನೇಕೊಪ್ಪನಿಗೆ ರೈತರ ಅನುಕಂಪ ಒಂದಿಷ್ಟು ...ರೆಯುವುದಲ್ಲದೇ ಕ್ಷೇತ್ರದ ಪಂಚಮಸಾಲಿ ಮತಗಳಲ್ಲಿ ಸ್ವಲ್ಪ ಭಾಗ ...ನ ಪಾಲಾಗಲಿರುವುದು ಈತನಿಗೆ ಪ್ಲಸ್ ಪಾಯಿಂಟ್ ಆಗಲಿದೆ. ...ಎಸ್‌ನ ಎನ್.ಎಚ್.ಕೋನರೆಡ್ಡಿ ಕೂಡ ತನ್ನದೇ ಆದ ಓಟ್‌ಬ್ಯಾಂಕ್ ...ಹೊಂದಿರುವುದರಿಂದ ಇಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಪೈಪೋಟಿ ...ಯಲಿದೆ. ಇನ್ನು ಕಾಂಗ್ರೆಸ್‌ನ ಗಡ್ಡಿ ಯಾರ್‍ಯಾರ ಮತಗಳನ್ನು ಎಷ್ಟೆಷ್ಟು ...ಸುತ್ತಾರೆಂಬುದರ ಮೇಲೆ ಫಲಿತಾಂಶ ನಿರ್ಣಯವಾಗಲಿದೆ.

ಕುಂದಗೋಳ ಕ್ಷೇತ್ರ


...ವಳ್ಳಿ


ಈ ಕ್ಷೇತ್ರ ನಮ್ಮದು ಎಂದುಕೊಂಡು ತಿರುಗಾಡಿದ್ದ ಬಸವರಾಜ್ ಬೊಮ್ಮಾಯಿಯ ಭಂಟ ಮಾಜಿ ಶಾಸಕ ಎಂ.ಎಸ್. ಅಕ್ಕಿ ಹಾಗೂ ಬಿಜೆಪಿ ತಾಲ್ಲೂಕು ಅಧ್ಯಕ್ಷ ಎಂ.ಆರ್. ಪಾಟೀಲ್‌ಗೆ ಚೆಡ್ಡಿಗಳು ಗೇಟ್‌ಪಾಸ್ ಕೊಟ್ಟಿದ್ದರಿಂದ ಇವರೆಲ್ಲ ಈಗ ಹಾದಿಬೀದಿ ರಂಪ ಶುರುಹಚ್ಚಿಕೊಂಡಿದ್ದಾರೆ. ಸ್ಥಳೀಯ ಜೆಡಿಎಸ್ ನಾಯಕ ಕುರುಬ ಸಮಾಜದ ...ನ್.ಶ್ಯಾಗೋಟಿ ಪಕ್ಷ ತೊರೆದು ಪಕ್ಷೇತರರಾಗಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.


ಚಿಕ್ಕನ ಗೌಡ್ರ

...ಪಿ.ಸಿ.ಸಿದ್ಧನಗೌಡ್ರ ಹಾಗೂ ಎಸ್.ಐ. ಚಿಕ್ಕನ...ಡ್ರ ಎಂಬ ಪಂಚಮಸಾಲಿಗಳನ್ನು ಕೆಡವಲು ...ಎಸ್. ಶಿವಳ್ಳಿಗೆ ಕಾಂಗ್ರೆಸ್ ಟಿಕೆಟ್ ನೀಡಿ ತನ್ನ ...ತನ ಪ್ರದರ್ಶಿಸಿದೆ. ಈತ ಈ ಹಿಂದೆ ಅತ್ಯಂತ ...ಮೆ ಅಂತರದಲ್ಲಿ ಸೋತಿದ್ದ. ಇಲ್ಲಿ ಕಾಂಗ್ರೆಸ್, ...ಎಸ್ ಮತ್ತು ಬಿಜೆಪಿ ನಡುವೆ ತ್ರಿಕೋನ ...ರ್ ಏರ್ಪಡುವುದಾದರೂ ಅಂತಿಮವಾಗಿ ಕ್ಷೇತ್ರ ...ಗ್ರೆಸ್ ಪಾಲಾಗುವ ಲಕ್ಷಣಗಳೇ ಜಾಸ್ತಿ ಇವೆ.

ಸಿರಸಿ-ಸಿದ್ದಾಪುರ

...ಸಿರಸಿ-ಸಿದ್ದಾಪುರ ಕ್ಷೇತ್ರಕ್ಕೆ ನ್ಯಾಯವಾದಿ ಜನಪರ ಹೋರಾಟಗಾರ ...ಂದ್ರನಾಥ ನಾಯ್ಕ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣಾ ಕಣದಲ್ಲಿದ್ದಾರೆ. ...ರಿಗೆ ಬಿಜೆಪಿಯ ವಿಶ್ವೇಶ್ವರ ಹೆಗಡೆ ಕಾಗೇರಿ ನೇರ ಸ್ಪರ್ಧಿಯಾಗಿದ್ದಾರೆ. ...ಕೋಲಾ ಕ್ಷೇತ್ರದಿಂದ ಮೂರು ಬಾರಿ ಆಯ್ಕೆಯಾದ ಕಾಗೇರಿ ಅಲ್ಲಿ ...ವುದೇ ಜನಹಿತ ಕಾರ್ಯ ಮಾಡದೇ ಇಲ್ಲಿಗೆ ಈಗ ವಲಸೆ ಬಂದಿರುವುದು ...ರಿಗೆ ಚೆನ್ನಾಗಿ ಗೊತ್ತಿದೆ. ಹೀಗಾಗಿ, ಸಿರಸಿ ಕ್ಷೇತ್ರ ರವೀಂದ್ರ ನಾಯ್ಕರಿಗೆ ಸುಲಭವಾಗಿ ತುತ್ತಾಗುವ ಲಕ್ಷಣಗಳಿವೆ.


ರವೀಂದ್ರ ನಾಯ್ಕ

ಕಾಂಗ್ರೆಸ್‌ನ ರವೀಂದ್ರನಾಥ ನಾಯ್ಕ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪಕ್ಷದ ಪದಾಧಿಕಾರಿಯಾಗಿ ಸಾರಾಯಿ ವಿರೋಧಿ ಆಂದೋಲನ, ಅರಣ್ಯ ಅತಿಕ್ರಮಣ ಸಕ್ರಮ, ಬುಡಕಟ್ಟು ಜನಾಂಗದ ಅಭಿವೃದ್ಧಿ ಆಂದೋಲನ, ಹೀಗೆ ಕಳೆದು 25 ವರ್ಷಗಳಿಂದ ಜನಪರ ಹೋರಾಟಗಳನ್ನು ಮಾಡಿ ಹೆಸರುವಾಸಿಯಾದವರು. ಈ ಜನಪರ ವ್ಯಕ್ತಿಗೆ ಸಿರಸಿ ಭಾಗದ ಬ್ರಾಹ್ಮಣ ಸಮುದಾಯದವರೂ ...ಲ ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಬಿಜೆಪಿಯಿಂದ ಕಳೆದ ಬಾರಿ ಆಯ್ಕೆಯಾಗಿದ್ದ ...ಕ ಸಮುದಾಯದ ವಿವೇಕಾನಂದ ವೈದ್ಯ ಕೂಡ ರವೀಂದ್ರ ನಾಯ್ಕ...ಗೆ ಆಂತರಿಕ ಬೆಂಬಲ ವ್ಯಕ್ತಪಡಿಸಿರುವುದು ಅವರ ದಾರಿಯನ್ನು ...ಷ್ಟು ಸುಗಮಗೊಳಿಸಲಿದೆ.

...ಸಾರಾಯಿ ವಿರೋಧಿ ಆಂದೋಲನ ಸಂದರ್ಭದಲ್ಲಿ ಪೊಲೀಸರಿಂದ ...ಗೆ ಗುರಿಯಾಗಿದ್ದಲ್ಲದೆ, ಬೇರೆ ಬೇರೆ ಹೋರಾಟಗಳಲ್ಲಿ ಇವರ ಮೇಲೆ ...ಸುಗಳನ್ನು ದಾಖಲಿಸಿ ಅನವಶ್ಯಕ ತೊಂದರೆಗೆ ಗುರಿಮಾಡಿದ್ದು ಕೂಡ ...ಂದ್ರ ನಾಯ್ಕರ ಪರ ಅನುಕಂಪದಲೆ ಸೃಷ್ಟಿಯಾಗಲು ಕಾರಣವಾಗಿದೆ. ...ದರೊಂದಿಗೆ, ಬಿಜೆಪಿಯೊಳಗಿನ ತಿಕ್ಕಾಟವೂ ತಾರಕಕ್ಕೇರಿದ್ದು ಆ ಪಕ್ಷದ ...ರೇ ಕಾಗೇರಿಯನ್ನು ಸೋಲಿಸಲು ಹರಸಾಹಸ ಮಾಡುತ್ತಿದ್ದಾರೆ. ...ಸಂಸದ ಅನಂತಕುಮಾರ್ ಕೂಡ ಕೈಜೋಡಿಸಿರುವುದು ಕಾಗೇರಿಗೆ ...ಸ್ ಪಾಯಿಂಟಾಗಲಿದೆ. ಈ ಮಧ್ಯೆ ಬಿಜೆಪಿಯ ಸ್ಥಳೀಯ ನಾಯಕ ...ರ್ ಸಾರ್ವೇಕರ್ ಕೂಡ ಇತ್ತೀಚೆಗೆ ಕಾಂಗ್ರೆಸ್‌ಗೆ ಹಾರಿರುವುದು ...ಗೆ ಹೊಡೆತ ನೀಡಲಿದೆ.

■ ವರದಿಗಾರ

ಇಂತ ಯಲಕ್ಸನ್ನ ನಾನಿಲ್ಲಿಗಂಟ ನೋಡಲಿಲ್ಲ ಬುಡು

ಹೆಗ್ಗ ಮೂಗುದಾರ ಹರಿದುಕೊಂಡ ದನಗಳು ಯಾವ ಯಾವದೊ ಹೊಲಕ್ಕೆ ನುಗ್ಗಿ ಕಡೆಗೆ ಪಿಂಜರಾ ಪೋಲುಗಳಾದಂತೆ ಕಾಣತೊಡಗಿತು ಕಾಳಮಾವನಿಗೆ. ಅದೂ ಪೊಲೀಸರೆಲ್ಲಾ ಪಾರ್ಟಿಗಳನ್ನ ಸೇರಿ ರಾಜಕಾರಣಿಗಳ ವರಸೆಯಲ್ಲಿ ಮಾತನಾಡುತ್ತಿರುವುದನ್ನು ಉಗ್ರಿ ಬಾಯಿಂದಲೇ ಕೇಳಿದ ಕಾಳಮಾವ.

"ಆ ಪೊಲೀಸ್‌ನೋರಿಗೆ ರಾಜಕೀಯದಲ್ಲೇನು ಕೇವು?" ಎಂದ.

ಬೆಂಗಳೂರು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ರಾಜಕೀಯದಲ್ಲೇನು ಕೇವು ಅಂದ್ರೆ ಏನೇಳನಾ? ಯಮ್ಮೆಲ್ಲಗಳಾಗಿ ಮಂತ್ರಿಗಳಾಗನ ಅಂತ ಬತ್ತವೆ ಕಣಮಾವ."

"ಆ. ಇವುನೊಬ್ಬದ್ನಲ್ಲ ಯತ್ತಗೋದುನ್ನ ಉಗ್ರಿ?" ಎಂದ ಸೀರ.

"ಇವುನೊಬ್ಬ ಯತ್ತಗೋದ ಅಂದ್ರೆ ಏನೇಳನ? ಯಾರೂ ಅಂತ ಹೇಳೊ?"

"ಪೊಲೀಸ್ ಪ್ಯಾದೆ ಕ್ಯಲಸನೂ ಮಾಡಿಕಂಡು ಸಿನುಮನೂ ತಗಿತಿದ್ನಲ್ಲ ಅವುನು."

"ಓಹೊಹೊ ಅವುನು ಬಿ.ಸಿ. ಪಾಟೀಲ ಕಣ ಮಾವ. ಆ ಪ್ಯಾದೆ ಮುಂಡೆದು ಕಾಂಗ್ರೆಸ್ಸಿಗೋಗಿ ತಿಕೇಟು ತಗಂಡು ಕುದುರೆ ಮ್ಯಾಲೋಗಿ ನಾಮಪತ್ರ ಎಟ್ಟದನಂತೆ."

"ಕುದುರೆ ಮ್ಯಾಲ್ಯಾಕೋಗಿದ್ದಾ?"


"ಕಾರಲ್ಲೋದ್ರೆ ಸುದ್ದಿಯಾದತೇ? ಬೇಕಾದೋಟು ಕಾರಿದ್ರೂ ಕುದುರೆ ಮ್ಯಾಲೋದ್ರೆ ಅದು ಒಂದು ಸುದ್ದಿ ಆಯ್ತದೆ. ಟಿ.ವಿ. ಬದ್ಯೆತ್ತವ್ಯಲ್ಲ ಬಂದು ಅದೇ ದೇಸದ ದ್ವಡ್ಡ ಸುದ್ದಿ ಅನ್ನಂಗೆ ತೋರತವೆ. ಅದ್ಕೆ ಅವುನು ಮೂರನೆ ಮದಿವಾಯ್ತಾಯಿರೊ ಗಂಡು ಕತ್ತೆ ಮ್ಯಾಲೋದಂಗೆ ಕುದುರೆ ಮ್ಯಾಲೋಗಿದ್ನಂತೆ."

"ಅವುನು ಒಂಥರಾ ತಿಕ್ಲನೆಯ ಬುಡು."

"ತಿಕ್ಲನೆಯ. ಅವುನಾಕಾರ ನೋಡಿಕಂಡು ಸುಮ್ಮನೆ ಪೊಲೀಸ್ ಕ್ಯಲಸ ಮಾಡದು ಬುಟ್ಟು ಪೊಲೀಸ್ ಇಲಾಖೆಲಿ ಸಂಪಾದ್ನೆ ಮಾಡಿದ್ನಲ್ಲ ತಗಂಡೋಗಿ ಸಿನುಮಕ್ಕೆ ಸುರದನಂತೆ. ಸಿನಮ ತೋಪಾದೊ. ಸರಿ ಗತಿಗ್ಯಟ್ಟೋರಿಗ್ಯಲ್ಲ ರಾಜಕಾರಣನೆ ಅಲವೆ ಗತಿಕಾಣಸೋದು, ಅದ್ಕೆ ಅತ್ತಗೆ ರಾಜಕಾರಣಿ ಆಗಿಬುಟ್ಟ."

"ನಿಜ ಬುಡು. ಈಗ ಇಂಜಿನಿಯರ್ರಾಗಬೇಕಾದ್ರೆ ಓದಬೇಕು. ಅಂಗೆ ದಾಗುಟ್ರಾಬೇಕಾದ್ರು ಓದಬೇಕು. ಅದೇ ರಾಜಕಾರಣ ಮಾಡಕ್ಕೆ ಆಟೊಂತರ ಓದಬೇಕಾಗಿಲ್ಲ, ಯಾರಬೇಕಾದ್ರು ಬರುಬವುದು" ಎಂದ ಸೀರ.

"ಏ ರಾಜಕಾರಣಕ್ಕೆ ಬರಬೇಕಾದ್ರು ಓದಿರಬೇಕು ಕಣಮಾವ. ಓದಿರೋರು ಇದ್ದ ಕಾಲ್ದಲ್ಲಿ ವಿಧಾನಸಭೆ ಯಂಗೆ ನ್ಯಡಿತಿತ್ತು ಗೊತ್ತೆ? ಅದೇ ಈ ಕುಮಾರಸ್ವಾಮಿ ತರದವು ಯಾವತ್ತು ವಿಧಾನಸಭೆವಳಿಕೆ ಬಂದವ್ರೊ ಅವತ್ತಿಂದ ಬರೀ ಗಲಾಟ ನ್ಯಡಿತಾ ಅದೆ. ಅದ್ಕೆ ಯಾವತ್ತೂ ತಿಳಿವಳಿಕಸ್ಥರ ಆರಿಸಿ ಕಳುಸಬೇಕು ಕಣೊ."



"ಅದ್ಯಂಗೊತ್ತಾಗಬೇಕ್ಲ? ಬಿ.ಎ. ಯಮ್ಮೆ ಓದಿದ್ರೆ ತಿಳಕಬವುದು."

"ಡಿಗ್ರಿನ್ಯಲ್ಲ ಬುದ್ಧಿವಂತಕೆ ಅಂತ ತಿಳಕಬ್ಯಾಡ. ಬೇಕಾದಂಗೆ ಐಪಿಎಸ್ಸು ಎಲ್‌ಎಲ್‌ಬಿ ಮಾಡಿರೊ ಪೊಲೀಸ್ ಅಧಿಕಾರಿಗಳ್ಯಲ್ಲ ಬಜೆಪಿ ಸೇರ್‍ತ ಅವುರೆ."

"ಅದ್ಯಾರಪ್ಪ ಬಜೆಪಿ ಸೇರಿದೋರು?"

"ಸುಭಾಷ್ ಭರಣಿ ಅಂತ ವಬ್ಬ ಪೊಲೀಸಿದ್ನ ಕಣೆ."

"ಇದ್ದ ಅಂದ್ರೆ ಈಗಿಲವೇನ್ನ?"

"ಈಗ್ಲು ಅವುನೆ, ನಾಳಿಕ್ಯು ಇರತನೆ. ಮಾದೇಸ್ವರನ ಮ್ಯಾಲೆ ಪದಹೇಳಕ್ಕೆ ಸುರು ಮಾಡಿದ್ರೆ ಇನ್ನು ಹೇಳಪ್ಪ ಅನ್ನಂಗಾಡನು. ಅಂತ ಮನುಸ ಪೊಲೀಸ್ ಕಮೀಸರ್ ಕ್ಯಲಸ ಬುಟ್ಟು ಹೋಗಿ ಬಜೆಪಿ ಸೇರಿಕಂಡನಲ್ಲ ಹೇಳು."

"ಪದಗಿದ ಹಾಡ್ತನೆ ಅಂದ್ರೆ ಅದ ಬಜೆಪಿಗಳು ಕೇಳಿಕಂಡು ಮೆಚ್ಚಗಂಡ್ತೇನೊ ಬುಡ್ಯ ಹೋಗ್ಲಿ" ಎಂದ ಕಾಳಮಾವ.

"ಅಂಗೆ ಹೋಗ್ಲಿ ಅನ್ನಕ್ಕೆ ಬರದಿಲ್ಲ ಕಣಮಾವ. ಬಜೆಪಿಗಳು ಮಾಡೋ ರಾಜಕಾರಣವ ಮನಿಸಿಗಿಡೆಯಂಗೇಳನು. ಯಾರು ಇಲ್ದಾಗ ಬೈಯನು. ಆದರೆ ಅಲ್ಲಿಗೋಗಿ ತಿಕೇಟ್ ತಗಂಡು ನಿಂತೆಬುಡದೇನೊ ಮಾವ?"

"ಎಲ್ಲಿ ನಿಂತಿದ್ದನ್ಲ?" ಎಂದಳು ಜುಮ್ಮಿ ಕುತೂಹಲದಿಂದ.


"ನಮ್ಮ ದಾಗುಟ್ರು ಮಾದೇವಪ್ಪನೆದ್ರಿಗೆ ನಿಂತವ್ರನೆ ಕಣೆ."

"ಅದ್ಯಾಕ್ ನಮ್ಮ ದಾಗುಟ್ರು ಅಂತೀ?"

"ಒಂದು ಸತಿಯಾ ಪಂಚಾತಿ ಮೆಂಬ್ರನ್ಯಲ್ಲ ಯಗಡೆ ಸಭೆ ಸೇರಿಸಿದ್ನಲ್ಲಾ? ಆಗ ನೀನು ಹೋಗಿದ್ದೆ ಗೊತ್ತೆ?"

ಲಕ್ಷ್ಮಿ ಸರಸ್ವತಿಯರಿಗೂ ದೋಷ ಉಂಟಾ

ದೇವಲೋಕ ಅಲ್ಲೋಲಕಲ್ಲೋಲ ಆಗಿತ್ತು. ಎಲ್ಲರ ಮುಖದ ಮೇಲೂ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡ ಅಭ್ಯರ್ಥಿಯ ಕಳೆ ರಾರಾಜಿಸುತ್ತಿತ್ತು. ದ್ವೇಷದ ಹೊಗೆ ಸುಳಿದಾಡುತ್ತಿತ್ತು. ಹೀಗೆ ಆಗಬೇಕಾದ್ದೆ. ದೇಶದ ಸಂವಿಧಾನ ಜಾತ್ಯತೀತ ಇರಬಹುದು. ಅಧಿಕಾರಕ್ಕೆ ಯಾವುದೇ ಪಕ್ಷ ಬರಲಿ. ಪೂಜೆ ಪುನಸ್ಕಾರಗಳನ್ನು ಭಯಭಕ್ತಿಗಳಿಂದ ಆಚರಿಸುತ್ತಿದ್ದರು. ಪ್ರತಿ ಕಚೇರಿಯಲ್ಲೂ ಶುಕ್ರವಾರದ ಪೂಜೆ ಸಾಂಗವಾಗಿ ನೆರವೇರುತ್ತಿತ್ತು. ಬರಗಾಲ ಬಂದರೆ ಮಳೆ ಬರಿಸಪ್ಪ ತಂದೆ ಅಂತ ಬೇಡುತ್ತಿದ್ದರು. ನೆರೆ ಬಂದರೆ ಇದ ತಪ್ಪಿಸು ಸ್ವಾಮಿ ಎಂದು ಬೇಡುತ್ತಿದ್ದರು. ಸಮೃದ್ಧಿಯಾಗಿ ಮಳೆ ಬಿದ್ದು ಬೆಳೆ ಬಂದರೆ ದೇವಾ ಹೀಗೇ ಸದಾಕಾಲ ಮಾಡು ಪ್ರಭು ಅಂತ ಪ್ರಾಂಜಲ ಮನಸ್ಸಿನಿಂದ ಪ್ರಾರ್ಥಿಸುತ್ತಿದ್ದರು. ಒಟ್ಟನಲ್ಲಿ ದೇವಲೋಕವಾದ ದೇವಲೋಕವೆಲ್ಲ ತೃಪ್ತಿ ಸಮಾಧಾನದಿಂದ ಸಂಭ್ರಮಿಸುತ್ತಿತ್ತು. ಈಗ ನೋಡಿದರೆ ದೇವರ ದರ್ಶನವೇ ಅಪಶಕುನವಾದಂತಿದೆ! ಇಂತಹ ದೈವ ಕಂಟಕ ಕೃತ್ಯಕ್ಕೆ ಮುಂದಾಗಿರುವುದು ಚುನಾವಣಾ ನೀತಿ ಸಂಹಿತೆ ಎಂಬ ಅಧಾರ್ಮಿಕ, ಅನೀತಿಯುತ ಸಂಹಿತೆ!



ಹಿಂದೂ ಧಾರ್ಮಿಕ ಸಂಪ್ರದಾಯದಂತೆ ಮಹಿಳೆಯರನ್ನು ಒಂದೆಡೆ ಸೇರಿಸಿ 'ಮಾತೃ ಸಂಗಮ' ಮಾಡಿ ಅರಿಶಿನ, ಕುಂಕುಮ, ಬಳೆ (ಮಾತೃ ಹೃದಯ ತೃಪ್ತಿ ಹೊಂದಬೇಕಲ್ಲಾ... ಚಿನ್ನದ್ದನ್ನೇ ನೀಡಿ) ರವಿಕೆ ಕಣ ಮೊದಲಾದವುಗಳನ್ನು ವಿಳ್ಳೇದೆಲೆಯ ಜೊತೆ ಬೆಳ್ಳಿತಟ್ಟೆಯಲ್ಲಿಟ್ಟು ಕೊಡುವುದಕ್ಕೆ ದೈವದ್ರೋಹಿ ನೀತಿಸಂಹಿತೆಯ ಅಡ್ಡಿ! ಹಾಗೆ ನೀಡುವುದು ನೀತಿ ಸಂಹಿತೆಯ ಉಲ್ಲಂಘನೆ ಅಂತೆ! ಮಕ್ಕಳ ಮುಖದ ಮೇಲೆ ಮಂದಹಾಸ ಮೂಡಿಸಲು ಒಂದೆರಡು ಹಸಿರು ನೋಟು ಇರುವ ಪುಸ್ತಕ ನೀಡಿದರೆ ಅದೂ ನೀತಿಸಂಹಿತೆ ಉಲ್ಲಂಘನೆ ಆಗುತ್ತದಂತೆ! ಲಕ್ಷ್ಮಿ ಸರಸ್ವತಿಯರಿಗೂ ದೋಷ ಉಂಟಾ ಅಂತ. ದೇವರದರ್ಶನ ಮಾಡಿಸೋಣ ಅಂತ ಯಾತ್ರೆಗೆ ಕರೆದುಕೊಂಡು ಹೋದರೂ ಹಾಳಾದ ನೀತಿಸಂಹಿತೆ ಮೀರಿದ ನಡವಳಿಕೆ ಅಂತೆ! ಹೀಗೆ ಯಾವುದೇ ದೈವಕಾರ್ಯ ನಡೆಸಲು ನೀತಿಸಂಹಿತೆ ಎಂಬ ಗುಮ್ಮನ್ನ ಮುಂದೆ ಇಡುತ್ತಾರೆ.

ಮೊನ್ನೆ ಮೊನ್ನೆ ಮೈಸೂರಿನಲ್ಲಿ ನಡೆದದ್ದು ನೋಡಿ. ಮಣಿವಣ್ಣನ್ ಅನ್ನುವ ತಿಕ್ಕಲು ಆಸಾಮಿ ಅಲ್ಲಿನ ಚುನಾವಣಾಧಿಕಾರಿಯಂತೆ. ಪ್ರತಿದಿನ ಸಂಜೆ ಆತ ಏನೋ ಪತ್ರಿಕಾ ವರದಿ ನೀಡುತ್ತಾನಂತೆ. ಎಂದಿನಂತೆ ಅವತ್ತೂ ಬಂದನಂತೆ. ಪತ್ರಿಕಾ ವರದಿಗಾರರೂ ಬಂದಿದ್ದರಂತೆ. ಇನ್ನೊಂದು ದೈವಿಕ ವಿಶೇಷನೂ ಅಲ್ಲಿತ್ತಂತೆ. ಆತ ಕುಳಿತುಕೊಳ್ಳುವ ಕುರ್ಚಿ ಹಿಂಭಾಗದಲ್ಲಿ ದೇವರ ಫೋಟೋ ಇತ್ತಂತೆ. ಎಲ್ಲ ಕಾರ್ಯಗಳೂ ಸುಗಮವಾಗಿ ನೆರವೇರಲಿ ಅಂತ ಹಾಗೆ ಯಾರೋ ದೈವಭಕ್ತರು ಹಾಗೆ ಮಾಡಿದ್ದರಂತೆ. ಮೊಸರಲ್ಲೂ ಕಲ್ಲು ಕಂಡನಂತೆ ಈ ತಿಕ್ಕಲ. ಅದನ್ನ ನೋಡಿದ ತಕ್ಷಣ ಕೆಂಡಾಮಂಡಲ ಆದನಂತೆ ಈ ದಾನವ. 'ಸರ್ಕಾರಿ ಕಚೇರಿ ಅಂದರೆ ಧರ್ಮಾತೀತ ಆಗಿರಬೇಕು. ಇಲ್ಲಿ ಯಾವ ದೇವರಿಗೂ ಸ್ಥಾನ ಇಲ್ಲ' ಅಂತ ಹಾರಾಡಿದ ನಂತೆ! 'ಇದನ್ನು ತೆಗೆದುಹಾಕಿ' ಅಂತಾನೂ ಆಜ್ಞೆ ಮಾಡಿದನಂತೆ ಆ ರಾಕ್ಷಸ ವಂಶಜ. ದೈವಭೀರು ಸಹಾಯಕ ಓಡೋಡಿ ಬಂದು ದೇವರ ಫೋಟೋವನ್ನು ಪೇಪರಿನಿಂದ ಮುಚ್ಚಿದನಂತೆ. ಅವಮಾನ ಆದಾಗ ಹುಲುಮಾನವರು ಟವಲ್ಲಿನಿಂದ ಮುಖ ಮುಚ್ಚಿಕೊಳ್ತಾ ರಲ್ಲ ಅದನ್ನ ನೆನಪಿಗೆ ತರುವಂತಿತ್ತಂತೆ ಅದು!

ನೀತಿಸಂಹಿತೆ ಹೆಸರಿನಲ್ಲಿ ಶಿಷ್ಟ ದೇವತೆಗಳಿಗೆ ಭೂಲೋಕದಲ್ಲಿ ಆದ ಈ ಅವಮಾನವನ್ನು ಹೇಗಾದರೂ ನುಂಗುತ್ತಿದ್ದರೋ ಏನೋ. ಆದರೆ ದೇವಲೋಕದಲ್ಲಿ ಇದುವರೆವಿಗೂ ಗಣನೆಗೇ ಬಾರದಿದ್ದ ಕ್ಷುದ್ರ ದೇವತೆಗಳ ಅಟ್ಟಹಾಸ ಎಲ್ಲೆ ಮೀರಿತ್ತು. ಇದಕ್ಕೆ ಕಾರಣ ಇಲ್ಲದಿರಲಿಲ್ಲ. ಪಾಳುಬಿದ್ದಿದ್ದ ಅವುಗಳ ಗುಡಿಗಳು ಸುಣ್ಣಬಣ್ಣ ಬಳಿದುಕೊಂಡು ಲಕಲಕಿಸುತ್ತಿದ್ದವು. ಒಮ್ಮೆಯೂ ಪೂಜೆ ಕಾಣದ ಅವಕ್ಕೆ ದಿನಕ್ಕೆ ಮೂರು ನಾಲ್ಕು ಸಲ ಕಾಣುವ ಸಂಭ್ರಮ. ಚುನಾವಣಾ ಅಭ್ಯರ್ಥಿಗಳು ಬಂದಾಗಲೆಲ್ಲ ಪೂಜೆ! ಇದರೊಂದಿಗೆ ಊರಹಬ್ಬ! ಕೋಣ, ಕುರಿ, ಕೋಳಿಗಳ ಚೆಲ್ಲಾಟ! ದೇವಸ್ಥಾನ, ಹಬ್ಬದ ವೈಭವೀಕರಣಕ್ಕೆ ಅಭ್ಯರ್ಥಿಗಳಿಂದ ಕೊಡುಗೈ ಕೊಡುಗೆ! ಪೂಜೆ, ಬಲಿಯಿಂದ ತೃಪ್ತಿಯಾದ ಕ್ಷುದ್ರ ದೇವತೆಗಳ ಕೂಗು ಕೇಕೆ ರಾಕ್ಷಸರ ನೆನಪು ತಂದು ಶಿಷ್ಟ ದೇವತೆಗಳು ಕಂಗಾಲಾದರು.

ಅಲ್ಪನಿಗೆ ಬಂದ ಐಶ್ವರ್ಯ ಎಂಬುದಾಗಿ ತಳ್ಳಿಹಾಕುವಂತಿರಲಿಲ್ಲ. ಯಾಕೆಂದರೆ ಅಭ್ಯರ್ಥಿಗಳೂ ಇಂತಹವರೇ ತಾನೆ. ಪ್ರಚಾರಕ್ಕೆ ಬಂದಾಗ ಅವರಿಗೆ ಭವ್ಯ ಸ್ವಾಗತ ಕೋರುತ್ತಿದ್ದರು. ಆರತಿ ಎತ್ತಲೂ ಪೈಪೋಟಿ. ಆ ಮನೆಯವರು ಎತ್ತಿದರು, ಈ ಮನೆಯವರಿಗೆ ಆದ್ಯತೆ ನೀಡಿದರು ಎಂಬ ಒಳಗಿನ ಮುನಿಸು ಊರನ್ನೇ ಇಬ್ಭಾಗ ಮಾಡಬಹುದು ಎಂದು ತಿಳಿದಾಗ ಹಿರಿಯರು ಸಾಮಾಜಿಕ ನ್ಯಾಯವನ್ನು ಜಾರಿಗೆ ತಂದರು. ಅದು ಎಂತಹಪ್ಪಾ ಅಂದರೆ ಊರಿನ ಪ್ರತಿ ಮನೆಯವರೂ ಅಭ್ಯರ್ಥಿಗೆ ಆರತಿ ಎತ್ತಬೇಕು; ಹಿಂದೂ ಸಂಪ್ರದಾಯದಂತೆ ಆರತಿ ತಟ್ಟೆಗೆ ಅಭ್ಯರ್ಥಿಯಿಂದ ಬಿದ್ದ ಹಣವನ್ನು (ಇಲ್ಲಿ ಸಮಾಜವಾದವನ್ನು ಕಾಣಬಹುದಾಗಿತ್ತು. ಹಿಂದಿನ ಅಭ್ಯರ್ಥಿಗಿಂತ ಈಗಿನವ ಕಡಿಮೆ ಹಣ ಹಾಕಿದರೆ ಅವರು ಎಷ್ಟು ಹಾಕಿದ್ದರು ಎಂಬುದನ್ನು ನೆನಪು ಮಾಡಲಾಗುತ್ತಿತ್ತು. ಹೆಚ್ಚು ಹಣ ಹಾಕಿದರೆ ಶಿಷ್ಟಾಚಾರ ನೋಡಿ, ಸುಮ್ಮನಾಗುತ್ತಿದ್ದರು!) ಒಟ್ಟುಗೂಡಿಸಿ ಊರಿನ ಎಲ್ಲರೂ ಸಮವಾಗಿ ಹಂಚಿಕೊಳ್ಳುತ್ತಿದ್ದರು. ಹರಕಲು ಸೀರೆ ಉಟ್ಟು ಆರತಿ ಬೆಳಗಿದವಳಿಗೂ ಒಂದೇ ಬೆಲೆ, ದೊಡ್ಡ ಸೀರೆ ಉಟ್ಟವಳಿಗೂ ಒಂದೇ ಬೆಲೆಯೆ ಎನ್ನುವ ತಕರಾರನ್ನು ಯಾರೂ ಎತ್ತುವಂತಿಲ್ಲ. ಆದರೆ ಕಷ್ಟಪಟ್ಟು ಆರತಿ ಎತ್ತಿದೋರು ನಾವು ಈ ಗಂಡಸರಿಗ್ಯಾಕೆ ಕೊಡಬೇಕು ಅನ್ನುವ ಗುಸುಗುಸು ಅಲ್ಲಿ ಇಲ್ಲಿ ಕೇಳಿಬಂದಿತಾದರೂ 'ಸ್ತ್ರೀಶಕ್ತಿ' ಗುಂಪಿಗೆ ಅಂತ ಕೊಟ್ಟವರಲ್ಲ ಅದರಲ್ಲೂ ಪಾಲು ಕೊಡಿ ಅಂತ ಗಂಡಸರು ಅಮರಿಕೊಂಡಾರು ಎಂದೋ ಏನೋ ಅದನ್ನು ದೊಡ್ಡದು ಮಾಡಲು ಹೋಗಿರುವುದು ಕಂಡುಬಂದಿಲ್ಲ.

ಇದು ಒಂದು ಕಡೆ ಆದರೆ ಪುರುಷರ ರೀತೀನೇ ಬೇರೆ. ಮತಯಾಚಿಸಿ ಹಳ್ಳಿಗೆ ಬಂದವರನ್ನ 'ಈ ಉರಿಯೋ ಬಿಸಿಲಿನಲ್ಲಿ ಯಾಕಣ್ಣ ಮಾತು. ನದಿ ಗುಡೀಲಿ ಕುಂತು ಮುಗಿಸಾನ' ಎಂದು ಹೇಳಿ ಅಲ್ಲಿಗೆ ಕರೆದೊಯ್ಯುತ್ತಿದ್ದರು. ದೇವರ ಮುಂದೆ 'ಯವಾರ' ಕುದುರಿದ ಮೇಲೆ 'ನಿನಿಗ್ಯಾಕಣ್ಣ... ಅದೇನ್ ಕೆಲ್ಸ ನೋಡು ಹೋಗು. ನಮ್ಮೂರ ಮರ್‍ತು ಬುಡು' ಎಂಬ ಆಶ್ವಾಸನೆಯೊಡನೆ ಸಾಗಾಕುತ್ತಿದ್ದರು.

ಅಣಕ

ಎಚ್.ಎಲ್. ಕೇಶವಮೂರ್ತಿ

ಇದೆಲ್ಲದರ ಪರಿಣಾಮವಾಗಿ ಕ್ಷುದ್ರ ದೇವತೆಗಳಿಗೇ ಗ್ರಾಮದ ಎಲ್ಲರೂ ನಡೆದುಕೊಳ್ಳುವಂತಾದರೇನು ಗತಿ ಎಂದು ದೇವಲೋಕದವರು ತಳಮಳಕ್ಕೊಳಗಾಗಿದ್ದರು.

ಭಕ್ತರೇ ಇಲ್ಲದ ದೇವರಾಗಬೇಕಾದ ಕಾಲ ದೂರ ಇಲ್ಲ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು.

ದೇವತೆಗಳು ಈ ರೀತಿಯಾಗಿ ಪರಿತಪಿಸುತ್ತಿರುವಾಗ ಭೂಲೋಕದಲ್ಲಿ ಅವರ ಏಜೆಂಟರುಗಳ ಭಂಡಾರ ತುಂಬಿ ತುಳುಕುತ್ತಿತ್ತು! ಪಕ್ಷ, ಧರ್ಮ, ಜಾತಿ ಭೇದ ಮರೆತು ಸಕಲೆಂಟು ಅಭ್ಯರ್ಥಿಗಳು ಮಠಾಧೀಶರ ಆಶೀರ್ವಚನ ಕೋರಿ ದಾಳಿ ಇಡಲಾರಂಭಿಸಿದರು. ಶಕ್ತ್ಯಾನುಸಾರ 'ಕಾಣಿಕೆ' ಪಡೆದ ನಂತರ ಅವರಿಗೆ ಘನವಾದ ಆಶೀರ್ವಾದ ನೀಡುತ್ತಿದ್ದರು. ಆನಂತರದಲ್ಲಿ ಸರ್ವಸಂಗ ಪರಿತ್ಯಾಗಿಗಳಾದ ಸ್ವಾಮಿಗಳಿಗೆ ತಮ್ಮ ಮತಸ್ಥನಿಗೇ ಮತ ನೀಡಿ ಗೆಲ್ಲಿಸಬೇಕೆಂಬ ದೈವಪ್ರೇರಣೆಯಾಗುತ್ತಿತ್ತು. ಈ ದೈವಾಜ್ಞೆಯನ್ನು ಗುಟ್ಟಾಗಿ ತಮ್ಮ ಭಕ್ತರಿಗೆ ರವಾನಿಸುತ್ತಿದ್ದರು. ಶಿಷ್ಟದೇವತೆಗಳಿಂದಲೂ ಸಾಧ್ಯವಾಗದ ಕೆಲಸವನ್ನು ಅವರ ಏಜೆಂಟರು ಮಾಡುತ್ತಿರುವುದೇ ಕೊಂಚ ಸಮಾಧಾನ!

"ಊ ಹೋಗಿದ್ವೆ. ಆಗ ಪಟೇಲು, ಇದ್ರು, ದೇವಪ್ಪನೂ ಸಿಕ್ಕಿದ್ನ."

"ಆ ಮಾದೇವಪ್ಪ ನಿನ್ನನ್ನೆ ಭಾಳವೊತ್ತು ನೋಡಿ. ಬಂದು, ನನಗೆ ನಿಮ್ಮ ತರ ಬೋಲ್ಡಾಗಿರೊ ಬುಡ್ರು ತುಂಬಾ ಇಷ್ಟ ಅಂದಿದ್ನ ಗೊತ್ತೆ?"

"ಊ ಕಂಡ್ನ. ಚನ್ನಾಗಿ ಮಾತಾಡುಸ್ತನವ್ರುನು."

"ಆಗೊ, ನೋಡವ್ರನೆದ್ರಿಗೆ ನಿಂತವ್ನೆ ಈ ಸುಣಕಾಯಿ ."

"ಮಾದೇವಪ್ಪ ಗೆಲ್ತನೆ ಬುಡು."

"ಅದ್ಯಂಗೇಳ್ತಿಯೆ?"

"ವಳ್ಳೆ ಮನ್ಸ, ಚನ್ನಾಗಿ ಭಾಸಣ ಮಾಡ್ತನೆ" ಎಂದು ಮಾದೇವಪ್ಪನ ರಿಜಲ್ಟನ್ನೆ ಹೇಳಿಬಿಟ್ಟಳು.

"ಈ ಸಿದರಾಮಯ್ಯನೆದ್ರಿಗೂ ವಬ್ಬ ಪೊಲೀಸ್ ದ್ವನಂತೆ, ಯಾರ್ಲ?"

"ಅವುರು ರೇವಣಸಿದ್ದಯ್ಯನೋರು ಕಣಮಾವ. ಪಾಪ ಮುಂಡೇಶ್ವರಿ ಚುನಾವಣೆಲಿ ಸಿದರಾಮಯ್ಯನಿಗೆ ಹಗಲು ಕೈಲಸ ಮಾಡಿದ್ರಂತೆ. ಅಂತಾ ಮನುಸುನಿಗೆ ಈ ಗ್ರೆಸ್ ಬದ್ಲೆತ್ತವು ತಿಕೀಟು ಕೊಡದು ಬ್ಯಾಡವೆ? ಅದಕೆ ರು ಬೇಜಾರಾಗಿ ಬಿಜೆಪಿ ಸೇರಿದರಂತೆ."

"ಜ್ವತೆಲಿ ಯಲಕ್ಸನ್ ಮಾಡಿದೋರು ಎದುರಾಬದುರಾ ಭಾಸಣ ಮಾಡದ್ಯಂಗೇ ಅಂತ?" ಎಂದ ಸೀರ.

"ಭಾಸಣ ಮಾಡದು ಅಂದ್ರೆ ಬೋದಾಡದು ಮುಕಂಡೇನೊ ನೀನು? ಸಿದರಾಮಯ್ಯ, ದ್ಯಾವೇಗೌಡ್ರ ಳು ಬೈತನೆ. ರೇವಣಸಿದ್ದಯ್ಯ ನನಿಗೆ ಓಟು ಕೊಡಿ ತನೆ, ಅಷ್ಟೆಯಾ"

"ಓ ಅಂಗೋ. ಅಂಗಾದ್ರದು ವಳ್ಳೆ ಇದೆ ಬುಡು, ಲಕ್ಷನ್ ತಣ್ಣಗೆ ನ್ಯಡಿತದೆ."

"ಮ್ಯಾಲೆ ತಣ್ಣಗಿದ್ರು ವಳಗೆ ಕಾದುಬುಟ್ಟದೆ ಬಿಗಪ್ಪ" ಎಂದು ವಾಟಿಸ್ಸೆ ಹಾಜರಾದ.

"ಅಂಗೆ ಕಾಣದೇಯಿಲವಲ್ಲಾ?"

"ಕಾಣದಿಲ್ಲ, ಯಾಕೆ ಕಾಣದಿಲ್ಲ ಅಂದ್ರೆ ಚುನಾವಣೆ ಮಾಡೋ ಕಮೀಷನರ್ ಅಂಥೋರು ಬಂದವ್ರುರೆ, ನಾನು ಇಲ್ಲಿವರಿಗೂ ಇಂತ ಯಲಕ್ಸನ್ ನೋಡಿರಲಿಲ್ಲ."

"ನಿಜ ಬುಡೊ, ಒಂದು ಪೋಸ್ಟರಿಲ್ಲ, ಒಂದು ಕಟೌಟಿಲ್ಲ ಹತ್ತು ಮಾರಿಗೊಂದು ಪಾರ್ಟಿ ಆಫೀಸಿಲ್ಲ, ಅಂತು ತಣ್ಣಗೆ ನ್ಯಡಿತಾ ಅದಪ್ಪ" ಎಂದ ಉಗ್ರಿ.

"ಮದ್ಲಿಗೆ ಅಂಗೇ ಅಲವೇನ್ಲ ನ್ಯಡಿತಿದ್ದುದು. ಹೆಚಟ ಕಿಸ್ಲಪ್ಪಾರು ಬಂದ್ರು. ಹೋಬಳಿಗೊಂದು ಕಾರು ಬುಡೋರು. ಇವುರುದೊಂದು ಕಾರು ಅಷ್ಟೆಯಾ. ಯಲಕ್ಷನ್ ನ್ಯಡದೋಗವು. ಅದೇ ಚಂದ ಕಂಡ್ರ" ಎಂದ ಕಾಳಮಾವ.

"ಈಗ್ಲು ಅಂಗೆ ಆಗ್ಯದೆ ದ್ವಡಪ್ಪ, ಅಂತು ಕೋಟ್ಯಾಂತ್ರಪಾಯಿ ಕೈಲಿಟಗಂಡು, ಊರುತುಂಬ ಪ್ಲೆಕ್ಸಾಕಿ, ವೈಕಾಕಿ, ಊರು ಸುತ್ತು ಟಾಟಾ ಸುಮೋದಲ್ಲಿ ಕಾರ್ಯಕರ್ತರ ಓಡಿಸ್ಯಾಡನ ಅಂತ ಇದ್ದೊರಿಗ್ಯಲ್ಲ ಯಲಕ್ಷನ್ ಕಮೀಶನ್ರು ಸರಿಯಾಗಿ ಮಾಡಿದ್ರು."

"ಸರಿಯಾಗಿ ಮಾಡದೇನೊ? ಅಂತ ದೇವೇಗೌಡ್ರೆ ಯಲಕ್ಷನ್ ಕಮೀಷನ್‌ರಿಗೆ ಪೋನು ಮಾಡಿ ನಾನು ಯಾವಾಗ ಅಂದ್ರಾವಾಗ ಮೂತ್ರ ಮಾಡಬೇಕು. ನನ್ನನ್ನು ತಡಿಬ್ಯಾಡಿ ಅಂದವುರಂತೆ?"

"ನಿಜವೇನ್ಲ?"

"ಊಕಣೆ. ಬೇಕಾದ್ರೆ ಈ ವಾಟಿಸ್ಸನೆ ಕೇಳು."

"ಸುಳ್ಳು ಕಣಕ್ಕ. ಅಂದ್ರೆ ದೇವೇಗೌಡ್ರು ಹೇಳಿರೊ ಕಾರಣ ಸುಳ್ಳು. ಅಧಿಕಾರಿಗಳ ಸಿಂಪಥಿಗಳಸಕ್ಕೆ ಅಂಗಂದ ವ್ರನೆ."

"ಅಂಗಂತಿಯಾ?"

"ಗಾಡಪ್ರಾಮಿಸ್ಸು!" ■

* * * *

'ಈಶ್ವರ ಅಲ್ಲಾ ತೇರೇ ನಾಮ್

ಸಬಕೋ ಸನ್ಮತಿ ದೇ ಭಗವಾನ್'

ಗಾಂಧೀಜಿಯವರ ತಾರಕ ಮಂತ್ರ.

ಅಧಿಕಾರಕ್ಕಾಗಿ ಎಂದೂ ಆಸೆ ಪಟ್ಟವರಲ್ಲ. ದೇಶಕ್ಕೆ ಂತ್ರ್ಯ ಬಂದ ದಿನ ಅವರ ಶಿಷ್ಯರು ಅಧಿಕಾರದ ಪ್ರಮದಲ್ಲಿದ್ದರೆ ಗಾಂಧಿ ನೌಕಾಲಿಯಲ್ಲಿ ನೊಂದವರ ಮಾಡುತ್ತಿದ್ದರು; ಸಾಂತ್ವನ ಹೇಳುತ್ತಿದ್ದರು.

ಏನು ಮಾಡುತ್ತಿದ್ದಾರೆ ಅವರ ಶಿಷ್ಯರು?

ಗಾಂಧಿ ಭವನ ಕಟ್ಟಿಸುತ್ತಾರೆ. ಸ್ವಾತಂತ್ರ್ಯ ಹೋರಾಟದ ಅದರಲ್ಲಿಡುತ್ತಾರೆ. ಗಾಂಧಿಯ ಬಗೆಗಿನ ಸಾಹಿತ್ಯ ಪ್ರಕಟಿಸಿಡುತ್ತಾರೆ. ಬಾಯಲ್ಲಿ ಸದಾ ಗಾಂಧಿ ಮಂತ್ರ ಸುತ್ತಾರೆ. ಸಕ್ರಿಯ ರಾಜಕೀಯದಿಂದ ನಿವೃತ್ತಿ ಘೋಷಿಸುತ್ತಾರೆ.

ಎಲ್ಲಿಯವರೆವಿಗೆ ಈ ಸನ್ಯಾಸತ್ವ?

ಚುನಾವಣೆಗಳು ಬರುವವರೆವಿಗೆ!

ಮಗನಿಗೋ, ಮೊಮ್ಮಗನಿಗೋ ಪಕ್ಷದಿಂದ ಟಿಕೆಟ್ ಯಾಚಿಸುತ್ತಾರೆ.

ನೀಡಬೇಡವೇ ಹಾಳಾದ ಪಕ್ಷ?

ಉಹುಂ, ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತೆ.

ಏನು ಮಾಡಬೇಕು ಈ ಗಾಂಧಿವಾದಿಗಳು?

ಭ್ರಷ್ಟರು, ವಂಚಕರು, ದರೋಡೆಕೋರರು ಇನ್ನು ತಾಗಿ ಪುಷ್ಪಾರ್ಚನೆ. ಅಷ್ಟಕ್ಕೇ ನಿಲ್ಲುವುದಿಲ್ಲ. ರಿಸಬೇಡವೇ ತಮ್ಮ ಶಕ್ತಿ? ಹಾರುತ್ತಾರೆ-ಗಾಂಧಿ ದ ಪಕ್ಷಕ್ಕೆ!

ಇಂತಹ ಮಂಡ್ಯದ ಮಾದೇಗೌಡರು ಎಲ್ಲೆಡೆ ದ್ದಾರೆ!

ಆಶ್ಚರ್ಯ ಅಂದರೆ 'ಬೇರೆ ಪಕ್ಷಗಳಿಗಿಂತ ಭಿನ್ನ', ಸಿದ್ಧಾಂತಗಳ ಪಕ್ಷ' ಎಂದೆಲ್ಲ ಬೊಂಬಡ ಯುವ ಭಾರತೀಯ ಜನತಾ ಪಕ್ಷಕ್ಕೆ ಇಂತಹವರೇ ರ್ಶ!

ಭಾಜಪ ಒಂದು ಜಾತಿಯ ಪಕ್ಷ ಅನ್ನುವ ದೆಯಲ್ಲ' ಎಂಬ ವರದಿಗಾರನೊಬ್ಬನ ಪ್ರಶ್ನೆಗೆ ಮಂತ್ರಿ ಕನಸು ಕಾಣುತ್ತಿರುವ ಯಡಿಯೂರಪ್ಪ ಗ್ಗೇನು? 'ಇದೆಲ್ಲ ಸುಳ್ಳು' ಇದಕ್ಕೆ ಪುರಾವೆ ಬೇಕಲ್ಲ? ಕೊಟ್ಟ ಉದಾಹರಣೆಗಳು ಮಂಡ್ಯದ ದೇಗೌಡರು, ಹಾಸನದ ಜಿ.ಟಿ. ದೇವೇಗೌಡರು!

ಮಾದೇಗೌಡರಿಗೆ ಇಂತಹ ಹೀನಾಯಸ್ಥಿತಿ ಬರಬಾರದಿತ್ತು! ಇತಿಹಾಸದ ಕ್ರೂರ ವ್ಯಂಗ್ಯ ಅಂದರೆ ಇದೇ ಇರಬೇಕು!

* * * *

ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇಲ್ಲ!

ಯಾಕೆ ಇಲ್ಲ?

ತಂದೆ ಮಗ ಇಬ್ಬರಿಗೂ ಪಕ್ಷದ ಟಿಕೆಟ್ ನೀಡಬಾರದೆಂಬ ನಿರ್ಬಂಧ. ತಂದೆ ಶ್ಯಾಮನೂರು ಶಿವಶಂಕರಪ್ಪ ಅವರಿಗೆ ಪಕ್ಷದ ಸೀಟು ದೊರಕಿದೆ. ಮಗ ಮಲ್ಲಿಕಾರ್ಜುನಗೆ ಇಲ್ಲ.

ಇದು ನ್ಯಾಯ. ಆದರೆ ಹಣಬಲ, ಬಾಹುಬಲ ಇದಕ್ಕೆ ಒಪ್ಪದು. ಹೆಲಿಕಾಪ್ಟರ್‌ನಲ್ಲಿ ಸೈಯದ್ ಸೈಫುಲ್ಲಾಗೆ ಬಂತು 'ಬಿ' ಫಾರಂ. ಬೆದರಿಸಿ ಹೆಸರು ಬದಲಾಯಿಸಿದರು. ಆದರೆ ತಂದೆ, ಮನೆ ವಿಳಾಸ ಹಾಗೇ ಇತ್ತಂತೆ!

ಅಂದರೆ ಮಲ್ಲಿಕಾರ್ಜುನನ ತಂದೆ ಯಾರು?

ನಾಮಪತ್ರ ತಿರಸ್ಕೃತ ಆಯಿತು.

ಜಾತ್ಯತೀತ ಜನತಾದಳದಲ್ಲಿ ಇಂತಹ ಅಪಚಾರ ನಡೆಯುವುದಕ್ಕೆ ಸಾಧ್ಯವೇ ಇಲ್ಲ! ಅಪ್ಪಮಕ್ಕಳು ಬಿಟ್ಟರೆ ಪಾರ್ಟಿನೇ ಇರೋಲ್ವಲ್ಲ!

ಅಂದಹಾಗೆ ಅಪ್ಪಮಕ್ಕಳು ಇಬ್ಬರಿಗೂ ಟಿಕೀಟು ನೀಡಲು ಸಾಧ್ಯ ಇಲ್ಲ ಅಂತದೆ ಕಾಂಗ್ರೆಸ್. ಇದೇ ಮಾನದಂಡ ಮುಂದೂ ಅನುಸರಿಸುತ್ತಾ.... ಅಮ್ಮ, ಮಗ ಇಬ್ಬರಿಗೂ ಸೀಟು ಕೊಡೋಕೆ ಸಾಧ್ಯ ಇಲ್ಲ ಅಂದರೆ... ಕಾಂಗ್ರೆಸ್.... ಗೋವಿಂದೋ ಗೋವಿಂದ ಅಲ್ವಾ!

* * * *

'ಬಂಗಾರಪ್ಪಗೆ ಶಿಕಾರಿಪುರನೇ ಯಾಕೆ ಬೇಕಿತ್ತು?'

ಯಡಿಯೂರಪ್ಪ ಪ್ರಶ್ನೆ.

'ನೀನು ಇಲ್ಲೇ ಯಾಕೆ ನಿಂತೆ' ಅಂತ ಯಾವ ಅಭ್ಯರ್ಥಿಯನ್ನಾದರೂ ಕೇಳಬಹುದೇನೋ. ಯಾರು ಎಲ್ಲಿ ನಿಲ್ಲಬೇಕು ಅನ್ನೋದಕ್ಕೂ ಯಡ್ಡಿ ಪರ್ಮಿಷನ್ ಬೇಕಾ? ಪಾಪ ಅವರಿಗೆ ಭಯ ಕಾಡುತ್ತಿದೆ. ಬಂಗಾರಪ್ಪ ಎದುರು ಸೋಲುಣ್ಣಬೇಕಾಗುತ್ತಲ್ಲಾ, ಅನ್ನುವ ಭಯ.

'ಬಂಗಾರಪ್ಪ ಶಿಕಾರಿಪುರದಲ್ಲಿ ಠೇವಣಿ ಕಳೆದುಕೊಳ್ಳುವುದು ಖಚಿತ' ಅಂತ ಊರು ಕಿತ್ತು ಹೋಗುವ ಹಾಗೆ ಕಿರುಚಿದರಲ್ಲ... ಠೇವಣಿ ಹೋಗುವುದು ಯಾರಿಗೆ ಅಂತ ಏನಾದರೂ ಅನುಮಾನ ಬಂದಿದೆಯೋ ಯಡ್ಡಿಯವರೆ..... ■

ಚುನಾವಣೆ 2008

ಚಾಮರಾಜನಗರ: ಬಿಜೆಪಿಯ ಮಾಟವೂ ಬಿಎಸ್‌ಪಿಯ ತಂತ್ರವೂ


ಈ ಜಿಲ್ಲೆಯಲ್ಲಿ ಬಂಡಾಯಗಾರರ ಮತ್ತು ಪಕ್ಷಾಂತರಿಗಳ ಆರ್ಭಟವೇ ಹೆಚ್ಚಾಗಿದ್ದು ಇಂತಹ ಕೊಚ್ಚೆಯಲ್ಲಿ ಒಂದೆರಡು ಕಮಲಗಳು ಅರಳುವ ಸಾಧ್ಯತೆ ಕಂಡುಬರುತ್ತಿದೆ.

ಗುಂಡ್ಲುಪೇಟೆ: ನಿರಂಜನಕುಮಾರ್ ಮುಂದೆ



ಮಾಜಿ ಮಂತ್ರಿ ಎಚ್.ಎಸ್. ಮಹದೇವ ಪ್ರಸಾದ್ ಸತತ ಮೂರು ಬಾರಿ ಶಾಸಕರಾಗಿ ಮೆರೆದ ಈ ಕ್ಷೇತ್ರದಲ್ಲಿ ಈ ಬಾರಿ ಅವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದಾರೆ. ಆದರೆ ಅವರ ಗೆಲುವು ಸುಲಭವಲ್ಲ ಅನ್ನುವುದು ಸ್ವತಃ ಅವರಿಗೆ ತಿಳಿದಿರುವ ಸತ್ಯ. ಬಿಜೆಪಿಯಿಂದ ಜಿಲ್ಲಾ ಪಂಚಾಯ್ತಿ ಸದಸ್ಯ ಸಿ.ಎಸ್. ನಿರಂಜನಕುಮಾರ್, ಜೆಡಿಎಸ್‌ನಿಂದ ಕೊಡಸೋಗೆ ಶಿವಬಸಪ್ಪ, ಬಿಎಸ್‌ಪಿಯಿಂದ ವೆಂಕಟರಮಣಶೆಟ್ಟಿ, ಪಕ್ಷೇತರರಾಗಿ ಸುಭಾಷ್ ಕಣದಲ್ಲಿದ್ದಾರೆ. ಕೊನೆಯಲ್ಲಿ ಜಿದ್ದಾಜಿದ್ದಿ ನಡೆಯುವುದು ಬಿಜೆಪಿಯ ನಿರಂಜನಕುಮಾರ್ ಹಾಗೂ ಎಚ್.ಎಸ್. ಮಹದೇವ ಪ್ರಸಾದ್ ನಡುವೆಯೇ.

ಜೆಡಿಎಸ್‌ನಲ್ಲಿದ್ದಾಗ ಮಹದೇವ ಪ್ರಸಾದ್ ಕೊಟ್ಟ ಕಿರುಕುಳದಿಂದಾಗಿ ಇವತ್ತು ಕಾಂಗ್ರೆಸ್‌ನ ಎಲ್ಲಾ ಕಾರ್ಯಕರ್ತರು ಬಿಜೆಪಿಯ ನಿರಂಜನಕುಮಾರ್‌ನ ಬೆಂಬಲಕ್ಕೆ ನಿಂತಿರುವುದನ್ನು ನೋಡಿದರೆ ಕಾಂಗ್ರೆಸ್‌ಗೆ ಕಷ್ಟ ಅನ್ನಿಸುವಂತಿದೆ. ಹಾಗಾಗಿ ಬಿಜೆಪಿಯ ನಿರಂಜನಕುಮಾರ್ ಗುಂಡ್ಲುಪೇಟೆ ಕ್ಷೇತ್ರದಲ್ಲಿ ಗೆಲ್ಲುವ ಕುದುರೆಯಾಗಿ ಕಾಣುತ್ತಿದ್ದಾರೆ.



ಚಾಮರಾಜನಗರ: ಉಪ್ಪಾರರ ನಿರ್ಧಾರ


ವಾಟಾಳ್ ನಾಗರಾಜ್ ಕಳೆದ ಬಾರಿ ಆಯ್ಕೆಯಾಗಿದ್ದ ಚಾಮರಾಜನಗರ ಕ್ಷೇತ್ರದಲ್ಲಿ ಈ ಬಾರಿ ಚುನಾವಣಾ ಕಣದಲ್ಲಿ 12 ಜನ ಅಭ್ಯರ್ಥಿಗಳಿದ್ದರೂ ಜಿದ್ದಾಜಿದ್ದಿ ಸ್ಪರ್ಧೆ ಏರ್ಪಡುವುದು ಮಾತ್ರ ಕಾಂಗ್ರೆಸ್‌ನ ಪುಟ್ಟರಂಗ ಶೆಟ್ಟಿ, ಜೆಡಿಎಸ್‌ನ ಮಂಗಲ ಶಿವಕುಮಾರ್ ಹಾಗೂ ಬಿಜೆಪಿಯ ಬೆಂಕಿ ಮಹದೇವ್ ನಡುವೆ. ಉಪ್ಪಾರರ ಮತಗಳಿಂದಲೇ ಗೆದ್ದು ಅಸೆಂಬ್ಲಿಗೆ ಹೋಗುತ್ತಿದ್ದ ವಾಟಾಳ್ ನಾಗರಾಜ್ ಅವರಿಗೆ ಈ ಬಾರಿಯೂ ಗೆಲ್ಲಬೇಕು ಎಂಬ ಆಸೆ ಇದ್ದರೂ ಅದು ಕಷ್ಟ. ಜೆಡಿಎಸ್, ಕಾಂಗ್ರೆಸ್ ಹಾಗೂ ಬಿಎಸ್‌ಪಿ ಈ ಮೂರು ಪಕ್ಷಗಳಿಂದ ಸ್ಪರ್ಧಿಸಿರುವವರು ಉಪ್ಪಾರ ಜನಾಂಗದವರೇ ಆಗಿರುವುದರಿಂದ ವಾಟಾಳ್‌ರ ಗೆಲುವು ಕಷ್ಟ. ಈ ಮೂರು ಪಕ್ಷಗಳ ಅಭ್ಯರ್ಥಿಗಳ ಬೆಂಬಲಿಗರ ಮತ ಒಡೆದು ಕೊನೆಗಳಿಗೆಯಲ್ಲಿ ಬಿಜೆಪಿಯ ಬೆಂಕಿ ಮಹದೇವು ಚಾಮರಾಜನಗರ ಕ್ಷೇತ್ರದಿಂದ ಆಯ್ಕೆಯಾದರೂ ಆಶ್ಚರ್ಯವಿಲ್ಲ.

ಕೊಳ್ಳೇಗಾಲ: ಗೆಲುವಿನ ಅಂಚಿನಲ್ಲಿ ಮಹೇಶ್



ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಕಣದಲ್ಲಿ ಒಂಭತ್ತು ಜನ ಅಭ್ಯರ್ಥಿಗಳಿದ್ದರೂ ನೇರ ಸ್ಪರ್ಧೆ ಇರುವುದು ಮಾತ್ರ ಬಿಎಸ್‌ಪಿಯ ಎನ್. ಮಹೇಶ್ ಹಾಗೂ ಬಿಜೆಪಿಯ ಎಸ್. ಮಹೇಂದರ್ ನಡುವೆ. ಮಾಜಿ ಶಾಸಕ ಎಸ್. ಬಾಲರಾಜ್ ಈಗ ಪಕ್ಷೇತರರಾಗಿ ಸ್ಪರ್ಧಿಸಿದ್ದು ಠೇವಣಿ ಉಳಿಸಿಕೊಳ್ಳಲು ಕಷ್ಟಪಡುತ್ತಿದ್ದಾರೆ. ಕ್ಷೇತ್ರ ಪುನರ್‌ವಿಂಗಡಣೆಯ ರಭಸದಲ್ಲಿ ಸಂತೆಮರಳ್ಳಿ ಕ್ಷೇತ್ರ ಈಗ ಕೊಳ್ಳೇಗಾಲಕ್ಕೆ ಸೇರಿದೆ. ಸಂತೆ ಮರಳ್ಳಿಯ ಮಾಜಿ ಶಾಸಕರುಗಳಾದ ಆರ್. ಧ್ರುವನಾರಾಯಣ್ ಹಾಗೂ ಎ.ಆರ್. ಕೃಷ್ಣಮೂರ್ತಿ ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಸ್ಪರ್ಧಿಸಿದ್ದು ಅವರಿಬ್ಬರೂ ಕಾರ್ಯಕರ್ತರುಗಳ ಅಭಾವದಿಂದ ನರಳುತ್ತಿದ್ದಾರೆ.

ಅದಲ್ಲದೆ ಕೊಳ್ಳೇಗಾಲದ ಕಾಂಗ್ರೆಸ್‌ನ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಈಗ ಕಾಂಗ್ರೆಸ್ ಅಭ್ಯರ್ಥಿ ಧ್ರುವನಾರಾಯಣ್‌ರನ್ನು ಸೋಲಿಸಲು ರಣತಂತ್ರ ರೂಪಿಸಿದ್ದಾರಲ್ಲದೆ, ಬಿಜೆಪಿಯ ಎಸ್. ಮಹೇಂದರ್‌ಗೆ ತಮ್ಮ ಬೆಂಬಲ ಸೂಚಿಸಿದ್ದಾರೆ. ಇದು ಕಾಂಗ್ರೆಸ್‌ನ ಧ್ರುವನಾರಾಯಣ್‌ರಿಗೆ ಬಿಸಿ ತುಪ್ಪವಾಗಿದೆ. 1,27,000 ದಷ್ಟು ಮತದಾರರನ್ನು ಹೊಂದಿರುವ ಕೊಳ್ಳೇಗಾಲ ಕ್ಷೇತ್ರದವರಿಗೆ ಪ್ರಮುಖ ಪಕ್ಷದವರು ಟಿಕೆಟ್ ನೀಡದೆ ಕೇವಲ 52,000 ಮತದಾರಿರುವ ಸಂತೆಮರಳ್ಳಿಯ ಧ್ರುವ ಹಾಗೂ ಎ.ಆರ್.ಕೆ.ಯವರಿಗೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಟಿಕೆಟ್ ನೀಡಿರುವುದರಿಂದ ಅತ್ಯಧಿಕ ಮತಗಳಿರುವ ಕೊಳ್ಳೇಗಾಲ ಹಾಗೂ ಯಳಂದೂರು ಭಾಗದ ಜನರು ಅಸಮಾಧಾನಗೊಂಡಿದ್ದಾರೆ. ಇದು ಬಿಎಸ್‌ಪಿಯ ಎನ್. ಮಹೇಶ್ ಅವರಿಗೆ ವರದಾನವಾಗಿದೆ. ಕಳೆದ ಬಾರಿಯ ಚುನಾವಣೆಯಲ್ಲಿ ಅಲ್ಪಮತಗಳ ಅಂತರದಿಂದ ಸೋತಿದ್ದ ಮಹೇಶ್ ಸ್ಥಳೀಯ ಎಂಬ ಕಾರಣದಿಂದ ಕ್ಷೇತ್ರದಾದ್ಯಂತ ಜನರ ಬೆಂಬಲ ಗಳಿಸಿಕೊಂಡಿದ್ದಾರೆ. ಕ್ಷೇತ್ರದಲ್ಲಿದ್ದುಕೊಂಡು ಹಲವಾರು ಜನಪರ ಹೋರಾಟಗಳಲ್ಲಿ ಭಾಗವಹಿಸಿದ ಕಾರಣಕ್ಕೆ ಮಹೇಶ್ ಬಗ್ಗೆ ಜನರ ಅನುಕಂಪವೂ ಇದೆ. ಕೊನೆಯಲ್ಲಿ ಬಿಜೆಪಿಯ ಎಸ್. ಮಹೇಂದರ್ ಹಾಗೂ ಬಿಎಸ್‌ಪಿಯ ಎನ್. ಮಹೇಶ್ ಇವರಿಬ್ಬರ ನಡುವೆ ನೇರ ಸ್ಪರ್ಧೆ ಏರ್ಪಡುವುದು ಗ್ಯಾರಂಟಿ.



ಹನೂರು: ಆನೆ ಬಲ ಪರಿಮಳರಿಗಿಲ್ಲ



ಕುಟುಂಬ ರಾಜಕಾರಣಕ್ಕೆ ಹೆಸರಾಗಿರುವ ಹನೂರು ಕ್ಷೇತ್ರದಲ್ಲಿ ಈ ಬಾರಿ 14 ಜನ ಕಣದಲ್ಲಿದ್ದರೂ ಸ್ಪರ್ಧೆ ಇರುವುದು ಮಾತ್ರ ಕಾಂಗ್ರೆಸ್‌ನ ಆರ್. ನರೇಂದ್ರ, ಬಿಎಸ್‌ಪಿಯ ಪರಿಮಳಾ ನಾಗಪ್ಪ ಹಾಗೂ ಬಂಡಾಯ ಅಭ್ಯರ್ಥಿ ಪೊನ್ನಾಚಿ ಮಹದೇವಸ್ವಾಮಿಯ ನಡುವೆ. ಹುಲ್ಲಿನ ಹೊರೆ ಇಳಿಸಿ ಆನೆ ಏರಿದ ಮಾಜಿ ಶಾಸಕಿ ಪರಿಮಳಾ ನಾಗಪ್ಪ ಈ ಬಾರಿ ಗೆಲ್ಲಲೇಬೇಕೆಂದು ಎಂತಹ ಆಟ ಆಡಿದರೂ ಬಂಡಾಯ ಎದ್ದಿರುವ ಪೊನ್ನಾಚಿ ಮಹದೇವಸ್ವಾಮಿ ಹೊಡೆತದಿಂದ ಅವರು ತಪ್ಪಿಸಿಕೊಳ್ಳುವುದು ಕಷ್ಟ. ಇನ್ನುಳಿದಂತೆ ಜೆಡಿಎಸ್‌ನಿಂದ ಕಣದಲ್ಲಿರುವ ಕೃಷ್ಣಕುಮಾರ್ ಆಟಕ್ಕುಂಟು ಲೆಕ್ಕಕ್ಕಿಲ್ಲ. ಸದ್ಯಕ್ಕೆ ಗೆಲ್ಲುವ ಕುದುರೆಯಾಗಿ ಕಾಣುತ್ತಿರುವುದು ಕಾಂಗ್ರೆಸ್‌ನ ಆರ್. ನರೇಂದ್ರ.

■ ಕೊಳ್ಳೇಗಾಲ ಮಾಳಿಗೆ


ದುಡ್ಡಿನ ದರ್ಪದಲ್ಲಿ ದರ್ಶನಾಪುರ



ಶಹಾಪುರ ಮತ ಕ್ಷೇತ್ರದ ಪುಢಾರಿ ಗಣಂಗಳು ದರ್ಶನಾಪುರನ ಹಿಂದೆ ನಾಯಿಗಳಂತೆ ತಿರುಗಾಡುತ್ತಿದ್ದಾರೆ. ಆದರೆ ದರ್ಶನಾಪುರ ಮಾತ್ರ ಯಾರಿಗೂ ಸೊಪ್ಪು ಹಾಕದೆ "ಬಾಡು ಹೇಗೂ ನನ್ನ ಬಳಿ ಇದೆ. ಎಲ್ಲರೂ ನನ್ನ ಮರ್ಜಿ ಕಾಯಲು ಬಂದೇ ಬರುತ್ತಾರೆ" ಎಂಬ ಉಮೇದಿನಲ್ಲಿ ಕುಳಿತಿದ್ದಾನೆ.

"ದರ್ಶನಾಪುರ ಅರವತ್ತಮೂರು ಕೋಟಿ ರೂಪಾಯಿಗಳ ಒಡೆಯ" ಎಂದು ದೇವೇಗೌಡ ಇತ್ತೀಚೆಗೆ ಭೇಗುಡಿಗೆ ಬಂದಾಗ ಹೇಳಿದಂದಿನಿಂದಲೂ ಶಹಾಪುರ ಮತ ಕ್ಷೇತ್ರದ ಪುಢಾರಿಗಣಂಗಳು ದರ್ಶನಾಪುರನ ಹಿಂದೆ ನಾಯಿಗಳಂತೆ ತಿರುಗಾಡುತ್ತಿದ್ದಾರೆ. ಆದರೆ ದರ್ಶನಾಪುರ ಮಾತ್ರ ಯಾರಿಗೂ ಸೊಪ್ಪು ಹಾಕದೆ "ಬಾಡು ಹೇಗೂ ನನ್ನ ಬಳಿ ಇದೆ. ಎಲ್ಲರೂ ನನ್ನ ಮರ್ಜಿ ಕಾಯಲು ಬಂದೇ ಬರುತ್ತಾರೆ" ಎಂಬ ಉಮೇದಿನಲ್ಲಿ ಕುಳಿತಿದ್ದಾನೆ. ಎಲ್ಲರೂ ವಿವಿಧ ಪಕ್ಷಗಳ ಟಿಕೆಟ್‌ಗಾಗಿ ಒಂದೇ ಸಮ ಬಡಿದಾಡುತ್ತಿದ್ದರೆ, ಪೇಮೆಂಟ್ ಖೋಟಾದಲ್ಲಿ ಮೊದಲೇ ತನ್ನ ಟಿಕೆಟ್ ಫಿಕ್ಸ್ ಮಾಡಿಕೊಂಡಿರುವ ದರ್ಶನಾಪುರ ಮಾತ್ರ ತಲೆ ಬಿಸಿಮಾಡಿಕೊಳ್ಳದೆ ಅಡ್ಡಾಡುತ್ತಿದ್ದಾನೆ.

ಯಾವುದೇ ಪಕ್ಷಕ್ಕೆ ಎಂದೂ ನಿಷ್ಠನಾಗಿಲ್ಲದ ದರ್ಶನಾಪುರ ಅಪ್ಪಟ ಅವಕಾಶವಾದಿ ರಾಜಕಾರಣಿ. ತನಗೆ ಬೇಕೆಂದಾಗ ಸಿಕ್ಕವರ ತಲೆಯ ಮೇಲೆ ಛತ್ರಿ ಹಿಡಿಯುವ ಈತ ಕೆಲವು ದಿನ ಕುಮಾರಸ್ವಾಮಿಯ ಛತ್ರಿಯಾಗಿದ್ದರು. ಲೋಕಾಯುಕ್ತರು ದರ್ಶನಾಪುರನಿಗೆ ಕ್ಯಾಕರಿಸಿ ಉಗುಳಿದಾಗಲೂ, ಪಾಪ ಕುಮಾರಸ್ವಾಮಿ ಸಾವರಿಸಿಕೊಂಡಿದ್ದರು. ಅಂಥವರನ್ನು ಈಗ ನಡು ನೀರಿನಲ್ಲಿ ಕೈಬಿಟ್ಟು ಕಾಂಗ್ರೆಸ್ಸಿಗೆ ಓಡೋಡಿ ಬಂದಿದ್ದಾನೆ.



ಮಲ್ಲಣ್ಣಗೌಡ ಉಸ್ತಾರ್

ಇದರಲ್ಲಿ ದರ್ಶನಾಪುರನ ಲೆಕ್ಕಾಚಾರವೇ ಅಡಗಿದೆ. ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆಯವರನ್ನು ಬುಟ್ಟಿಗೆ ಹಾಕಿಕೊಂಡರೆ ಸಾಕು, ತಾನು ಎಲ್ಲವನ್ನೂ ನಿಭಾಯಿಸಬಹುದು ಎಂಬುದು ದರ್ಶನಾಪುರನ ಗೇಮ್ ಪ್ಲಾನ್. ಹೇಗೂ ಜೇವರ್ಗಿ ಮತಕ್ಷೇತ್ರದ ಧರ್ಮಸಿಂಗ್ ದೈಹಿಕವಾಗಿ ಮೆತ್ತಗಾಗಿದ್ದಾರೆ. ಬಿ.ಆರ್.ಪಾಟೀಲ್ ಇದ್ದರೂ ತನ್ನಂತೆ ರೊಕ್ಕಸ್ಥ ಆಸಾಮಿ ಅಲ್ಲ, ಆದರೆ ಯಾದಗಿರಿಯ ಕಾಂಗ್ರೆಸ್ ಅಭ್ಯರ್ಥಿಯಾದ ಡಾ. ಮಾಲಕರೆಡ್ಡಿ ಗೆದ್ದು ಬಂದರೆ ತನಗೆ ಕುತ್ತು ತಪ್ಪಿದ್ದಲ್ಲ ಎಂದು ಯೋಚಿಸಿರುವ ದರ್ಶನಾಪುರ ಈಗ ತನ್ನ ಹಿಂಬಾಲಕರ ಮೂಲಕ ಡಾ. ಮಾಲಕರೆಡ್ಡಿಯವರ ವಿರುದ್ಧ ಮತ ಚಲಾಯಿಸುವಂತೆ ಮಸಲಾಯಿಸುತ್ತಿದ್ದಾನೆ. ಇದು ದರ್ಶನಾಪುರನ ಪಕ್ಷನಿಷ್ಠೆಯ ವರಸೆ!

ಈ ಬಾರಿ ತಾನು ಏನೇ ಲಾಗ ಹೊಡೆದರೂ ಶಹಾಪುರ ಮತಕ್ಷೇತ್ರದಿಂದ ಗೆದ್ದು ಬರುವುದು ಕಷ್ಟ ಎಂದು ದರ್ಶನಾಪುರನಿಗೆ ಗೊತ್ತಿತ್ತು. ಬಿಜೆಪಿಗೆ 'ವಿಶ್ವಾಸಘಾತ' ಮಾಡಿದ ದೇವೇಗೌಡರ ಜೆಡಿಎಸ್‌ನಲ್ಲಿ ಉಳಿಯುವುದೂ ತನಗೆ ಮೈನಸ್ ಪಾಯಿಂಟ್ ಎಂಬುದೂ ಗೊತ್ತಿತ್ತು. ಆದ್ದರಿಂದ ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಹೊಡೆಯಬೇಕೆಂದು ಹೊಂಚುಹಾಕಿದ ದರ್ಶನಾಪುರ ಕಾಂಗ್ರೆಸ್ ಪಕ್ಷಕ್ಕೆ ಹಾರಿದ.

ಮಾನಪ್ಪ ವಜ್ಜಲ ಅನಿವಾರ್ಯ ಆಯ್ಕೆ

ರಾಯಚೂರು ಜಿಲ್ಲೆಯ ಲಿಂಗಸೂಗುರು ಈಗ ಮೀಸಲು ಕ್ಷೇತ್ರವಾಗಿ ಪರಿವರ್ತಿತವಾಗಿರುವುದರಿಂದ ಈ ಬಾರಿ ಇಲ್ಲಿನ ಜನರಿಗೆ ಬಸವರಾಜ್ ಪಾಟೀಲ್ ಅನ್ವರಿ ಮತ್ತು ಅಮರೇಗೌಡ ಬಯ್ಯಾಪುರ ಎಂಬ ಎರಡು ಮದವೇರಿದ ಗಜಗಳಿಂದ ಬಿಡುಗಡೆ ಸಿಕ್ಕಂತಾಗಿದೆ.

ಇವರಿಬ್ಬರಿಗೂ ಏಕಕಾಲಕ್ಕೆ ಇಲ್ಲಿಂದ ಗೇಟ್ ಪಾಸ್ ಸಿಕ್ಕಿರುವುದರಿಂದ ಈಗ ಇಲ್ಲಿನ ರಾಜಕೀಯ ನಿರುಮ್ಮಳವಾಗಿದೆ. ಈಗ ಸುರಪುರ ತಾಲ್ಲೂಕಿನ ವಜ್ಜಲದ ಮಾನಪ್ಪ ಎಂಬ ಒಡ್ಡರ ಕೋಮಿನ ವ್ಯಕ್ತಿ ಇಲ್ಲಿ ಸಮರ್ಥ ಅಭ್ಯರ್ಥಿಯಂತೆ ಗೋಚರಿಸುತ್ತಿದ್ದಾನೆ. ಸುಮಾರು ಮೂರ್ನಾಲ್ಕು ತಿಂಗಳುಗಳಿಂದಲೂ ಲಿಂಗಸೂಗೂರಿನಲ್ಲಿ ಠಿಕಾಣಿ ಹೂಡಿ ತನ್ನ ಗ್ರೌಂಡ್ ರೆಡಿಮಾಡಿಕೊಂಡಿರುವ ಈತ ಮೊದಮೊದಲು ಕಾಂಗ್ರೆಸ್‌ದಿಂದ ಟಿಕೆಟ್ ಪಡೆದುಕೊಳ್ಳಲು ಪ್ರಯತ್ನಿಸಿದ. ಅದು ಸಿಗದೆ ಹೋದಾಗ ಅನಿವಾರ್ಯವೆಂಬಂತೆ ಬಿಜೆಪಿಯಿಂದ ಸ್ಪರ್ಧೆಗೆ ಇಳಿದಿದ್ದಾನೆ. ಈಗಾಗಲೇ ಬಿಜೆಪಿ ಪರವಾದ ಅಲೆಯು ಲಿಂಗಸೂಗೂರಿನಲ್ಲಿ ಬೀಸುತ್ತಿದೆಯಲ್ಲದೆ, ಅವರಿವರ ಮರ್ಜಿಕಾಯ್ದು ತಾನು ಲಿಂಗಸೂಗೂರಿನ ನಿವಾಸಿ ಎಂದು ಭಾಸವಾಗುವಂತೆ ಮಾನಪ್ಪ ನಡೆದುಕೊಳ್ಳುತ್ತಿದ್ದಾನೆ. ನಿಜಕ್ಕೂ ಸಭ್ಯನಾದ, ಕೊಡುಗೈಯಾಗಿರುವ ವಜ್ಜಲ ಮಾನಪ್ಪ ಅನಿವಾರ್ಯ ಆಯ್ಕೆಯಾಗಬಹುದೆನಿಸುತ್ತದೆ.

ಚುನಾವಣಾ ಕಣದಲ್ಲಿ ಟಿ.ಎಲ್. ನಾಯಕ ಎಂಬ ನಿವೃತ್ತ ತಹಶೀಲ್ದಾರ್ ಇದ್ದನಾದರೂ ಆತನ ಬೇರುಗಳು ಈ ಕ್ಷೇತ್ರದಲ್ಲಿ ಆಳವಾಗಿ ಇಳಿದೇ ಇಲ್ಲ. ಈತ ಸಭ್ಯನಾಗಿದ್ದರೂ ರಿಜರ್ವ್ ಗುಣಗಳಿಂದ ಸಹಜವಾಗಿ ಎಲ್ಲರೊಂದಿಗೆ ಬೆರೆಯದ ವ್ಯಕ್ತಿ. ವಸಂತಕುಮಾರ ಎಂಬ ಕ್ಯಾಂಡಿಡೇಟ್ ಸಂಸದ ವೆಂಕಟೇಶ್ ನಾಯಕ್ ಅಭ್ಯರ್ಥಿ. ಅಮರೇಶ್ ನಾಯಕಗೆ ರಾಯಚೂರು ಗ್ರಾಮೀಣದ ಕಾಂಗ್ರೆಸ್ ಟಿಕೆಟ್ ಕಟ್ ಮಾಡಿಸಿ ಅವರ ಸಹೋದರ ರಾಯಪ್ಪ ನಾಯಕಗೆ ಕೊಡಿಸಿದ ಸಿಟ್ಟು ಅಮರೇಶ್ ನಾಯಕಗೆ ಇನ್ನೂ ಹೋಗಿಲ್ಲ. ಹೇಗಾದರೂ ಸೈ ವೆಂಕಟೇಶ್ ನಾಯಕ ಸೂಚಿತ ಅಭ್ಯರ್ಥಿಯನ್ನು ಮಕಾಡೆ ಮಲಗಿಸಬೇಕು ಎಂಬ ಪ್ರತಿಜ್ಞೆ ಅಮರೇಶ್ ನಾಯಕಗೆ. ಇದರಿಂದಾಗಿ ವಸಂತಕುಮಾರ ಲಿಂಗಸೂಗೂರಿನಲ್ಲಿ ಮಿಂಚುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ.



ಚುನಾವಣೆ 2008

ವೆಂಕಟೇಶ್ ನಾಯಕಗೆ ದೇವದುರ್ಗದಿಂದ ಗೇಟ್‌ಪಾಸ್ !

ತನ್ನ ರಾಜಕೀಯದ ದಿನಗಳು ಇಳಿಮುಖವಾಗುತ್ತಲೆ ತನ್ನ ಜಾಗಕ್ಕೆ ತನ್ನ ಮಕ್ಕಳೇ ಬಂದು ಕುಳಿತುಕೊಳ್ಳಬೇಕೆಂಬ ದುರಾಸೆ ಇಂದಿನ ರಾಜಕೀಯ ನಾಯಕರಲ್ಲಿ ಸರ್ವೇಸಾಮಾನ್ಯವಾಗಿದೆ. ಅಂತಹವರಲ್ಲಿ ದೇವದುರ್ಗದ ವೆಂಕಟೇಶನಾಯಕನೂ ಒಬ್ಬ.

ರಾಯಚೂರಿನ ಹಾಲಿ ಸಂಸದ ವೆಂಕಟೇಶ್ ನಾಯಕ ತನ್ನ ಕುಲಪುತ್ರ ಭಗವಂತರಾಯ ನಾಯಕನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಲು ಹರಸಾಹಸ ಮಾಡಿದ. ಆದರೆ ಭಗವಂತರಾಯ ನಾಯಕ ಎಂಬ ಈತನ ಕುಲಪುತ್ರ ಎಷ್ಟು ಕುಲಗೆಟ್ಟು ಹೋಗಿದ್ದಾನೆ ಎಂಬುದು ಕರ್ನಾಟಕದ ಜನತೆಗಷ್ಟೆ ಅಲ್ಲ ದೂರದ ದೆಹಲಿಯ ದೊರೆಸಾನಿಯ ಕಿವಿಗೂ ತಲುಪಿತ್ತು. ಶರಣಮ್ಮ ಕಾಮರೆಡ್ಡಿಯ ಮಗಳಾದ ಕನ್ಯಾಕುಮಾರಿಗೆ ಕೈಕೊಟ್ಟ ಪ್ರಕರಣದ ಕೇಸು ಉಪ್ಪಾರ ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾದಾಗಲೇ ಈತನ ಕಾಮಪಿಪಾಸೆಗೆ ಬಲಿಯಾದ ನತದೃಷ್ಟೆಯರ ಲಿಸ್ಟ್‌ಗಳು ಹೊರಬಿದ್ದವು. ಇಂಥ ಕಾಮಪೀಡಕ ಭಗವಂತರಾಯ ದೇವದುರ್ಗದ ಶಾಸಕನಾದರೆ ದೇವರೆ ಗತಿ! ಎಂದು ಇಲ್ಲಿನ ಜನ ದಂಗಾಗಿದ್ದರು.

ಈ ಎಲ್ಲ ಕಾರಣಗಳಿಂದ ವೆಂಕಟೇಶ ನಾಯಕ ಎಷ್ಟೆ ಅವಲತ್ತುಕೊಂಡರೂ ಆತನ ಮಗನಿಗೆ ಟಿಕೆಟ್ ನಿರಾಕರಿಸಲ್ಪಟ್ಟಿತು. ಆದರೆ ಜೆಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ದುರಾಸೆಯ ವೆಂಕಟೇಶ್ ನಾಯಕ "ನನ್ನ ಮಗನಿಗೆ ಟಿಕೆಟ್ ಕೊಡದಿದ್ದರೆ ನನಗಾದರೂ ಕೊಡಿ" ಎಂದು ಕಾಡಿಬೇಡಿ ಕಾಂಗ್ರೆಸ್ ಕ್ಯಾಂಡಿಡೇಟ್ ಆಗಿ ದೇವದುರ್ಗದ ಅಖಾಡಕ್ಕೆ ಇಳಿದಿದ್ದಾನೆ.

ನಾಲ್ಕು ಸಲ ಇಲ್ಲಿಂದ ಎಂಪಿಯಾಗಿರುವ ಈ ಮನುಷ್ಯ ತನ್ನ ಕ್ಷೇತ್ರಕ್ಕಾಗಿ ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ಇದೆ. ಆದರೆ ಆ ನಾಲ್ಕು ಅವಧಿಯ ಉದ್ದಕ್ಕೂ ತನ್ನ ಆರ್ಥಿಕ ಸ್ಥಿತಿಯನ್ನು ಎಷ್ಟು ಬೇಕೋ ಅಷ್ಟು ಎತ್ತರಕ್ಕೆ ಏರಿಸಿಕೊಂಡಿದ್ದಾನೆ. ರಾಯಚೂರು, ಬೆಂಗಳೂರು ಸೇರಿದಂತೆ ಹಲವಾರು ಕಡೆ ಕೋಟ್ಯಂತರ ರೂಪಾಯಿಗಳ ಆಸ್ತಿ ಮಾಡಿಕೊಂಡಿದ್ದಾನೆ. ಈತ ಮನೆಯಲ್ಲಿ ಕುಳಿತಿದ್ದರೂ ಸಂಸದರ ಅನುದಾನದಲ್ಲೇ ಶೇಕಡಾ 25 ಭಕ್ಷೀಸು ಪಡೆಯುತ್ತಾನೆ. ಪ್ರತಿ ವರ್ಷ ಈತನ ಸಂಸಾರ ಏನಿಲ್ಲವೆಂದರೂ 100 ರಿಂದ 150 ತೊಲ ಬಂಗಾರ ಖರೀದಿಸುವುದು ಗ್ಯಾರಂಟಿ.



ವೆಂಕಟೇಶ್ ನಾಯಕ್

ಇಂಥ ಸಂಪನ್ನನ ಮಕ್ಕಳು ಕೀಚಕರಾಗದೆ ಇನ್ನೇನಾಗಲು ಸಾಧ್ಯ? ದೊಡ್ಡಮಗ ಭಗವಂತರಾಯ ಹೈಟೆಕ್ ಕಾಮಪೀಡಕನಾದರೆ, ರಾಜಶೇಖರ ನಾಯಕ ಎಂಬ ಮಗದೊಬ್ಬ ಮಗ ಲೋಕಲ್ ಹಲಾಲುಕೋರ. ಇವರಿಬ್ಬರೂ ಇಷ್ಟೊಂದು ಮತಿಗೆಟ್ಟು ಹೋಗಿದ್ದರೂ ಅವರನ್ನು ಗದರಿಸದ ತಂದೆ ಅವರನ್ನೇ ಚುನಾವಣೆಗೆ ನಿಲ್ಲಿಸಿ ಶಾಸಕರನ್ನಾಗಿಸಲು ಹೊಂಚು ಹಾಕುತ್ತಾನೆಂದರೆ ಏನೆನ್ನಬೇಕು?


ಆದರೆ ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿರುವ ದೇವದುರ್ಗದ ಮತದಾರ ಜೆಡಿಎಸ್ ಟಿಕೆಟ್ ಪಡೆದಿರುವ ಶಿವನಗೌಡ ನಾಯಕನತ್ತ ಆಸೆಗಣ್ಣಿನಿಂದ ನೋಡುತ್ತಿದ್ದಾನೆ. ಈ ಶಿವನ್ನಗೌಡನ ತಂದೆ ಹಣಮಂತರಾಯ ನಾಯಕ ಹಿಂದೊಮ್ಮೆ ವೆಂಕಟೇಶ ನಾಯಕನಿಗೆ ಆಸರೆಯಾಗಿ ನಿಲ್ಲದಿದ್ದರೆ ವೆಂಕಟೇಶ್ ನಾಯಕ ಸಾರ್ವಜನಿಕ ಜೀವನವನ್ನೆ ಪ್ರವೇಶಿಸುತ್ತಿರಲಿಲ್ಲ. ಅರಕೇರಿ ಪೊಲೀಸ್ ಗೌಡರ ವಿರುದ್ಧ ಸೆಡ್ಡು ಹೊಡೆದು ವೆಂಕಟೇಶ್ ನಾಯಕರನ್ನು ಬೆಳೆಸಿದ ಪ್ರತೀತಿ ಶಿವನಗೌಡನ ತಂದೆಯವರಿಗೆ ಸೇರಬೇಕಾದದ್ದು.

ವೆಂಕಟೇಶ ನಾಯಕನ ದರ್ಪ ಮತ್ತು ದೌರ್ಜನ್ಯಗಳ ವಿರುದ್ಧ ನಿಲ್ಲುವ ತಾಕತ್ತಿರುವ ಶಿವನಗೌಡ ನಾಯಕ ಇನ್ನೂ 27 -28 ರ ಹರೆಯದ ಹುಡುಗ. ಎರಡು ಅವಧಿಗೆ ತಾಲೂಕು ಪಂಚಾಯಿತಿಯ ಅಧ್ಯಕ್ಷನಾಗಿದ್ದರೂ ಕೈ-ಬಾಯಿ ಶುದ್ಧವಾಗಿರಿಸಿಕೊಂಡಿರುವ ಯುವಕ. ಈತ ತಾಲೂಕು ಪಂಚಾಯಿತಿಯ ಉಪಾಧ್ಯಕ್ಷನಾಗಿದ್ದಾಗ ತಾಲೂಕಿನಾದ್ಯಂತ ಒಳ್ಳೆಯ ಹೆಸರನ್ನು ಪಡೆದ ಸಂಪನ್ನ. ಎಲ್ಲಾ ಜಾತಿ, ಜನಾಂಗದವರೊಂದಿಗೆ ಈತ ಬೆರೆಯುವುದರಿಂದ

ಸೇಡಂನಲ್ಲಿ ಕಮಲ ಅರಳುವ ಕ್ಷಣ !

ಮಲ್ಲಿಕಾರ್ಜುನ ಖರ್ಗೆ ಅವರ ಕೈಚೀಲ ಎಂದೇ ಹೆಸರಾಗಿರುವ ಶರಣಪ್ರಕಾಶ ಪಾಟೀಲನ ಪ್ರಕಾಶ ಅದೇಕೋ ಸೇಡಂನಲ್ಲಿ ದಿನಗಳೆದಂತೆ ಮಸುಕು ಮಸುಕಾಗುತ್ತಿದೆ. ಇದಕ್ಕೆಲ್ಲ ಉಪಸ್ಥಂಭಕವೆಂಬಂತಹ ಬೆಳವಣಿಗೆಗಳು ಸೇಡಂನ ರಾಜಕೀಯದಲ್ಲಿ ದಿನದಿಂದ ದಿನಕ್ಕೆ ನಡೆಯುತ್ತಿವೆ. ಇಷ್ಟು ದಿನ ದೂರ ಇದ್ದುಕೊಂಡು ರಾಜಕೀಯ ಮಾಡುತ್ತಿದ್ದ ಕರ್ನಾಟಕದ ಮೂಲದವನಾದರೂ ಈಗ ಸಂಪೂರ್ಣ ಆಂಧ್ರದವನಾಗಿರುವ ನರೇಶ್ ಇಲ್ಲಿನ ರಾಜಕೀಯ ಅಖಾಡಕ್ಕೆ ಇಳಿದಿದ್ದಾನೆ.


ಹೇಳಿಕೇಳಿ ಈತ ರೊಕ್ಕಸ್ಥ ತಾಂಡೂರ ಕಾಂಗ್ರೆಸ್ ಎಂಎಲ್‌ಎನ ಸಹೋದರ, ಜೊತೆ ಜೊತೆಗೆ ಕೋಳಿ ಸಮಾಜದ ಸಂಘಟಕ ಎಂಬ ಬಿರುದು ಇತ್ತೀಚೆಗೆ ಲಭ್ಯವಾಗಿದೆ. ಕೆಲ ತಿಂಗಳ ಹಿಂದೆ ಸೇಡಂನಲ್ಲಿ ಕೋಳಿ ಸಮಾಜದ ಬೃಹತ್ ಕಾರ್ಯಕ್ರಮವೊಂದನ್ನು ಏರ್ಪಡಿಸಿ ಸುಮಾರು 5-6 ಲಕ್ಷಗಳನ್ನು ತನ್ನ ಜೇಬಿನಿಂದ ಖರ್ಚುಮಾಡಿಕೊಂಡ ಆಸಾಮಿ. ಕಾಂಗ್ರೆಸ್ ಟಿಕೆಟ್‌ಗಾಗಿ ಶತಾಯಗತಾಯ ಪ್ರಯತ್ನಿಸಿ ಅದು ಸಿಗದೆ ಇದ್ದಾಗ ಈಗ ಬಂಡಾಯ ಅಭ್ಯರ್ಥಿಯಾಗಿ ನಿಂತಾಗಿದೆ.



ಶರಣಪ್ಪ ಪಾಟೀಲ

ನರೇಶ್‌ನ ಈ ಆಟ ಒಂದು ಕಡೆಯಾದರೆ, ಇನ್ನೊಂದು ಕಡೆ ಬಸವಂತರೆಡ್ಡಿ ಮೋತಕಪಲ್ಲಿ ಅತೃಪ್ತರನ್ನೆಲ್ಲ ಸೇರಿಸಿಕೊಂಡು ತೃತೀಯ ರಂಗವನ್ನು ರಚಿಸಿಕೊಂಡು ಅಖಾಡಕ್ಕೆ ಧುಮುಕಿದ್ದಾನೆ. ಈತನೂ ಮೂಲತಃ ಕಾಂಗ್ರೆಸಿಗನಾದ್ದರಿಂದ ಸಹಜವಾಗಿಯೆ ಶರಣಪ್ರಕಾಶ ಪಾಟೀಲನ ಕಾಂಗ್ರೆಸ್ ಶಕ್ತಿಗೆ ಬಲವಾದ ಹೊಡೆತ ಬೀಳಲಿದೆ. ಮತ್ತೊಂದೆಡೆ ಸತೀಶ್ ರೆಡ್ಡಿ ರಂಜೋಳ ಕಾಂಗ್ರೆಸ್‌ನಲ್ಲಿದ್ದುಕೊಂಡೂ ಬಸವಂತರೆಡ್ಡಿ ಮೋತಕಪಲ್ಲಿಯನ್ನು ಗೆಲ್ಲಿಸಬೇಕೆಂದು ಸಿದ್ಧತೆ ನಡೆಸುತ್ತಿದ್ದಾನೆ. ಈತನ ಈ ನಿರ್ಣಯ ಕೂಡ ಶರಣಪ್ರಕಾಶನ ಮೂಲ ಗುಂಪಿಗೆ ಹೊಡೆತ ಬೀಳುವುದರಲ್ಲಿ ಯಾವುದೇ ಅನುಮಾನವಿಲ್ಲ.

ಚುನಾವಣೆಗಳೇ ಘೋಷಣೆಯಾಗದ ದಿನಗಳಿಂದಲೂ ಚುನಾವಣಾ ತಯಾರಿಯನ್ನು ಭರ್ಜರಿಯಾಗಿ ಆರಂಭಿಸಿದ್ದ ಬಿಜೆಪಿಯ ರಾಜಕುಮಾರ ತೆಲ್ಕೂರ ಈಗಾಗಲೇ ಗೆದ್ದುಬಂದಿರುವ ಖುಷಿಯಲ್ಲಿದ್ದಾನೆ. ಹೇಗೂ ಸೇಡಂ ತುಂಬೆಲ್ಲ ಇರುವ ಬಿಜೆಪಿ ಅಲೆಯನ್ನು ಉಪಯೋಗಿಸಿ ಸೇಡಂಅನ್ನು ತನ್ನ ಕೈವಶ ಮಾಡಿಕೊಳ್ಳುವ ಹವಣಿಕೆಯಲ್ಲಿದ್ದಾನೆ.



ಮುಕ್ರಂ ಖಾನ್

ಮೊನ್ನೆ ಮೊನ್ನೆ
ಗ್ರೆಸ್ ಪಕ್ಷ
ವ್ವರೂ ಟಿಕೆಟ್
ವಕೊಂಡ ಮೇಲೆ
ಬರುವುದು
ವೇ ಅಲ್ಲ.
ಕೆಂದರೆ
ವದಾರನನ್ನು ದುಡ್ಡು
ಟ್ಟು
ಡುಕೊಳ್ಳಬಹುದು ಎಂಬ ನಂಬಿಕೆ
ನಾಮುರನದ್ದು.


ಶಿವ...ಖರಪ್ಪ ಪಾಟೀಲ

ಈತನ ವಿರುದ್ಧ ಅನಿವಾರ್ಯವಾಗಿ ಶಿವಶೇಖರಪ್ಪ ಟೀಲ ಶಿರವಾಳ ಜೆಡಿಎಸ್‌ನಿಂದ ಸ್ಪರ್ಧೆಗೆ ನಿಂತಿದ್ದಾನೆ. 30 ವರ್ಷಗಳಿಂದ ಶಿರವಾಳ ಕಾಂಗ್ರೆಸ್‌ನಲ್ಲಿದ್ದರೂ ನಿಗೆ ಟಿಕೆಟ್ ನೀಡದಿದ್ದರ ಬಗ್ಗೆ ಜನರ ಅನುಕಂಪ

ಬಿಜೆಪಿಯಿಂದ ಸ್ಪರ್ಧಿಸಿರುವ ಡಾ. ಮಲ್ಲಣ್ಣಗೌಡ ನಾಳ ಸಭ್ಯ ವ್ಯಕ್ತಿ. ಆದರೆ ತಾನಾಯಿತು ತನ್ನ ನಾಯಿತು ಎಂದು ಮನೆಯಲ್ಲಿ ಕುಳಿತುಕೊಂಡುದ್ದರಿಂದ ಕ್ಕೆ ಈತನ ಬಗ್ಗೆ ಸಂಪೂರ್ಣ ತೃಪ್ತಿ ಇಲ್ಲ. ಇದಲ್ಲದೆ ಯ ಬಿಜೆಪಿಯ ಪಾಳೇಯವೂ ಈತನಿಗೆ ಸಹಕಾರ ಕುತ್ತಿಲ್ಲ. ಬಿಜೆಪಿಯ ಟಿಕೆಟ್ ಆಕಾಂಕ್ಷಿಯಾಗಿದ್ದ ಮನಗೌಡ ಕೂಡ ತಟಸ್ಥವಾಗಿ ಉಳಿದಿದ್ದಾನೆ. ಈ ಪೆಟ್ಟುಗಳು ಡಾಕ್ಟರಿಗೆ ಬೀಳಬಹುದು.'

ಈ ಎಲ್ಲಾ ಬೆಳವಣಿಗೆಗಳು ಶಿವಶೇಖರಪ್ಪನ ಗೆಲುವಿನ ದಿಯನ್ನು ಸುಗಮವಾಗಿಸಿವೆ.

■ವರದಿಗಾರ

ಮತಕ್ಷೇತ್ರದಲ್ಲಿರುವ ಬರುವ ಬಹುತೇಕ ಪೀಠಗಳ ಸ್ವಾಮಿಗಳು ಇಂದು ಬಹಿರಂಗವಾಗಿಯೆ ನಗೌಡನತ್ತ ವಾಲಿಬಿಟ್ಟಿವೆ.

ಆದರೆ ವಿಪರ್ಯಾಸದ ಸಂಗತಿಯಾವುದೆಂದರೆ ಎಸ್ ಟಿಕೆಟ್ ಬಡಿಯಲು ಶಿವನಗೌಡ ಹರಸಾಹನ ಡಬೇಕಾಯ್ತು. ದೇವದುರ್ಗದ ಶನಿ ಎಂದೇ ಮಲ್ಪಡುವ ವಿಧಾನಪರಿಷತ್ ಸದಸ್ಯ ಬಸವರೆಡ್ಡಿ ಗಿ ಇಲ್ಲಿನ ಟಿಕೆಟ್‌ಅನ್ನು ಡಾ. ರಘು ಎಂಬಾತನಿಗೆ ಡಿಸಲು ಪ್ರಯತ್ನಿಸಿದ. ಇಲ್ಲಿಂದ 2000 ದಿನಕೂಲಿ ನನ್ನು ಬೆಂಗಳೂರಿಗೆ ಕರಕೊಂಡುಹೋಗಿ ಸರ್ಕಸ್ ಡಿದ. ಆದರೆ ಜಿಲ್ಲಾ ಜೆಡಿಎಸ್ ಮುಖಂಡ ಶೇಖ ವಾನ್‌ನ ಸ್ಪಷ್ಟ ನಿರ್ಧಾರ ಶಿವನಗೌಡನಿಗೆ ಟಿಕೆಟ್ ರಕುವಂತೆ ಮಾಡಿತು. ಇದರಿಂದ ಹತಾಶನಾಗಿರುವ ಗಿ ಈಗ ಶಿವನಗೌಡನನ್ನು ಸೋಲಿಸುವುದೇ ತನ್ನ ಎಂದು ಬೊಗಳುತ್ತಿದ್ದಾನೆ. ಹಿಂದೊಮ್ಮೆ ಟೇಶ್ ನಾಯಕನನ್ನು ಸೋಲಿಸುವುದು ತನ್ನ ಆದ್ಯ ವ್ಯ ಎಂದು ಬಗೆದಿದ್ದ ಈ ಶನಿ ಇದೀಗ ಶಿವನಗೌಡನ ದ್ಧ ಹಲ್ಲು ಮಸೆಯುತ್ತಿರುವುದು ತಮಾಷೆಯಾಗಿದೆ.

ಈ ಬಾರಿ ತನ್ನ ಖಾತೆ ತೆರೆಯಲು ಬಿಜೆಪಿಯೂ ಬಿಚುಹಾಕಿ ಕುಳಿತಿದೆ. ಉತ್ತಮ ಮನುಷ್ಯನಾದ ತ ಪಾಟೀಲಲಿಂದ ಬಜೆಪಿ ದೇವದುರ್ಗದಲ್ಲಿ ರಕ್ಕೆ ಬರಲಿದೆಯಾದರೂ ಅದು ಇಲ್ಲಿ ಗೆಲ್ಲುವುದು ವಾಗಿದೆ.

ಒಂದೊಮ್ಮೆ ವೆಂಕಟೇಶ್ ನಾಯಕ ಗೆದ್ದುಬಂದರೆ ಕಾಮಪೀಡಕ ಮಕ್ಕಳು ದೇವದುರ್ಗವನ್ನು ದೆವ್ವದ ವಾಗಿ ಪರಿವರ್ತಿಸಬಲ್ಲರು ಎಂಬ ಅಳುಕು ಇಲ್ಲಿನ ತೇಕರಲ್ಲಿದೆ. ಆದ್ದರಿಂದ ಅನಿವಾರ್ಯವಾಗಿ ಗೌಡ ಜನನಾಯಕನಾಗಿ ಹೊರಹೊಮ್ಮುವುದರಲ್ಲಿ ವುದೇ ಅನುಮಾನವಿಲ್ಲ. ■

ಇದಕ್ಕೆಲ್ಲ ಮುಖ್ಯ ಕಾರಣ ಜೆಡಿಎಸ್‌ನ ಟಿಕೆಟ್ ಖಾನ್‌ಗೋ ಅಥವಾ ದೇಶಮುಖ್‌ಗೋ ದು ಗೊತ್ತಾಗಿಲ್ಲದಿರುವುದು. ಇವರಿಬ್ಬರ ವಿನ ತೀವ್ರ ತಿಕ್ಕಾಟ ಹೇಗಿದೆಯೆಂದರೆ ತ್ ಮುದನಾ ಟಿಕೆಟ್ ಪಡಕೊಂಡರೆ ಖಾನ್ ಸ್ಪಂದಿಸುವುದಿಲ್ಲ. ಹಾಗೆಯೇ ಖಾನ್ ಟಿಕೆಟ್ ಪಡೆದರೆ ಮದನಾ ಸುವುದಿಲ್ಲ.

ಇವರಿಬ್ಬರ ತಿಕ್ಕಾಟ ಹಾಗೂ ಕಾಂಗ್ರೆಸ್‌ನ ಮಗಾರಿಕೆಯಿಂದ ಸಹಜವಾಗಿಯೆ ಸೇಡಂನಲ್ಲಿ ಅರಳುವ ಎಲ್ಲಾ ಲಕ್ಷಣಗಳು ಢಾಳವಾಗಿ ಚರಿಸುತ್ತಿವೆ. ಆದರೆ ರಾಜಕೀಯ ಣಿಗೆಗಳು ನಿಂತ ನೀರು ಅಲ್ಲವಲ್ಲ? ಯಾವ ಲ್ಲಿ ಏನಾಗುತ್ತದೋ? ಅದನ್ನು ಅಲ್ಲಿನ ಜಾಣ ದಾರರೆ ನಿರ್ಧರಿಸಬಲ್ಲ.

■ಸತ್ಯಂಪೇಟೆ

ಚಿಕ್ಕಮಗಳೂರು: ಗೂಳಿ ಕಾಳಗ!

ದ್ವಿತೀಯ ಹಂತದಲ್ಲಿ ಚುನಾವಣೆ ಎದುರಿಸಲಿರುವ ಚಿಕ್ಕಮಗಳೂರು ಜಿಲ್ಲೆಯನ್ನು ಕಳೆದ ಬಾರಿ ಬಾಚಿಕೊಂಡಿದ್ದ ಬಿಜೆಪಿ ಈ ಬಾರಿಯೂ ಹಾಗೆಯೇ ಮಾಡುವುದಕ್ಕೆ ಮಾಡಬಾರದ ತಂತ್ರಗಳನ್ನೆಲ್ಲಾ ಮಾಡುತ್ತಿದೆ. ಆದರೆ ಜಿಲ್ಲೆಯ ಮೇಲಿನ ಅದರ ಹಿಡಿತ ಈ ಬಾರಿ ಕೈತಪ್ಪುವಂತೆ ಕಾಣುತ್ತಿದೆ. ಕ್ಷೇತ್ರ ಪುನರ್ವಿಂಗಡಣೆಯ ಪರಿಣಾಮವಾಗಿ ಬೀರೂರು ಛಿದ್ರಗೊಂಡರೆ ಉಳಿದಂತೆ ಚಿಕ್ಕಮಗಳೂರು, ಮೂಡಿಗೆರೆ, ಶೃಂಗೇರಿ, ಕಡೂರು ಮತ್ತು ತರೀಕೆರೆ ಕ್ಷೇತ್ರಗಳಲ್ಲಿ ಬಿರುಸಿನ ರಾಜಕೀಯ ಬೆಳವಣಿಗೆಗಳು ನಡೆಯುತ್ತಿವೆ.

ಚುನಾವಣೆ 2008

ಚಿಕ್ಕಮಗಳೂರು: ಸಿಟಿ ರವಿಯ ಸಾರಾಯಿ ಕರಾಮತ್ತು!



ಸಿ.ಟಿ. ರವಿ

ಚಿಕ್ಕಮಗಳೂರು ಕ್ಷೇತ್ರದಲ್ಲಿ ಕಳೆದ ಬಾರಿ ಹಲವಾರು ಗಿಮಿಕ್ಕುಗಳನ್ನು ಮಾಡಿದ ಸಿ.ಟಿ.ರವಿ ಗೆದ್ದು ಬಂದಿದ್ದ. ಆಗ ಬಂಗಾರಪ್ಪ ಬಿಜೆಪಿ ಪಕ್ಷದಲ್ಲಿದ್ದದ್ದೂ ಕೂಡ ಆತನ ಗೆಲುವಿಗೆ ಸಹಕರಿಸಿತ್ತು. ಅಲ್ಲದೇ ಒಕ್ಕಲಿಗ ಸಮುದಾಯ ಪ್ರಾಬಲ್ಯವಿರುವ ಕೆಲವು ಪ್ರದೇಶಗಳು ಆತನಿಗೆ ಬೆಂಬಲವಾಗಿ ನಿಂತಿದ್ದವು. ಈಗ ಬಂಗಾರಪ್ಪನೂ ಪಕ್ಷದಲ್ಲಿಲ್ಲ, ಆ ಒಕ್ಕಲಿಗ ಪ್ರಾಬಲ್ಯದ ಕ್ಷೇತ್ರಗಳೂ ಕ್ಷೇತ್ರ ಪುನರ್ವಿಂಗಡನೆಯ ಪರಿಣಾಮವಾಗಿ ಬೇರೆ ಕ್ಷೇತ್ರಕ್ಕೆ ವರ್ಗಾವಣೆಯಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ ಶಾಸಕನಾದ ಮೇಲೆ ಹಳ್ಳಿಗಳನ್ನೇ ಮರೆತು ಪಕ್ಕಾ 'ಸಿಟಿ' ರವಿಯಾಗಿದ್ದು ಮತ್ತು ಜನರ ಹಿತಾಸಕ್ತಿಗಳನ್ನು ಮರೆತು ತನ್ನ ಸ್ವಂತ ಜೇಬು ತುಂಬಿಸಿಕೊಳ್ಳಲು ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದು ಆತನ ವಿರುದ್ಧ ಜನರ ಆಕ್ರೋಶವನ್ನು ಹೆಚ್ಚಿಸಿದೆ. ಈ ಎಲ್ಲಾ ವಿಘ್ನಗಳಿಂದಾಗಿ ತನಗೆ ಸೋಲು ಕಟ್ಟಿಟ್ಟ ಬುತ್ತಿ ಎಂದು ತಿಳಿದುಕೊಂಡಿರುವ ರವಿ ಕಳ್ಳ ದಾರಿಯ ಮೂಲಕವಾದರೂ ಗೆಲ್ಲಬೇಕೆಂಬ ಹಠಕ್ಕೆ ಬಿದ್ದಿದ್ದಾನೆ.

ಮೊದಲನೆಯದಾಗಿ, ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿರುವ ಲಿಂಗಾಯತ ಮತಗಳನ್ನು ತಾನೇ ಬಾಚಿಕೊಳ್ಳಬೇಕೆಂದು ಕಾಂಗ್ರೆಸ್ ಪಕ್ಷವು ಕೆ.ಬಿ.ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ನೀಡಿದಂತೆ ನೋಡಿಕೊಳ್ಳಲು ಪ್ರಯತ್ನಿಸಿದ. ಆ ನಿಟ್ಟಿನಲ್ಲಿ ರಂಭಾಪುರಿ ಮಠಕ್ಕೂ ಹೋಗಿ ಏನಾದರೂ ಮಾಡಿ ಮಲ್ಲಿಕಾರ್ಜುನ್‌ಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಿ ಎಂದು ಗೋಗರೆದ. ಆದರೆ ಅದು ಕೈಗೂಡಲಿಲ್ಲ. ಆದ್ದರಿಂದ ಈಗ ಜನರಿಗೆ ಸಾರಾಯಿಯನ್ನು ಕುಡಿಸಿಯಾದರೂ ಗೆಲ್ಲಬೇಕೆಂಬ ಹಠಕ್ಕೆ ಬಿದ್ದಿದ್ದಾನೆ. ಈತನ ಗುರು ಯಡಿಯೂರಪ್ಪ ತಾನು ಸಾರಾಯಿ ನಿಷೇಧ ಮಾಡಿದ್ದೇನೆಂದು ಕಂಡಕಂಡಲ್ಲಿ ಕಕ್ಕುತ್ತಿದ್ದಾನೆ. ಆದರೆ ಶಿಷ್ಯ ರವಿ ಮಾತ್ರ ಗೆಲ್ಲುವುದಕ್ಕಾಗಿ ಜನರಿಗೆ ಹಿಂಗ್ಗಾಮುಗ್ಗಾ ಸಾರಾಯಿ ಕುಡಿಸುತ್ತಿದ್ದಾನೆ. ಮೊನ್ನೆ ಪೊಲೀಸರು ಅಕ್ರಮ ಸಾರಾಯಿ ವಶಪಡಿಸಿಕೊಂಡಾಗ ರವಿಯ ಬಾಮೈದ ಸುದರ್ಶನ್ ಅವರ ಕಾರು ಸಿಕ್ಕಿಬಿದ್ದಿದೆ.

ಇನ್ನು ಜೆಡಿಎಸ್‌ನಿಂದ ದೇವೇಗೌಡರ ಗರಡಿಯಲ್ಲಿ ಪಳಗಿದ ಬೋಜೇಗೌಡ ಎಂಬ ಸರ್ಪ ಒಕ್ಕಲಿಗ ಸ್ಪರ್ಧಿಸುತ್ತಿದ್ದಾರೆ. ಇದರರ್ಥ ಲಿಂಗಾಯತ ಮತಗಳನ್ನು ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಬಾಚಿಕೊಂಡರೆ, ಸರ್ಪ ಒಕ್ಕಲಿಗ ಮತಗಳನ್ನು ಬೋಜೇಗೌಡ ಗಣನೀಯ ಪ್ರಮಾಣದಲ್ಲಿ ಪಡೆಯಲಿದ್ದಾರೆ. ಉಳಿದಂತೆ ಮುಸ್ಲಿಂ ಮತಗಳು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಒಡೆಯುತ್ತವೆಯಾದರೂ ಬಿಜೆಪಿಗಂತೂ ಸಿಗುವುದಿಲ್ಲ. ಸಿಪಿಐನ ಅಮ್ಜದ್ ಹಾಗೂ ಬಿಎಸ್ಪಿಯ ಪ್ರಸನ್ನ ಸ್ಪರ್ಧಿಸುತ್ತಿದ್ದಾರಾದರೂ ಅವರಿಬ್ಬರು ಆಟಕ್ಕುಂಟು ಲೆಕ್ಕಕ್ಕಿಲ್ಲ. ಇದೆಲ್ಲದರ ನಡುವೆ ರವಿಗೆ ಬಾಬಾಬುಡನ್‌ಗಿರಿಯ ಮಣ್ಣೇ ಗತಿ. ■

ಮೂಡಿಗೆರೆ: ಗೊಂದಲದ ಗೂಡು


ಬಿ.ಬಿ.ನಿಂಗಯ್ಯ



ಕುಮಾರಸ್ವಾಮಿ

ಮೂಡಿಗೆರೆ ಈ ಬಾರಿ ಯಾರ ಪಾಲಾಗುತ್ತದೆ ಎಂಬ ಪ್ರಶ್ನೆಗೆ ಉತ್ತರ ಮಾತ್ರ ಕಗ್ಗಂಟಾಗಿದೆ. ಬಿಜೆಪಿಯಿಂದ ಕುಮಾರಸ್ವಾಮಿಗೆ ಟಿಕೆಟ್ ತಪ್ಪಿಸಲು ಖುದ್ದು ಸಿಟಿ ರವಿ ಮತ್ತು ಎಂ.ಪಿ.ಪ್ರಾಣೇಶ್ ಬಹಳಷ್ಟು ಕಸರತ್ತು ನಡೆಸಿದ್ದರು. ಕಳೆದ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಕುಮಾರಸ್ವಾಮಿ ಜೆಡಿಎಸ್‌ಅನ್ನು ಬೆಂಬಲಿಸಿದ ಆರೋಪ ಹೊತ್ತಿರುವುದರಿಂದ ಈ ಬಾರಿ ಅವರ ವಿರುದ್ಧ ಬಿಜೆಪಿಯೊಳಗೇ ಸಾಕಷ್ಟು ಕೋಪವಿದೆ. ಅದೊಂದೇ ಅವರ ಸೋಲಿಗೆ ಕಾರಣವೂ ಆಗಬಹುದು.

ಜೆಡಿಎಸ್‌ನಿಂದ ಟಿಕೆಟ್ ಸಿಗದಿದ್ದುದರಿಂದ ಮಾಜಿ ಮಂತ್ರಿ ಬಿ.ಬಿ.ನಿಂಗಯ್ಯ ಕೊನೆಗಳಿಗೆಯಲ್ಲಿ ಬಿಎಸ್‌ಪಿ ಸೇರಿದ್ದಾರೆ. ಜೊತೆಗೆ ಜೆಡಿಎಸ್‌ನ ಮುಕ್ಕಾಲು ಭಾಗ ಕಾರ್ಯಕರ್ತರನ್ನೂ ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದಾರೆ. ಹೀಗಾಗಿ ಈ ಬಾರಿ ಬಿಎಸ್‌ಪಿಗೆ ಎಷ್ಟು ಜೆಡಿಎಸ್ ಓಟುಗಳು ಬರುತ್ತವೆ, ನಿಂಗಯ್ಯನವರ ಎಷ್ಟು ಓಟುಗಳು ಜೆಡಿಎಸ್‌ನಲ್ಲೇ ಉಳಿಯುತ್ತವೆ ಎಂಬುದು ಗೊಂದಲದ ಗೂಡಾಗಿದೆ.ಕಾಂಗ್ರೆಸ್‌ನಿಂದ ಮೋಟಮ್ಮ ನಿಲ್ಲುತ್ತಾರೆಂದು ನಂಬಲಾಗಿತ್ತು, ಆದರೆ ಕಡೆ ಗಳಿಗೆಯಲ್ಲಿ ಚಂದ್ರಪ್ಪ ಎಂಬ ಡಮ್ಮಿ ಕ್ಯಾಂಡಿಡೇಟ್‌ಗೆ ಟಿಕೆಟ್ ನೀಡಿದ ಕಾಂಗ್ರೆಸ್ ಅಪಹಾಸ್ಯಕ್ಕೆ ಒಳಗಾಗಿದೆ. ಮೋಟಮ್ಮ ನಿಂತಿದ್ದರೆ ಪ್ರಾಯಶಃ ಅವರಿಗೆ ಪ್ರತಿಸ್ಪರ್ಧಿಯೇ ಇರುತ್ತಿರಲಿಲ್ಲ. ಕುಮಾರಸ್ವಾಮಿಯನ್ನು ಬಿಜೆಪಿಯ ಒಳಜಗಳ ಅರ್ಧದಷ್ಟು ಮುಗಿಸಿದ್ದರೆ, ಉಳಿದರ್ಧವನ್ನು ಮೋಟಮ್ಮನ ವರ್ಚಸ್ಸು ಸೋಲಿಸುತ್ತಿತ್ತು. ಜಿ.ಪಂ. ಸದಸ್ಯ ಸಿಪಿಐ ಪಕ್ಷದ ಸಾತಿ ಸುಂದರೇಶ್ ಕೂಡ ಈ ಬಾರಿ ಕಣದಲ್ಲಿದ್ದಾರೆ. ಬಹಳ ದಿನದಿಂದ ಜನ ಹೋರಾಟದಲ್ಲಿರುವ ಇವರಿಗೆ ಒಂದಿಷ್ಟು ಜನಪ್ರಿಯತೆಯೇನೋ ಇದೆ. ಆದರೆ ಅದೆಲ್ಲಾ ಓಟುಗಳಾಗಿ ಪರಿವರ್ತನೆಯಾಗುವುದು ಕಷ್ಟ.

ಒಂದು ವಿಚಾರ ನೆನಪಿರಲಿ, ಅರವತ್ತರ ದಶಕದಲ್ಲಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಕೆ.ಎಚ್.ರಂಗನಾಥ್ ಅವರನ್ನು ಬಿಟ್ಟರೆ ಈ ಕ್ಷೇತ್ರದ ಜನ ಯಾರನ್ನೂ ಸತತವಾಗಿ ಎರಡು ಬಾರಿ ಗೆಲ್ಲಿಸಿಲ್ಲ. ■


ಶೃಂಗೇರಿ: ಜನಿವಾರಗಳ ಜಗ್ಗಾಟ


ಜೀವರಾಜ್

ಶೃಂಗೇರಿಯಲ್ಲಿ ಹಲವಾರು ಅಡೆತಡೆಗಳ ನಡುವೆಯೂ ಭಜರಂಗಿ ಜೀವರಾಜ್ ಕಣಕ್ಕೆ ಧುಮುಕಿದ್ದಾರೆ. ಪಕ್ಕಾ ಯಡ್ಡಿಯ ಚೆಡ್ಡಿ ಶಿಷ್ಯನಾದ ಜೀವರಾಜ್‌ಗೆ ಸಚೇತಕನ ಸ್ಥಾನ ಸಿಕ್ಕಾಗ ಸಿ.ಟಿ. ರವಿ ಒಳಗೊಳಗೇ ಹೊಟ್ಟೆಕಿಚ್ಚು ಪಟ್ಟುಕೊಂಡಿದ್ದ. ಈಗಲೂ ಆ ಮುಸುಕಿನ ಗುದ್ದಾಟ ಮುಂದುವರೆದಿದ್ದು ಚುನಾವಣೆಯ ಮೇಲೆ ಪರಿಣಾಮ ಬೀರಲಿದೆ. ಇಷ್ಟಲ್ಲದೆ, ತನಗೆ ಬಿಜೆಪಿಯ ಬಿ ಫಾರ್ಮ್ ಸಿಗಲಿಲ್ಲ ಎಂದು ಕೋಪಗೊಂಡ ರವಿಶಂಕರ್ ಎಂಬ ಬ್ರಾಹ್ಮಣ ಬಿಎಸ್‌ಪಿ ಸೇರಿದ್ದಾನೆ. ಅದೂಅಲ್ಲದೇ, ಜೆಡಿಎಸ್‌ನಿಂದಲೂ ಎಚ್.ಟಿ.ರಾಜೇಂದ್ರ ಎಂಬ ಮತ್ತೊರ್ವ ಬ್ರಾಹ್ಮಣ ಕಣಕ್ಕಿಳಿದು ಸೆಡ್ಡು ಹೊಡೆಯುತ್ತಿದ್ದಾನೆ. ಇವರಿಬ್ಬರು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಬ್ರಾಹ್ಮಣ ಮತಗಳನ್ನು ಕೀಳುವುದರಿಂದ ಕ್ಷೇತ್ರದಲ್ಲಿ ಬ್ರಾಹ್ಮಣ ಮತಗಳನ್ನೇ ನಂಬಿಕೊಂಡಿರುವ ಬಿಜೆಪಿಯ ಜೀವರಾಜ್‌ಗೆ ಹಿನ್ನಡೆಯಾಗುವುದಂತೂ ಖಚಿತ.

ಆಂತರಿಕ ಭಿನ್ನಮತದ ನಡುವೆಯೇ ಮಾಜಿ ಮಂತ್ರಿ ಡಿ.ಬಿ.ಚಂದ್ರೇಗೌಡ ಕಾಂಗ್ರೆಸ್ಸಿನಿಂದ ಕಣಕ್ಕಿಳಿದಿದ್ದಾರೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ತಮ್ಮ ಬೆಂಬಲಿಗ ಬೇಗಾನೆ ರಾಮಯ್ಯನಿಗೆ ಟಿಕೆಟ್ ಕೊಡಿಸಲು ಸಾಕಷ್ಟು ಲಾಬಿ ನಡೆಸಿ ವಿಫಲರಾದರು. ಆದರೂ ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗೆ, ಡಿ.ಬಿ. ಚಂದ್ರೇಗೌಡರಿಗೆ ತಮ್ಮದೇ ಆದ ಮತಬ್ಯಾಂಕ್ ಇದೆ. ಅಂತಿಮವಾಗಿ ಗೆಲುವು ಯಾರಿಗೆ ಎಂಬುದಿನ್ನೂ ಸ್ಪಷ್ಟವಾಗಿಲ್ಲ, ಒಂದಂತೂ ಸ್ಪಷ್ಟ. ಜೀವರಾಜ್‌ನ ಕುರ್ಚಿಯಂತೂ ಅಲುಗಾಡುತ್ತಿದೆ.

ಕಡೂರು: ಕೆ.ಎಂ.ಕೃಷ್ಣಮೂರ್ತಿಗೆ ಗೆಲುವಿನ ಹಾರ



ಈ ಬಾರಿ ಹೆಚ್ಚು ಪಕ್ಷಾಂತರಗಳನ್ನು ಕಂಡ ಕ್ಷೇತ್ರವಿದು. ಜೆಡಿಎಸ್‌ನ ಕೆ.ಎಂ.ಕೃಷ್ಣಮೂರ್ತಿ ಇಲ್ಲಿಂದ ಮೂರು ಬಾರಿ ಆರಿಸಿ ಬಂದಿದ್ದಾರೆ. ಕೆಟ್ಟ ರಾಜಕಾರಣ ಮಾಡದೆ, ಹೆಸರು ಕೆಡಿಸಿಕೊಳ್ಳದೇ ಉಳಿದುಕೊಂಡಿರುವ ರಾಜಕಾರಣಿಗಳಲ್ಲಿ ಇವರೂ ಕೂಡ ಒಬ್ಬರು. ಅವರಿಂದು ಸಿದ್ದರಾಮಯ್ಯನವರ ಜೊತೆ ಪಕ್ಷ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ತನ್ನದೇ ಆದ ಓಟ್ ಬ್ಯಾಂಕಿದೆ. ಅಂತೆಯೇ ಸರಳ ಸಜ್ಜನಿಕೆಗೆ ಹೆಸರಾದ ಕೃಷ್ಣಮೂರ್ತಿಯವರಿಗೂ ತಮ್ಮದೇ ಆದ ಓಟ್ ಬ್ಯಾಂಕ್ ಇದೆ. ಈಗ ಇವೆರಡೂ ಒಗ್ಗೂಡಿರುವುದರಿಂದ ಹಾಗೂ ನಿರ್ಣಾಯಕವಾಗಿರುವ ಕುರುಬ ಮತಗಳೂ ಕೃಷ್ಣಮೂರ್ತಿಯವರ ಪಾಲಾಗುವುದರಿಂದ ಕಾಂಗ್ರೆಸ್ ಗೆಲುವು ಫಲಭವಾಗಲಿದೆ.

ಜೆಡಿಎಸ್ ಇಲ್ಲಿ ಅಳಿದುಹೋಗಿರುವ ತನ್ನ ನೆಲೆಯನ್ನು ಪುನರ್‌ಸ್ಥಾಪಿಸಲು ವೈ.ಎಸ್.ವಿ. ದತ್ತಾ ಅವರನ್ನು ತಂದು ಕೂರಿಸಿದೆ. ಆದರೆ ಅದು ವರ್ಕ್‌ಔಟ್ ಆಗುತ್ತಿಲ್ಲ ಎಂಬುದು ಈಗೀಗ ಅವರಿಗೂ ಅರಿವಾಗುತ್ತಿದೆ.

ಇನ್ನು ಬಿಜೆಪಿಗೆ ಇಲ್ಲಿ ನೆಲೆಯೇ ಇಲ್ಲ. ಹಾಗಾಗಿ ಡಾ.ವೈ.ಸಿ.ವಿಶ್ವನಾಥ್ ಎಂಬ ಮುಖವಿಲ್ಲದ ಬೆದರುಬೊಂಬೆಯನ್ನು ಹುಡುಕಿ ಟಿಕೆಟ್ ನೀಡಿದ್ದಾರೆ. ಇದರಿಂದ ಸಿಟ್ಟಿಗೆದ್ದ ಬೀರೂರು ದೇವರಾಜ್ "ಪಕ್ಷದಲ್ಲಿ ಮತೀಯವಾದ, ಜಾತಿವಾದವಿದ್ದು ತಾರತಮ್ಯ ನಡೆಯುತ್ತಿದೆ" ಎಂದು ಆರೋಪಿಸಿ ಪಕ್ಷ ತೊರೆದಿದ್ದಾರೆ. ಇದರಿಂದ ಮೊದಲೇ ನೆಲೆಯಿಲ್ಲದ ಪಕ್ಷ ಅವನತಿಗೆ ಬಂದಂತಾಗಿದೆ. ■

■ಅಜೀಜ್ ಕಿರಗುಂದ

ತರೀಕೆರೆ: ಕಾಂಗ್ರೆಸ್ ಭದ್ರಕೋಟೆ

ಲಿಂಗಾಯತ ಮತ್ತು ಕುರುಬ ಮತಗಳೇ ನಿರ್ಣಾಯಕವಾಗಿರುವ ತರೀಕೆರೆ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ ಎಂದೇ ಪ್ರಸಿದ್ಧಿಯಾಗಿದೆ. ಚುನಾವಣಾ ಸಂದರ್ಭದಲ್ಲಿ ಮಾತ್ರ ಕಾಣಿಸಿಕೊಳ್ಳುವ ಹಿರಿಯ ಕಾಂಗ್ರೆಸ್ ಮುಖಂಡ ಟಿ.ವಿ.ಶಿವಶಂಕರಪ್ಪ ಎಂಬ ಹೈಟೆಕ್ ಹಣವಂತನಿಗೆ ಈ ಬಾರಿ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ ಇಲ್ಲಿ ಹೊಸ ಮುಖವನ್ನು ಪರಿಚಯಿಸಿದೆ. ಇದರಿಂದ ಕೋಪಗೊಂಡ ಬಿ.ಆರ್.ನೀಲಕಂಠಪ್ಪ ಜೆಡಿಎಸ್ ಸೇರಿ ಆ ಪಕ್ಷದ ಓಂಕಾರಪ್ಪನ ಗೆಲುವಿಗೆ ಶ್ರಮಿಸುತ್ತಿದ್ದರೆ, ಟಿ.ಎಚ್. ಶಿವಶಂಕರಪ್ಪ ತನಗೆ ಟಿಕೆಟ್ ಸಿಗಲಿಲ್ಲವೆಂಬ ಕೋಪದಲ್ಲಿ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗುತ್ತೇನೆಂದು ಬೆದರಿಸಿದ್ದರೂ ಕೊನೆಗಳಿಗೆಯಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಕಾಂಗ್ರೆಸ್‌ನ ಅಭ್ಯರ್ಥಿ ಟಿ.ವಿ.ಶಿವಶಂಕರಪ್ಪನ ವಿರುದ್ಧ ಬಿಜೆಪಿಯಿಂದ ದೇರನಾಳ್ ಸುರೇಶ್ ಮತ್ತು ಜೆಡಿಎಸ್‌ನಿಂದ ಅಡಿಕೆ ದೊರೆ ಓಂಕಾರಪ್ಪ ಸ್ಪರ್ಧಿಸಿದ್ದಾರೆ. ಇಲ್ಲಿ ಬಿಜೆಪಿಗೆ ಅಷ್ಟೊಂದು ಭದ್ರ ನೆಲೆಯೆಂಬುದೇನೂ ಇಲ್ಲ ಮತ್ತು ಜೆಡಿಎಸ್ ನೆಪಮಾತ್ರಕ್ಕೆ ಸ್ಪರ್ಧಿಸಿದೆ. ಅಷ್ಟೇ ಅಲ್ಲದೆ, ಬಿಜೆಪಿ ಮತ್ತು ಜೆಡಿಎಸ್‌ನ ಅಭ್ಯರ್ಥಿಗಳು ಸಾದ ಲಿಂಗಾಯತ ಕೋಮಿಗೆ ಸೇರಿದವರಾಗಿದ್ದು ಹಿಂದುಳಿದ, ಅಲ್ಪಸಂಖ್ಯಾತ ನೊಳಂಬ ಲಿಂಗಾಯತರ ಮತಗಳು ಸಾರಾಸಗಟಾಗಿ ಕಾಂಗ್ರೆಸ್ ಅಭ್ಯರ್ಥಿಯಾದ ಕುರುಬ ಜನಾಂಗದವರೇ ಆದ ಶಿವಶಂಕರಪ್ಪನವರಿಗೆ ಲಭಿಸಲಿದ್ದು ಅಲ್ಪ ಮತಗಳ ಅಂತರದಲ್ಲಿ ಅವರು ಗೆಲ್ಲಬಹುದು.

R B P LANKESH, Kannada Weekly Price Rs. 12/- 14-5-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.



ಆಕ್ಸಿಡೆಂಟ್ ನಂತರ?

ನಿರ್ದೇಶನದ ಬಗ್ಗೆ ಈಗ ರಮೇಶ್ ಅರವಿಂದ್‌ಗೆ ಎಷ್ಟು ವ್ಯಾಮೋಹವೆಂದರೆ ಅವರು ಸದ್ಯದಲ್ಲೇ ಮತ್ತೊಂದು ಸಿನಿಮಾ ನಿರ್ದೇಶನ ಕೆಲಸವನ್ನು ಕೈಗೆತ್ತಿಕೊಳ್ಳಲಿದ್ದಾರೆ. ಸದ್ಯಕ್ಕೆ ಅವರ ಬಳಿ ಆರು ಒಳ್ಳೆಯ ಕಥೆಗಳು ಇರುವುದರಿಂದಲೇ ಇತ್ತೀಚೆಗೆ ಅವರು ವಿಷ್ಣುವರ್ಧನ್ ಜೊತೆ ನಟಿಸಬೇಕಿದ್ದ 'ನಮ್ಮ ಯಜಮಾನ್ರು' ಚಿತ್ರದ ಒಂದು ಪಾತ್ರವನ್ನು ನಯವಾಗಿ ತಿರಸ್ಕರಿಸಿದ್ದಾರೆ.

ಅಂದಹಾಗೆ 'ಆಕ್ಸಿಡೆಂಟ್' ಚಿತ್ರದ ನಿರ್ಮಾಪಕ ರಘುರವರೇ ಈ ಚಿತ್ರವನ್ನೂ ನಿರ್ಮಿಸಲಿದ್ದಾರೆ.



ಪ್ರಮೀಳಾ 'ತಾಯಿ'

ಬಹಳ ವರ್ಷಗಳಿಂದ ಕನ್ನಡ ಸಿನಿಮಾಗಳಲ್ಲಿ ಗಯ್ಯಾಳಿಯ ಪಾತ್ರವನ್ನೋ, ಕುಯುಕ್ತಿಯ ಮಹಿಳಾ ಪಾತ್ರವನ್ನೋ ಮಾಡುತ್ತಾ ಬಂದಿರುವ ಪ್ರಮೀಳಾ ಜೋಷಾಯ್ ತಮ್ಮ 'ತಾಯಿ' ಚಿತ್ರದ ಅಭಿನಯದಿಂದ ಎಲ್ಲರನ್ನು ಚಕಿತಗೊಳಿಸುತ್ತಾರೆ.

ಕಳೆದ ಮೂವತ್ತು ವರ್ಷಗಳಿಂದ ನಟಿಸುತ್ತಿದ್ದರೂ ತನ್ನ ಮನಸ್ಸಿಗೆ ಹಿತ ನೀಡುವ ಸಿನಿಮಾವೊಂದು ಸಿಕ್ಕಿರಲಿಲ್ಲ ಎಂಬ ಕೊರಗಿನಿಂದಲೇ ಪ್ರಮೀಳಾ ಜೋಷಾಯ್ ಸ್ವತಃ ತಾವೇ ಚಿತ್ರನಿರ್ಮಾಣಕ್ಕೆ ಇಳಿದಿದ್ದರು. ಅದಕ್ಕೆ ಅವರು ಆಯ್ಕೆ ಮಾಡಿಕೊಂಡಿದ್ದು ಮ್ಯಾಕ್ಸಿಂಗಾರ್ಕಿಯವರ ಪ್ರಖ್ಯಾತ ನಾಟಕ 'ಮದರ್'. ಅದನ್ನು ಕನ್ನಡದ 'ತಾಯಿ'ಯಾಗಿ ಪರಿವರ್ತಿಸಿ ನಿರ್ದೇಶಿಸಿದವರು ಸಾಹಿತಿ ಬರಗೂರು ರಾಮಚಂದ್ರಪ್ಪ, ಕಳೆದ ವರ್ಷ 2007ರನ್ನು ಗಾರ್ಕಿ 'ಮದರ್' ಬರೆದು ಒಂದು ಶತಮಾನವಾಯಿತೆಂದು ವಿಶ್ವಾದಾದ್ಯಂತ ಆಚರಿಸಲಾಯಿತು.

ಇದು ಪ್ರಮೀಳಾ ಜೋಷಾಯ್ ಮಾತ್ರ ಅನುಭವಿಸಿರುವ ಬೇಗುದಿಯಲ್ಲ. 25 ವರ್ಷಗಳ ಕಾಲ ಕಮರ್ಷಿಯಲ್ ಚಿತ್ರಗಳಲ್ಲಿ ನಟಿಸಿದ ನಂತರ ತನ್ನ ಆತ್ಮತೃಪ್ತಿಗಾಗಿ ಜಯಮಾಲಾ 'ತಾಯಿ ಸಾಹೇಬ' ಎಂಬ ಸಿನಿಮಾ ನಿರ್ಮಿಸಿದರು. ಅದೇರೀತಿ ತಾರಾ ಕೂಡ "ಹಸೀನಾ' ಮಾಡಿದರು. ಸೌಂದರ್ಯಳಂತಹ ಪ್ರತಿಭಾವಂತೆ ಕೂಡ ತನ್ನ ಸ್ವಂತ ಹಣ ಹಾಕಿ 'ದ್ವೀಪ' ಚಿತ್ರವನ್ನು ನಿರ್ಮಿಸಬೇಕಾಗಿತ್ತು. ಈಗ ಅವರ ಹಾದಿಯಲ್ಲಿ ಪ್ರಮೀಳಾ ಜೋಷಾಯ್ ಸಾಗಿಬಂದಿದ್ದಾರೆ.

ಈಕೆಯ ಪ್ರಯತ್ನಕ್ಕೆ ನಮ್ಮ ಶುಭ ಕಾಮನೆಗಳು.



ರಿವರ್ಸ್‌ಗೇರ್‌ನಲ್ಲಿ ಗಣೇಶ?

ಗೋಲ್ಡನ್ ಬಾಯ್ ಗಣೇಶ್ ಬಗೆಗಿನ ಕ್ರೇಜ್‌ನಿಂದಲೂ 'ಅರಮನೆ' ಚಿತ್ರವನ್ನು ಮೇಲೆತ್ತಲು ಸಾಧ್ಯವಾಗುತ್ತಿಲ್ಲ ಎಂಬುದು ಗಾಂಧಿನಗರದಿಂದ ಈಗ ಕೇಳಿಬರುತ್ತಿರುವ ಮಾತು. ನಿಜಹೇಳಬೇಕೆಂದರೆ, ಈ ಚಿತ್ರ ಬಾಕ್ಸಾಫೀಸಿನಲ್ಲಿ ಆರಂಭದಿಂದಲೂ ಮುಗ್ಗರಿಸುತ್ತಾ ಸಾಗುತ್ತಿದೆ. ಇದಕ್ಕೆ ಕಾರಣ ಚುನಾವಣೆ, ಪರೀಕ್ಷೆ, ಐಪಿಎಲ್ ಕ್ರಿಕೆಟ್ ಇತ್ಯಾದಿ ಇತ್ಯಾದಿ ಎಂದು ಹಲವರು ನೆಪಗಳನ್ನು ನೀಡುತ್ತಿದ್ದರೂ ಅದು ಸತ್ಯವಲ್ಲ ಎಂಬುದು ಜನರಿಗೆ ಗೊತ್ತಾಗಿದೆ.

ಈ ಚಿತ್ರದ ಸೋಲನ್ನು ಕಂಡು ಕೆಲ ಕುಹಕಿಗಳು "ಫುಟ್ ಪಾತ್‌ನಿಂದ ಅರಮನೆಯವರೆಗೂ ಬಂದ ಗಣೇಶ್ ಈಗ ರಿವರ್ಸ್ ಗೇರ್‌ನಲ್ಲಿದ್ದಾನಾ?" ಎಂದು ತಲೆಕೆಡಿಸಿಕೊಂಡಿರುವುದಂತೂ ಸತ್ಯ!

'ಮಲ್ಲಗಂಬ' ಏರಿದ ಅರುಣ್



ಕೆಲವರ್ಷಗಳ ಹಿಂದೆ ಕಲಾನಿರ್ದೇಶಕನಾಗಿ ನೀನಾಸಂನಿಂದ ಚಿತ್ರರಂಗಕ್ಕೆ ಬಂದ ಅರುಣ್ ಸಾಗರ್ ಎಂಬ ಯುವಕ ಅಲ್ಲಲ್ಲಿ ಚಿಕ್ಕಪುಟ್ಟ ಪಾತ್ರಗಳಲ್ಲೂ ಕಾಣಿಸಿಕೊಂಡ. ಅಷ್ಟಕ್ಕೇ ತೃಪ್ತಿ ಪಡೆಯದ ಈತ ಈಗ 'ಮಲ್ಲಗಂಬ' ಎಂಬ ಚಿತ್ರದ ನಿರ್ದೇಶನವನ್ನು ಕೈಗೆತ್ತಿಕೊಂಡಿದ್ದಾನೆ.

ಈತನ ಕನಸಿಗೆ ರಾಕ್‌ಲೈನ್ ವೆಂಕಟೇಶ್ ಬೆಂಗಾವಲಾಗಿ ನಿಂತಿದ್ದಾರೆ. ಈ ಚಿತ್ರಕ್ಕೆ ಪುನೀತ್ ಅಥವಾ ವಿಜಯ್ ನಾಯಕನಟನಾಗಿ ಆಯ್ಕೆಯಾಗಬಹುದು ಎಂಬ ಮಾತು ಕೇಳಿಬರುತ್ತಿದೆ.



ಭಟ್ಟರಿಗೆ ಸಿಕ್ಕ ದ್ರಾಕ್ಷಿ!



'ಗಾಳಿಪಟ' ಯಶಸ್ವೀ ನೂರುದಿನ ಪ್ರದರ್ಶನ ಕಂಡರೂ ಅದರ ನಿರ್ದೇಶಕ ಯೋಗರಾಜ್ ಭಟ್ ಯಾಕೆ ಸೈಲೆಂಟಾಗಿದ್ದಾರೆ? ಎಂಬ ಪ್ರಶ್ನೆ ಗಾಂಧಿನಗರದ ಅನೇಕರನ್ನು ಕಾಡುತ್ತಿದೆಯಂತೆ. ಆದರೆ ಅವರಿಗೆ ಗೊತ್ತಿಲ್ಲದಿರುವುದೇನೆಂದರೆ ಪುನೀತ್ ರಾಜ್‌ಕುಮಾರ್‌ಗಾಗಿ ಭಟ್ಟರು ಒಂದು ಹೊಸ ಕತೆಯನ್ನು ಹೆಣೆದಿದ್ದಾರಲ್ಲದೆ ಅದಕ್ಕೆ ಪುನೀತ್ ತನ್ನ ಒಪ್ಪಿಗೆ ನೀಡಿದ್ದೂ ಆಗಿದೆ. ಆ ಚಿತ್ರಕ್ಕೆ ರಾಕ್‌ಲೈನ್ ವೆಂಕಟೇಶ್ ಹಣ ಸುರಿಯಲೂ ರೆಡಿಯಾಗಿದ್ದಾರೆ. ಕಳೆದ ಮೂರು ಬಾರಿ ಭಟ್ಟರ ಪಾಲಿಗೆ ಕೈಗೆಟುಕದ ದ್ರಾಕ್ಷಿಯಾಗಿದ್ದ ಪುನೀತ್ ಈಗ ಅವರ ಕೈಗೆ ಸಿಕ್ಕಿದ್ದಾರೆ.

ದ್ರಾಕ್ಷಿ ಸಿಹಿಯೋ, ಹುಳಿಯೋ ಮುಂದೆ ನೋಡೋಣ.



'ಜಂಗ್ಲಿ' ಜೋಡಿ!



'ಇಂತಿ ನಿನ್ನ ಪ್ರೀತಿಯ' ಚಿತ್ರ ಬಿಡುಗಡೆಯಾದ ದಿನವೇ "ಇನ್ನು ಮುಂದೆ ಚಿತ್ರ ಮಾಡೊಲ್ಲ" ಎಂದು ಪತ್ರಕರ್ತರ ಮುಂದೆ ಗೊಣಗಿದ್ದ ನಿರ್ದೇಶಕ ಸೂರಿ ಈಗ ವಾಸ್ತವಕ್ಕೆ ಮರಳಿದ್ದಾರೆ. ಈಗ ಬಂದಿರುವ ಸುದ್ದಿಯ ಪ್ರಕಾರ ವಿಜಯ್ ಮತ್ತು ಸೂರಿ ಮತ್ತೆ ಜೊತೆಗೂಡಿ ಹೊಸ ಚಿತ್ರವನ್ನು ಮಾಡಲು ಹೊರಟಿದ್ದಾರೆ. ಅದರ ಹೆಸರು 'ಜಂಗ್ಲಿ'. ಆ ಹೆಸರನ್ನು ಕೇಳಿದಾಕ್ಷಣ ಅದು ಕೂಡ 'ದುನಿಯಾ'ಮಾದರಿಯಲ್ಲಿರುತ್ತೆ ಎಂದು ಸುಲಭವಾಗಿ ಗ್ರಹಿಸಬಹುದು.

ಅದೇನೇ ಇರಲಿ, ಈ ಇಬ್ಬರು ಪ್ರತಿಭಾವಂತರಿಗೆ ಸದ್ಯದಲ್ಲೇ ಒಂದು ಹಿಟ್ ಚಿತ್ರ ಬೇಕಾಗಿದೆ. 'ಜಂಗ್ಲಿ' ಅವರಿಗೆ ಹೊಸ ದುನಿಯಾ ನೀಡಲಿ ಎಂದು ಆಶಿಸೋಣ.



'ಮಂದಾಕಿನಿ' ರಶ್ಮಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji...